24 ವರ್ಷಗಳಿಂದ ದೆಹಲಿಯಲ್ಲಿ ಪ್ರಕಟವಾಗುತ್ತಿರುವ ಪ್ರಪ್ರಥಮ ರಾಷ್ಟ್ರೀಯ ಕನ್ನಡ ದಿನಪತ್ರಿಕೆ

# ದೆಹಲಿ ವಾರ್ತೆ

www.dehalivaarthe.com

EDITION: NEW DELHI / CIRCULATION IN U.P. & HARYANA | EDITOR : K.R. RENU | RNI No. DELKAN/2003/10363 | ಪುಟ 8 | ಸಂಪುಟ 24 | ಸಂಚಿಕೆ 113 | ನವದೆಹಲಿ | ಬೆಲೆ ₹10 | ಅಕ್ಟೋಬರ್, 19, 2026, ಸೋಮವಾರ





# ಸ್ಟಿಂಗ್ ಆಪರೇಷನ್: ಸರ್ಕಾರದ ನಡೆ, ತನಿಖೆಯ ಪ್ರಾಮಾಣಿಕತೆ ಪ್ರಶ್ನಿಸಿದ ಎಚ್‌ಡಿಕೆ



ಹಾಸನ, ಅ.18: ಸ್ಟಿಂಗ್ ಆಪರೇಷನ್ ಪ್ರಕರಣಕ್ಕೆ ಸಂಬಂಧಿಸಿದಂತೆ ರಾಜ್ಯ ಸರ್ಕಾರದ ನಡೆ ಹಾಗೂ ತನಿಖೆಯ ಪ್ರಾಮಾಣಿಕತೆಯನ್ನು ಕೇಂದ್ರದ ಬೃಹತ್ ಕೈಗಾರಿಕೆ ಹಾಗೂ ಉಕ್ಕು ಖಾತೆ ಸಚಿವ ಎಚ್.ಡಿ.ಕುಮಾರಸ್ವಾಮಿ ಪ್ರಶ್ನಿಸಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸ್ಟಿಂಗ್ ಆಪರೇಷನ್ ಮಾಡಿರುವುದಾಗಿ ಸಂಬಂಧಪಟ್ಟ ವ್ಯಕ್ತಿಯೇ ಬಹಿರಂಗವಾಗಿ ಒಪ್ಪಿಕೊಂಡಿದ್ದರೂ ಅವರ ವಿರುದ್ಧ ಕ್ರಮ ಕೈಗೊಳ್ಳದಿರುವುದೇಕೆ, ರಾಜ್ಯ ಸರ್ಕಾರ ಆ ವ್ಯಕ್ತಿಗೆ ಗುಲಾಮಗಿರಿ ಮಾಡುತ್ತಿದೆಯೇ ಎಂದು ಪ್ರಶ್ನಿಸಿದರು.

ಪ್ರಕರಣದ ತನಿಖೆ ನ್ಯಾಯಸಮ್ಮತವಾಗಿ ನಡೆಯುವ ಬಗ್ಗೆ ಅನುಮಾನ ವ್ಯಕ್ತಪಡಿಸಿದ ಎಚ್‌ಡಿಕೆ, ಡಿಜಿಪಿ ಅವರನ್ನು ಭೇಟಿ ಮಾಡಿ ಮನವಿ ಸಲ್ಲಿಸಿದ್ದೇವೆ. ಆದರೆ, ಅಲ್ಲಿನವರ ಮುಖಭಾವ ಗಮನಿಸಿದರೆ, ಸೂಕ್ತ ತನಿಖೆ ನಡೆಯುವ ವಿಶ್ವಾಸ ಮೂಡುತ್ತಿಲ್ಲ. ತನಿಖೆಗೆ ಅಗತ್ಯ ದಾಖಲೆಗಳನ್ನು ನೀಡುವಂತೆ ಕೇಳುತ್ತಿದ್ದಾರೆ. ಸ್ಟಿಂಗ್ ಆಪರೇಷನ್ ಮಾಡಿರುವುದಾಗಿ ಸಂಬಂಧಪಟ್ಟ ವ್ಯಕ್ತಿಯೇ ಒಪ್ಪಿಕೊಂಡಿರುವಾಗ ಮತ್ತೆ ಯಾವ ದಾಖಲೆಗಳನ್ನು ನೀಡಬೇಕು ಎಂದು ಅವರು ಪ್ರಶ್ನಿಸಿದರು.

100ಕ್ಕೂ ಹೆಚ್ಚು ಪೊಲೀಸರ ಮೇಲೆ ಸ್ಟಿಂಗ್ ಆಪರೇಷನ್ ನಡೆಸಲಾಗಿದೆ. ಮಾಜಿ ಪ್ರಧಾನಿಯನ್ನು ಏಕವಚನದಲ್ಲಿ ಸಂಬೋಧಿಸುವುದರ ಜತೆಗೆ ವಿವಿಧ ಪ್ರಕರಣಗಳನ್ನು ಒಂದಕ್ಕೊಂದು ತಳುಕು ಹಾಕಲಾಗುತ್ತಿದೆ. ಇಂತಹ ವ್ಯಕ್ತಿಯನ್ನು ರಾಜ್ಯ ಸರ್ಕಾರವೇ ಪೋಷಿಸುತ್ತಿದೆ. ಕಳೆದ ಒಂದು ವಾರದಿಂದ ಗೃಹ ಸಚಿವರು ನಡೆದುಕೊಳ್ಳುತ್ತಿರುವ ರೀತಿಯನ್ನು ಗಮನಿಸಿದರೆ, ತಮ್ಮನ್ನು ಉದ್ರೇಕಗೊಳಿಸುವಂತೆ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸೂಚನೆ ನೀಡಿದ್ದಾರೆಯೇ ಎಂಬ ಅನುಮಾನ ಮೂಡುತ್ತಿದೆ ಎಂದು ತಿರುಗೇಟು ನೀಡಿದರು.

ಮಾಧ್ಯಮಗೋಷ್ಠಿಯಲ್ಲಿ ಶಾಸಕರಾದ ಎ.ಮಂಜು, ಸ್ವರೂಪ್ ಪ್ರಕಾಶ್ ಸೇರಿದಂತೆ ಜೆಡಿಎಸ್ ಪಕ್ಷದ ವಿವಿಧ ಗಣ್ಯರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

## 2028ರಲ್ಲಿ ರಾಜ್ಯದಲ್ಲಿ ಸಮ್ಮಿಶ್ರ ಸರ್ಕಾರ ಶತಸಿದ್ಧ

ನನಗೂ ಚದುರಂಗದ ಆಟ ಆಡಲು ಬರುತ್ತದೆ. ಸಮಯ ಬಂದಾಗ ದಾಳ ಮುಂದೆ ಇಡುತ್ತೇನೆ. ಈ ಬಾರಿ ಕುಮಾರಸ್ವಾಮಿಯ ಇನ್ನೊಂದು ಮುಖವನ್ನು ತೋರಿಸುತ್ತೇನೆ ಎಂದು ಎಚ್ಚರಿಕೆ ನೀಡಿದ ಅವರು, 2028ರಲ್ಲಿ ರಾಜ್ಯದಲ್ಲಿ ಸಮ್ಮಿಶ್ರ ಸರ್ಕಾರ ಅಧಿಕಾರಕ್ಕೆ ಬರುವುದು ಶತಸಿದ್ಧ. ರಾಜ್ಯದಲ್ಲಿ ಈಗ ನಡೆಯುತ್ತಿರುವ ಆಡಳಿತಕ್ಕೆ ಮುಂದಿನ ದಿನಗಳಲ್ಲಿ ಬೆಲೆ ತೆರಬೇಕಾಗುತ್ತದೆ. ಈಗ ರಾಜ್ಯದ ಜನರು ತಮಗೆ ಶಕ್ತಿ ನೀಡಿದ್ದಾರೆ. ಈ ಹಿಂದೆ ತಮಿಂದಾದ ತಪ್ಪುಗಳನ್ನೂ ಬಹಿರಂಗವಾಗಿ ಒಪ್ಪಿಕೊಂಡು ಸರಿಪಡಿಸಿಕೊಳ್ಳುವುದಾಗಿ ಹೇಳಿದ್ದೇನೆ. ಆದರೆ, ಪ್ರಸ್ತುತ ನಡೆಯುತ್ತಿರುವ ವಿಚಾರಗಳ ಕುರಿತು ತಮನ್ನು ಹೊರತುಪಡಿಸಿ ಉಳಿದವರು ಚರ್ಚೆಗೆ ಮುಂದೆ ಬರುತ್ತಿಲ್ಲ ಎಂದು ಎಚ್.ಡಿ. ಕುಮಾರಸ್ವಾಮಿ ಅಸಮಾಧಾನ ವ್ಯಕ್ತಪಡಿಸಿದರು.

## ನೈಸ್ ಯೋಜನೆ ಖರೀದಿಸಲು ಒಳಸಂಚು

ಬಹು ಕೋಟಿ ರೂ.ಗಳ ನೈಸ್ ಯೋಜನೆಯನ್ನು ಖರೀದಿಸಲು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಒಳಸಂಚು ನಡೆಸಿದ್ದಾರೆ ಎಂದು ಕೇಂದ್ರ ಸಚಿವ ಕುಮಾರಸ್ವಾಮಿ ಆರೋಪ ಮಾಡಿದರು. ನೈಸ್ ಅಕ್ರಮಗಳ ಬಗ್ಗೆ ಕಳೆದ 20 ವರ್ಷಗಳಿಂದ ದೇವೇಗೌಡರು ಹೋರಾಟ ಮಾಡುತ್ತಿದ್ದಾರೆ. ಜನಪ್ರತಿನಿಧಿಗಳು ಸರಿಯಾದ ಕ್ರಮ ತೆಗೆದುಕೊಳ್ಳದೆ ಆ ವ್ಯಕ್ತಿ ಜತೆ ಹೊಂದಾಣಿಕೆ ಮಾಡಿಕೊಂಡು ಕೋರ್ಟ್‌ಗೆ ತಪ್ಪು ಮಾಹಿತಿ ಕೊಟ್ಟರು. ಹೀಗಾಗಿ ಇಷ್ಟು ವರ್ಷಗಳಿಂದ ನೈಸ್ ಅಕ್ರಮಗಳನ್ನು ಎಸಗಲು ಅವಕಾಶ ಆಯಿತು ಎಂದು ದೂರಿದರು. ನೈಸ್ ವಶದಲ್ಲಿ ಬೆಲೆಬಾಳುವ ಭೂಮಿ ಇದೆ. ಅದು ರೈತರ ಭೂಮಿ. ಈಗ ಒಂದು ಎಕರೆಗೆ 20–30 ಕೋಟಿ ಬೆಲೆ ಬಾಳುತ್ತದೆ. ಮುಖ್ಯಮಂತ್ರಿ ಇಡೀ ನೈಸ್ ಸಂಸ್ಥೆಯನ್ನು ಸುಪರ್ದಿಗೆ ಪಡೆಯಲು ಸಂಚನ್ನು ರೂಪಿಸಿದ್ದಾರೆ ಎಂದು ಕುಮಾರಸ್ವಾಮಿ ಅವರು ಆರೋಪಿಸಿದರು.

ನನಗೆ ಅವರಿಗೆ ಅಸೂಯೆ ಇಲ್ಲ. ಹಾಗೆಂದು ನಾನು ಯಾವುದೇ ಕಾರಣಕ್ಕೂ ಮೌನಕ್ಕೆ ಶರಣಾಗಿಲ್ಲ. ನಮ್ಮ ಪಕ್ಷದ ಶಾಸಕರ ಸಂಖ್ಯೆ ಕಡಿಮೆ ಇರಬಹುದು. ರೈತ ವಿರೋಧಿ, ಜನವಿರೋಧಿ ನೀತಿಗಳಿಗೆ ಧ್ವನಿ ಎತ್ತುವುದನ್ನು ತಡೆಯಲು ಸಾಧ್ಯವಿಲ್ಲ. ಜನರ ಹೋರಾಟಕ್ಕೆ ನನ್ನ ಬೆಂಬಲವಿದೆ ಎಂದು ಅವರು ಹೇಳಿದರು.

## ನಿತ್ಯ ಪಂಚಾಂಗ 19.10.2026 ಸೋಮವಾರ



ಶ್ರೀಶಕ 1949 ಶ್ರೀ ಪರಾಭವ ನಾಮ ಸಂವತ್ಸರ, ದಕ್ಷಿಣಾಯಣ ಶರದ್ ಋತು, ಚಾಂದ್ರಮಾನ ಶ್ರಾವಣ-ಆಶ್ವಯುಜ ಮಾಸ

ಆಶ್ವಯುಜ ಶುದ್ಧ, ಅಷ್ಟಮಿ,
ಉತ್ತರಾಷಾಢ ನಕ್ಷತ್ರ,
ಸ್ವಾರೋಚಿಷ ಮನ್ವಾಧಿ
ಧರ್ಮಸ್ಥಳ ನವರಾತ್ರಿ ಸಮಾಪ್ತಿ

| ದಿನ | ರಾಹುಕಾಲ | ಯಮಗಂಡ | ಗುಳಿಕಕಾಲ |
|---|---|---|---|
| ಭಾನು | ಸ. 5.04– 6.33 | 12.00– 1.30 | 3.00– 4.00 |
| ಸೋಮ | ಬೆ. 7.20– 9.04 | 10.30–12.00 | 1.30– 3.00 |
| ಮಂಗಳ | ಮ. 3.25– 4.59 | 9.00–10.30 | 12.00– 1.30 |
| ಬುಧ | ಮ.12.16– 1.50 | 7.30– 9.00 | 10.30– 12.00 |
| ಗುರು | ಮ. 1.50– 3.29 | 6.00– 7.30 | 9.00– 10.30 |
| ಶುಕ್ರ | ಬೆ.10.42–12.16 | 3.00– 4.30 | 7.30– 9.00 |
| ಶನಿ | ಬೆ. 9.07–10.41 | 1.30– 3.00 | 6.00– 7.30 |



ವರ್ಲ್ಡ್ ಎಜುಕೇಶನ್ ಸಮ್ಮಿಟ್ (World Education Summit), ನ್ಯಾಷನಲ್ ಅಚೀವರ್ಸ್ ಅವಾರ್ಡ್ (National Achiever's Award) ಕರ್ನಾಟಕದ ನ್ಯಾಷನಲ್ ಎಜುಕೇಶನ್ ಸೊಸೈಟಿಯ ಗೌರವ ಕಾರ್ಯದರ್ಶಿ ವಿ. ವೆಂಕಟಶಿವಾರೆಡ್ಡಿ ಅವರು 'ಶಿಕ್ಷಣ ಕ್ಷೇತ್ರಕ್ಕೆ ನೀಡಿದ ಕೊಡುಗೆಗಾಗಿ ಪ್ರಶಸ್ತಿ – 2026' ಅನ್ನು ಸ್ವೀಕರಿಸಿದರು. "ಅತ್ಯುತ್ತಮ ಶಿಕ್ಷಣ ಸಂಸ್ಥೆ – 2026"

# ನನ್ನ ಕುಟುಂಬದ ವಿರುದ್ಧದ ಆರೋಪಗಳಿಗೆ ದಾಖಲೆಗಳಿದ್ದರೆ ಬಹಿರಂಗಪಡಿಸಿ

## ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿಗೆ ಸಚಿವ ಪ್ರಿಯಾಂಕ್ ಖರ್ಗೆ ಸವಾಲು



ಕಲಬುರಗಿ, ಅ.18: ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರು ತಮ್ಮ ಹಾಗೂ ತಮ್ಮ ಕುಟುಂಬದ ವಿರುದ್ಧ ಮಾಡುತ್ತಿರುವ ಆರೋಪಗಳಿಗೆ ತೀವ್ರ ಆಕ್ಷೇಪ ವ್ಯಕ್ತಪಡಿಸಿರುವ ಗೃಹ ಸಚಿವ ಪ್ರಿಯಾಂಕ್ ಖರ್ಗೆ, ಆರೋಪಗಳಿಗೆ ದಾಖಲೆಗಳಿದ್ದರೆ ಅವುಗಳನ್ನು ಬಹಿರಂಗಪಡಿಸಲಿ ಎಂದು ಸವಾಲು ಹಾಕಿದ್ದಾರೆ.

ಕಲಬುರಗಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಕುಮಾರಸ್ವಾಮಿ ಅವರು ಜನರ ಹಿತಾಸಕ್ತಿಗಿಂತ ಸ್ವಹಿತಾಸಕ್ತಿಗಾಗಿ ಕುಮಾರಸ್ವಾಮಿ ಪಾದಯಾತ್ರೆ ನಡೆಸುತ್ತಿದ್ದಾರೆ. ಅವರ ಬಳಿ ಇರುವ ಎಲ್ಲ ಪುರಾವೆಗಳನ್ನು ಕರಪತ್ರಗಳ ಮೂಲಕ ಜನರಿಗೆ ಹಂಚಲಿ. ನಮ್ಮ ಕುಟುಂಬದ ವಿರುದ್ಧ ಆರೋಪ ಮಾಡುವ ಬದಲು ದಾಖಲೆಗಳನ್ನು ಬಿಡುಗಡೆ ಮಾಡಲಿ. ತಪ್ಪು ನಡೆದಿದ್ದರೆ ತನಿಖೆ ನಡೆಸಲಿ. ತನಿಖಾ ಸಂಸ್ಥೆಗಳು ಅವರ ಬಳಿಯೇ ಇವೆ. ನಮ್ಮ ಕುಟುಂಬದ ವಿಚಾರದಲ್ಲಿ ಏನೇ ಆರೋಪಗಳಿದ್ದರೂ ಅವುಗಳಿಗೆ ಸಂಬಂಧಿಸಿದ ದಾಖಲೆಗಳಿವೆ ಎಂದು ಖರ್ಗೆ ಹೇಳಿದರು.

ಕುಮಾರಸ್ವಾಮಿ ಅವರು ತಮ್ಮನ್ನು 'ಬಲಿತ ದಲಿತ' ಎಂದು ಕರೆದಿರುವ ವಿಚಾರಕ್ಕೆ ಪ್ರತಿಕ್ರಿಯಿಸಿದ ಸಚಿವ ಖರ್ಗೆ, ದಲಿತರು ಆರ್ಥಿಕವಾಗಿ ಮತ್ತು ರಾಜಕೀಯವಾಗಿ ಬಲಿಷ್ಠರಾಗುವುದನ್ನು ಕಂಡು ಕೆಲವರಿಗೆ ಯಾಕೆ ಕಣ್ಣುರಿ ಎಂದು ಪ್ರಶ್ನಿಸಿದರು. ಮಣ್ಣಿನ ಮಕ್ಕಳು ಎಂದು ಹೇಳಿಕೊಳ್ಳುವವರು ಸಿನಿಮಾ ನಿರ್ಮಾಪಕರಾಗಬಹುದು, ನಿರ್ದೇಶಕರಾಗಬಹುದು, 'ಜಾಗ್ವಾರ್' ಆಗಿ ನಟಿಸಬಹುದು, ರಿಯಲ್ ಎಸ್ಟೇಟ್ ಉದ್ಯಮ ಮಾಡಬಹುದು, ಐಷಾರಾಮಿ ಕಾರುಗಳಲ್ಲಿ ಓಡಾಡಬಹುದು. ಆದರೆ ದಲಿತರು ಕೋಟ್ ಹಾಕಿಕೊಂಡು, ಇಂಗ್ಲಿಷ್ ಮಾತನಾಡಿಕೊಂಡು ಉನ್ನತ ಸ್ಥಾನಕ್ಕೇರಿದರೆ ಇವರಿಗೆ ಕಣ್ಣು ಕುಕ್ಕುತ್ತದೆಯೇ? ದಲಿತರು ಗೃಹ ಸಚಿವರಾಗಬಾರದೇ, ಆರ್ಥಿಕವಾಗಿ ಬಲಿಷ್ಠರಾಗಬಾರದೇ" ಎಂದು ಪ್ರಶ್ನಿಸಿದರು. "ನಾವು ಯಾವ ಸಮಾಜದಲ್ಲಿ ಬದುಕುತ್ತಿದ್ದೇವೆ ಎಂಬುದನ್ನು ಅರ್ಥಮಾಡಿಕೊಳ್ಳಬೇಕು. ದಲಿತರು ಎದುರಿಸುತ್ತಿರುವ ತಾರತಮ್ಯ ಮತ್ತು ಅವಮಾನಗಳ ಬಗ್ಗೆ ಮಾತನಾಡುವ ಬದಲು ಅವರ ಪ್ರಗತಿಯನ್ನೇ ಪ್ರಶ್ನಿಸುವುದು ಸರಿಯಲ್ಲ" ಎಂದರು.




ನವರಾತ್ರಿ ಅಂಗವಾಗಿ ನವದೆಹಲಿಯ ಆರ್.ಕೆ.ಆಶ್ರಮದಲ್ಲಿರುವ ಅರಂಬಾಗ್ ದುರ್ಗಾಪೂಜಾ ಪೆಂಡಾಲ್‌ನಲ್ಲಿ ನಡೆದ ದುರ್ಗಾಪೂಜಾ ಉತ್ಸವದ ಒಂದು ವಿಹಂಗಮ ನೋಟ.




# ಸಿದ್ದರಾಮಯ್ಯನವರನ್ನು ರಾಜಕೀಯವಾಗಿ ದುರ್ಬಲಗೊಳಿಸುವ ಯತ್ನ: ಬಿಎಸ್‌ವೈ



ಬೆಂಗಳೂರು, ಅ.18: ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸ್ಪಷ್ಟ ಬಹುಮತದೊಂದಿಗೆ ಸುಗಮ ಆಡಳಿತ ನಡೆಸುತ್ತಿದ್ದರೂ, ವ್ಯವಸ್ಥಿತ ಸಂಚು ರೂಪಿಸಿ ಅವರನ್ನು ಅಧಿಕಾರದಿಂದ ಕೆಳಗಿಳಿಸಲಾಗಿದೆ. ಇದೀಗ ಅವರ ವಿರುದ್ಧ ಸ್ಟಿಂಗ್ ಆಪರೇಷನ್ ನಡೆಸುವ ಮೂಲಕ ರಾಜಕೀಯವಾಗಿ ದುರ್ಬಲಗೊಳಿಸುವ ಪ್ರಯತ್ನ ನಡೆಯುತ್ತಿದೆ ಎಂದು ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಆರೋಪಿಸಿದ್ದಾರೆ.

ದಾವಣಗೆರೆಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಿದ್ದರಾಮಯ್ಯ ಅವರು ಉತ್ತಮ ಆಡಳಿತ ನೀಡುತ್ತಿದ್ದರು. ಆದರೆ, ಭವಿಷ್ಯದಲ್ಲಿ ಅವರು ಮತ್ತೆ ರಾಜಕೀಯವಾಗಿ ಬಲಿಷ್ಠರಾಗಬಹುದು ಎಂಬ ಭಯದಿಂದ ಅವರ ವಿರುದ್ಧ ಸ್ಟಿಂಗ್ ಆಪರೇಷನ್ ನಡೆಸಲಾಗಿದೆ. ಇದರ ಹಿಂದಿನ ಉದ್ದೇಶ ಏನೆಂಬುದು ರಾಜ್ಯದ ಜನರಿಗೆ ತಿಳಿದಿದೆ. ರಾಜ್ಯ ರಾಜಕಾರಣದಲ್ಲಿ ಸಿದ್ದರಾಮಯ್ಯ ಅವರಿಗೆ ಸಂಬಂಧಿಸಿದ ಬೆಳವಣಿಗೆಗಳು ಚರ್ಚೆಗೆ ಗ್ರಾಸವಾಗಿವೆ. ಈ ವಿಚಾರದಲ್ಲಿ ನಡೆಯುತ್ತಿರುವ ರಾಜಕೀಯ ಬೆಳವಣಿಗೆಗಳನ್ನು ಸೂಕ್ಷ್ಮವಾಗಿ ಗಮನಿಸುತ್ತಿದ್ದೇವೆ ಎಂದು ತಿಳಿಸಿದರು.

ರಾಜ್ಯದಲ್ಲಿ ಬರ ಪರಿಸ್ಥಿತಿ ತೀವ್ರವಾಗಿದ್ದು, ಜನರು ಅನೇಕ ಸಂಕಷ್ಟಗಳನ್ನು ಎದುರಿಸುತ್ತಿದ್ದಾರೆ. ಆದರೆ, ಜನರ ಸಮಸ್ಯೆಗಳಿಗೆ ಸ್ಪಂದಿಸುವಲ್ಲಿ ಸರ್ಕಾರ ಸಂಪೂರ್ಣ ವಿಫಲವಾಗಿದೆ. ಜನರ ಕಷ್ಟಗಳನ್ನು ಅರ್ಥಮಾಡಿಕೊಳ್ಳದೆ ಸರ್ಕಾರ ತುಘಲಕ್ ದರ್ಬಾರ್ ನಡೆಸುತ್ತಿದೆ. ರಾಜ್ಯದ ಜನರು ಸೂಕ್ತ ಸಮಯದಲ್ಲಿ ಸರ್ಕಾರಕ್ಕೆ ತಕ್ಕ ಪಾಠ ಕಲಿಸಲಿದ್ದಾರೆ ಎಂದು ಯಡಿಯೂರಪ್ಪ ವಾಗ್ದಾಳಿ ನಡೆಸಿದರು. ಮುಂಬರುವ ದಿನಗಳಲ್ಲಿ ಬಿಜೆಪಿ ಮತ್ತು ಜೆಡಿಎಸ್ ಒಗ್ಗಟ್ಟಿನಿಂದ ಹೋರಾಟ ನಡೆಸಲಿವೆ. ಎರಡೂ ಪಕ್ಷಗಳ ನಾಯಕರು ಮತ್ತು ಕಾರ್ಯಕರ್ತರು ಸಮನ್ವಯದಿಂದ ಕೆಲಸ ಮಾಡಿ ಜನರ ವಿಶ್ವಾಸ ಗಳಿಸಲಿದ್ದಾರೆ. ರಾಜ್ಯದ ಜನರು ಬದಲಾವಣೆಯನ್ನು ಬಯಸುತ್ತಿದ್ದಾರೆ. ಬಿಜೆಪಿ–ಜೆಡಿಎಸ್ ಮೈತ್ರಿಕೂಟಕ್ಕೆ ಜನರ ಬೆಂಬಲ ದೊರೆಯಲಿದೆ. ಮುಂದಿನ ಚುನಾವಣೆಯಲ್ಲಿ ಮೈತ್ರಿಕೂಟ ಬಹುಮತ ಗಳಿಸಿ ಸರ್ಕಾರ ರಚಿಸಲಿದೆ ಎಂಬ ವಿಶ್ವಾಸವಿದೆ ಎಂದು ತಿಳಿಸಿದರು

# ಗ್ಯಾರಂಟಿಯಿಂದ ರೈತರ ಸಾಲಮನ್ನಾ ಸಾಧ್ಯವಿಲ್ಲ: ಬಿ.ಕೆ.ಹರಿಪ್ರಸಾದ್



**ಬೆಂಗಳೂರು, ಅ.18:** ಗ್ಯಾರಂಟಿಯಿಂದ ರೈತರ ಸಾಲಮನ್ನಾ ಸಾಧ್ಯವಿಲ್ಲ ಎಂದು ಕೆಪಿಸಿಸಿ ಅಧ್ಯಕ್ಷ ಬಿ.ಕೆ.ಹರಿಪ್ರಸಾದ್ ಹೇಳಿದ್ದಾರೆ.

ಕಲಬುರಗಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸದ್ಯ ಗ್ಯಾರಂಟಿಯಿಂದ ಸಾಲಮನ್ನಾ ಮಾಡಲು ಆಗಲ್ಲ. ಆದರೆ ಬರದಿಂದ ಸಂಕಷ್ಟದಲ್ಲಿರುವ ರೈತರಿಗೆ ಏನು ಸಹಾಯ ಮಾಡಬೇಕು ಆ ಸಹಾಯ ಮಾಡುತ್ತೇವೆ ಎಂದರು.

ತಿರುಕನ ಕನಸು ರಾಜ್ಯದಲ್ಲಿ ಮೂರನೇ ಮುಖ್ಯಮಂತ್ರಿ ಬರುತ್ತಾರೆ ಎಂದು ಹೇಳಿರುವ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿಕೆಗೆ ಪ್ರತಿಕ್ರಿಯೆ ನೀಡಿ, ಅವರು ತಿರುಕನ ಕನಸು ಕಾಣುತ್ತಿದ್ದಾರೆ. ಅವರಿಗೆ ಆಗಾಗ ಈ ರೀತಿ ಕನಸು ಬೀಳುತ್ತಿರುತ್ತದೆ ಎಂದು ವ್ಯಂಗ್ಯವಾಡಿದರು. ಸಿಜೆಪಿಗೆ ಕಾಂಗ್ರೆಸ್‌ನಿಂದ ಹಣಕಾಸಿನ ನೆರವು ನೀಡಲಾಗುತ್ತಿದೆ ಎಂಬ ವಿಜಯೇಂದ್ರ ಆರೋಪವನ್ನು ತಳ್ಳಿಹಾಕಿದ ಹರಿಪ್ರಸಾದ್, ಫಂಡಿಂಗ್ ಪಡೆಯುವುದು ಹಾಗೂ ಆರ್‌ಟಿಜಿಎಸ್ ಮೂಲಕ ಲಂಚ ಪಡೆಯುವ ವಿಚಾರಗಳ ಬಗ್ಗೆ ವಿಜಯೇಂದ್ರ ಅವರಿಗೆ ಚೆನ್ನಾಗಿ ತಿಳಿದಿದೆ. ಯುವಕರು ಜೈಲಿಗೆ ಹೋದರೆ ಅವರಿಗೆ ಕಾನೂನು ನೆರವು ನೀಡುತ್ತೇವೆ ಎಂದು ಹೇಳಿದ್ದೇವೆ. ಅದನ್ನು ಫಂಡಿಂಗ್ ಎಂದು ಕರೆಯಲು ಸಾಧ್ಯವಿಲ್ಲ ಎಂದು ಸ್ಪಷ್ಟಪಡಿಸಿದರು.

ಮಾಜಿ ಸಿಎಂ ಸಿದ್ದರಾಮಯ್ಯ ಹಾಗೂ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಭೇಟಿ ಕುರಿತ ಎಚ್‌ಡಿಕೆ ಹೇಳಿಕೆಗೆ ಪ್ರತಿಕ್ರಿಯಿಸಿ, ಎಚ್.ಡಿ. ಕುಮಾರಸ್ವಾಮಿಗೆ ಸ್ಯಾಟಲೈಟ್ ಮೂಲಕ ವಿಷಯ ತಿಳಿಯುತ್ತದೆಯೇ ಎಂದು ಪ್ರಶ್ನಿಸಿದರು. ರಾಜಕೀಯ ನಾಯಕರು ಪರಸ್ಪರ ಭೇಟಿಯಾಗುವುದು ಸಾಮಾನ್ಯ. ಆದರೆ ಶಾಸಕರು ಮತ್ತು ಸಂಸದರ ವೈಯಕ್ತಿಕ ವಿಚಾರಗಳ ಬಗ್ಗೆ ತಾನು ಚರ್ಚಿಸುವುದಿಲ್ಲ ಎಂದು ಹೇಳಿದರು.

# ಸುಲಭ ಹಾಗೂ ಪಾರದರ್ಶಕ ನಾಗರಿಕ ಸೇವೆಗೆ ಕರ್ನಾಟಕ ಸರ್ಕಾರದ ದಿಟ್ಟ ಹೆಜ್ಜೆ

## ಎಲ್ಲ ಇಲಾಖೆಗಳಿಗೆ ಅನ್ವಯವಾಗುವಂತೆ ಹೊಸ ಪ್ರಮಾಣಿತ ಮಾರ್ಗಸೂಚಿ ಸೂತ್ರ ಬಿಡುಗಡೆ

ಬೆಂಗಳೂರು, ಅ.18: ರಾಜ್ಯದಲ್ಲಿ ನಾಗರಿಕರಿಗೆ ತೊಂದರೆಯಿಲ್ಲದೆ, ಸಕಾಲದಲ್ಲಿ ಹಾಗೂ ಪಾರದರ್ಶಕವಾಗಿ ಸರ್ಕಾರಿ ಸೇವೆಗಳನ್ನು ತಲುಪಿಸುವ ನಿಟ್ಟಿನಲ್ಲಿ ಸರ್ಕಾರ ಎಲ್ಲಾ ಇಲಾಖೆಗಳಿಗೆ ಅನ್ವಯವಾಗುವಂತೆ ಹೊಸ ಪ್ರಮಾಣಿತ ಮಾರ್ಗದರ್ಶಿ ಸೂತ್ರಗಳನ್ನು ಬಿಡುಗಡೆಗೊಳಿಸಿ ಮಹತ್ವದ ಆದೇಶ ಹೊರಡಿಸಿದೆ.

ಕರ್ನಾಟಕ ಆಡಳಿತ ಸುಧಾರಣಾ ಆಯೋಗ–2ರ (ಕೆಎಆರ್‌ಸಿ–2) ಶಿಫಾರಸುಗಳ ಆಧಾರದ ಮೇಲೆ, ಪ್ರಜಾಸೇವಾ ಇಲಾಖೆಯು ಈ ಸಮಗ್ರ ನಿಯಮಾವಳಿಗಳನ್ನು ಸಿದ್ಧಪಡಿಸಿದ್ದು, ಮುಖ್ಯಮಂತ್ರಿಗಳ ಅನುಮೋದನೆಯೊಂದಿಗೆ ಜಾರಿಗೆ ತರಲಾಗಿದೆ.

**ಹೊಸ ಆದೇಶದ ಪ್ರಮುಖ ಮುಖ್ಯಾಂಶಗಳು:**

ಎಲ್ಲಾ ಸೇವೆಗಳು ಆನ್‌ಲೈನ್ ಮತ್ತು ಸಕಾಲ ವ್ಯಾಪ್ತಿಗೆ: ಸರ್ಕಾರದ ಪರವಾನಗಿ, ಪ್ರಮಾಣಪತ್ರ ಸೇರಿದಂತೆ ಎಲ್ಲಾ ನಾಗರಿಕ ಸೇವೆಗಳನ್ನು ಕಡ್ಡಾಯವಾಗಿ ಆನ್‌ಲೈನ್ ವ್ಯವಸ್ಥೆಗೆ ತರಲಾಗುವುದು ಹಾಗೂ 'ಸಕಾಲ' ವ್ಯಾಪ್ತಿಗೆ ಅಳವಡಿಸಲಾಗುವುದು.

ಸೇವೆಗಳ ಕಾಲಮಿತಿಯನ್ನು ಕಡಿತಗೊಳಿಸಲಾಗುತ್ತಿದ್ದು, ಸಾಧ್ಯವಿರುವೆಡೆಯಲ್ಲಿ ಕೌಂಟರ್‌ನಲ್ಲೇ ತಕ್ಷಣವೇ ಪ್ರಮಾಣಪತ್ರ ನೀಡಲು ಕ್ರಮ ಕೈಗೊಳ್ಳಲಾಗುವುದು.

**ಆಧಾರ್ ಹಾಗೂ ಡಿಜಿಲಾಕರ್ ಬೆಂಬಲ:** ಆನ್‌ಲೈನ್ ಸೇವೆಗಳಿಗೆ ಆಧಾರ್, ಮೊಬೈಲ್ ಆಧಾರಿತ ಪರಿಶೀಲನೆ ಬಳಸಲಾಗುವುದು. ವಿತರಿಸಲಾಗುವ ಎಲ್ಲಾ ಪ್ರಮಾಣಪತ್ರಗಳನ್ನು 'ಡಿಜಿಲಾಕರ್'ನಲ್ಲಿ ಸಂಗ್ರಹಿಸಲಾಗುತ್ತದೆ.

**ಆಟೋ–ರಿಫಂಡ್ ಹಾಗೂ ಯುಪಿಐ ಪಾವತಿ:** ಅರ್ಜಿ ನಿರಾಕರಣೆಯಾದರೆ ಪಾವತಿಸಿದ ಶುಲ್ಕವನ್ನು ಆಟೋಮ್ಯಾಟಿಕ್ ಆಗಿ ಮರುಪಾವತಿಸಲಾಗುವುದು. ಯುಪಿಐ ಸೇರಿದಂತೆ ಡಿಜಿಟಲ್ ಪಾವತಿಗೆ ಆದ್ಯತೆ ನೀಡಿ, ಭೌತಿಕ ಹಣ ಸಂಗ್ರಹಣೆ ತಪ್ಪಿಸಲಾಗುತ್ತದೆ.

**ಕನ್ನಡ ಭಾಷೆಗೆ ಆದ್ಯತೆ:** ಪ್ರಸ್ತುತ ಇಂಗ್ಲಿಷ್‌ನಲ್ಲಿ ಮಾತ್ರ ಲಭ್ಯವಿರುವ ಎಲ್ಲಾ ನಮೂನೆ ಮತ್ತು ಅರ್ಜಿ ನಮೂನೆಗಳನ್ನು ಕಡ್ಡಾಯವಾಗಿ ಕನ್ನಡದಲ್ಲಿಯೂ ಲಭ್ಯಗೊಳಿಸಲಾಗುವುದು.

**ಎಸ್‌ಎಂಎಸ್ ಆಂಡ್ ವಾಟ್ಸ್‌ಆಪ್ ಮುಖಾಂತರ ಅಪ್‌ಡೇಟ್:** ಅರ್ಜಿಯ ಪ್ರಸ್ತುತ ಸ್ಥಿತಿಗತಿಯನ್ನು ಕಾಲಕಾಲಕ್ಕೆ ಎಸ್‌ಎಂಎಸ್ ಮತ್ತು ವಾಟ್ಸ್‌ಆಪ್ ಸಂದೇಶಗಳ ಮೂಲಕ ನಾಗರಿಕರಿಗೆ ತಲುಪಿಸಲಾಗುವುದು.

ಸರ್ಕಾರಿ ಕಚೇರಿಗಳಲ್ಲಿ ಮೂಲಸೌಕರ್ಯ ಹಾಗೂ ಪಾರದರ್ಶಕತೆ: ಸರ್ಕಾರಿ ಕಚೇರಿಗಳಿಗೆ ಆಗಮಿಸುವ ಸಾರ್ವಜನಿಕರಿಗೆ ಸೂಕ್ತ ಆಸನ ವ್ಯವಸ್ಥೆ ಹಾಗೂ ಕುಡಿಯುವ ನೀರಿನ ಸೌಲಭ್ಯ ಒದಗಿಸುವುದು ಕಡ್ಡಾಯ.

**ಅಧಿಕಾರಿಗಳ ಭೇಟಿಗೆ ಟೋಕನ್ ವ್ಯವಸ್ಥೆ**

ಅಧಿಕಾರಿಗಳನ್ನು ಭೇಟಿಯಾಗಲು ಟೋಕನ್ ವ್ಯವಸ್ಥೆ ಹಾಗೂ ವಿಚಾರಣೆಗೆ ಹಾಜರಾಗಬೇಕಿದ್ದಲ್ಲಿ ಮುಂಚಿತವಾಗಿಯೇ ಸಮಯ ನಿಗದಿಪಡಿಸುವ ಸೌಲಭ್ಯ ನೀಡಲಾಗುತ್ತದೆ. ಸ್ಥಳ ತಪಾಸಣೆಗಳನ್ನು ಮೊಬೈಲ್ ಆಪ್ ಮೂಲಕವೇ ಪಾರದರ್ಶಕವಾಗಿ ನಡೆಸಲು ನಿರ್ದೇಶಿಸಲಾಗಿದೆ. ಸರ್ಕಾರದ ಈ ನೂತನ ಆದೇಶದಿಂದಾಗಿ ಸಾರ್ವಜನಿಕರು ಲಂಚಗುಳಿತನ, ಕಚೇರಿಗಳಿಗೆ ಅಲೆಯುವುದು ಹಾಗೂ ವಿಳಂಬ ನೀತಿಯಿಂದ ಮುಕ್ತಿ ಪಡೆಯಲಿದ್ದು, ಇಲಾಖೆಗಳು ತಮ್ಮ ಅನುಪಾಲನಾ ವರದಿಯನ್ನು ನಿಯಮಿತವಾಗಿ ಸಲ್ಲಿಸಬೇಕೆಂದು ಸರ್ಕಾರದ ಪ್ರಧಾನ ಕಾರ್ಯದರ್ಶಿ ಹರ್ಷಗುಪ್ತ ತಿಳಿಸಿದ್ದಾರೆ.



ಬೆಂಗಳೂರಿನ ಜಯನಗರ ವೀರಶೈವ ಮಹಾಸಭಾ ಮಹಿಳಾ ಘಟಕದಲ್ಲಿ ಇತ್ತೀಚೆಗೆ ನೆರವೇರಿದ ಕಾರ್ಯಕ್ರಮದಲ್ಲಿ ಸಂಧ್ಯಾ, ಸುವರ್ಣ ಮತ್ತು ಸಂಗಡಿಗರ ಸಮೂಹ

# ಖಾರ್ ದಾಂಡಾದಲ್ಲಿ ಭದ್ರಕಾಳಿ ಮಹಾಲಕ್ಷ್ಮಿ ದುರ್ಗಾ ಹೊನ್ನಮ್ಮ ಮಾತೆಗೆ ಪೂಜೆ

**ಆರತಿ ಬೆಳಗಿಸಿದ ಜಿಎಸ್‌ಬಿ ಪೀಠಾಧಿಪತಿ ಶ್ರೀಮದ್ ಶಿವಾನಂದ ಸರಸ್ವತಿ ಸ್ವಾಮೀಜಿ**

ಮುಂಬಯಿ, ಅ.18: ಅತ್ಯಂತ ಪ್ರಾಚೀನ ಗೌಡ ಸಾರಸ್ವತ ಬ್ರಾಹ್ಮಣ (ಜಿಎಸ್‌ಬಿ) ಸಮುದಾಯದ 77ನೇ ಪೀಠಾಧಿಪತಿ ಶ್ರೀಮದ್ ಶಿವಾನಂದ ಸರಸ್ವತಿ ಸ್ವಾಮೀಜಿ ಅವರು ಶನಿವಾರ ಸಂಜೆ ಖಾರ್ ದಾಂಡಾದ ಶಂಕರ ಮಿಲ್ಸ್ ಕಾಂಪೌಂಡ್‌ನಲ್ಲಿರುವ ಶ್ರೀ ಭದ್ರಕಾಳಿ ಮಹಾಲಕ್ಷ್ಮಿ ದುರ್ಗಾ ಹೊನ್ನಮ್ಮ ಸೇವಾ ಸಮಿತಿಯ ವತಿಯಿಂದ ಆಯೋಜಿಸಲಾದ ದಶದಿನಗಳ ನವರಾತ್ರಿ ಉತ್ಸವಕ್ಕೆ ಭೇಟಿ ನೀಡಿ ಅನುಗ್ರಹಿಸಿದರು.

ನಡೆಸಲ್ಪಟ್ಟ ಧಾರ್ಮಿಕ ಪ್ರವಚನದಲ್ಲಿ ಶಿವಾನಂದ ಸರಸ್ವತಿ ಸ್ವಾಮೀಜಿ ಅವರು ಭಕ್ತಾದಿಗಳಿಗೆ ಆಧ್ಯಾತ್ಮಿಕ ಸಂದೇಶ ನೀಡಿ ನೆರೆದ ಸಮಾಜ ಬಾಂಧವರು, ಸಮಿತಿಯ ಪದಾಧಿಕಾರಿಗಳು ಹಾಗೂ ಭಕ್ತಾದಿಗಳಿಗೆ ಫಲಮಂತ್ರಾಕ್ಷತೆ ನೀಡಿ ಆಶೀರ್ವದಿಸಿದರು.



ಇದೇ ಸಂದರ್ಭದಲ್ಲಿ ಸ್ವಾಮೀಜಿ ಅವರು ದಾಂಡೇಶ್ವರ ದೇವಸ್ಥಾನಕ್ಕೆ ಭೇಟಿ ನೀಡಿ, ಶ್ರೀ ಶಿವ ದೇವರು ಹಾಗೂ ಶ್ರೀ ನಾಗರಾಜ ದೇವರಿಗೆ ಪೂಜೆ ಸಲ್ಲಿಸಿದರು.

# ಭರವಸೆ ಜಾರಿಮಾಡದೆ ಪದವೀಧರರು ನಿರುದ್ಯೋಗಿಗಳಿಗೆ ಕಾಂಗ್ರೆಸ್ ವಂಚನೆ

## ಸರ್ಕಾರದ ವಿರುದ್ಧ ಶಾಸಕ ಎಸ್. ಸುರೇಶ್‌ಕುಮಾರ್ ಆರೋಪ



ಬೆಂಗಳೂರು, ಅ.18: ರಾಜ್ಯದ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಪ್ರಣಾಳಿಕೆಯಲ್ಲಿ ಹೇಳಿಕೊಂಡ ಭರವಸೆಗಳನ್ನು ಸರಿಯಾಗಿ ಜಾರಿ ಮಾಡದೆ ಪದವೀಧರರು, ಶಿಕ್ಷಕರು ಮತ್ತು ನಿರುದ್ಯೋಗಿಗಳಿಗೆ ವಂಚನೆ ಮತ್ತು ದ್ರೋಹ ಮಾಡುತ್ತಿದೆ ಎಂದು ಮಾಜಿ ಸಚಿವ ಮತ್ತು ಬಿಜೆಪಿ ಶಾಸಕ ಎಸ್.ಸುರೇಶ್‌ಕುಮಾರ್ ಆರೋಪಿಸಿದ್ದಾರೆ.

ಮಲ್ಲೇಶ್ವರದ ರಾಜ್ಯ ಬಿಜೆಪಿ ಕಾರ್ಯಾಲಯ ಜಗನ್ನಾಥ ಭವನದಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ರಾಜ್ಯ ಸರ್ಕಾರ ಯುವಕರ ರಕ್ಷಣೆ ಮಾಡುವುದು ಬಿಟ್ಟು ಅಪರಾಧ ಮಾಡುವವರಿಗೆ ರಕ್ಷಣೆ ನೀಡುತ್ತಿದೆ ಎಂದು ಆಕ್ಷೇಪಿಸಿದರು. ಅಧಿಕಾರಕ್ಕೆ ಬಂದ ಒಂದೇ ವರ್ಷದಲ್ಲಿ ಎಲ್ಲಾ ಅನುಮೋದಿತ ಖಾಲಿ ಹುದ್ದೆ ಭರ್ತಿ ಮಾಡುತ್ತೇವೆ ಎಂದರು. ಆದರೆ ಅದನ್ನು ಮಾಡಲಿಲ್ಲ. ಈಗ ಎರಡೂ ಲಕ್ಷಕ್ಕೂ ಹೆಚ್ಚು ಹುದ್ದೆಗಳು ಖಾಲಿ ಇವೆ. ಇದೇ ಇವರ ಸಾಧನೆ. ನಿರುದ್ಯೋಗಿಗಳಿಗೆ ಪರೀಕ್ಷಾ ಶುಲ್ಕ ವಿನಾಯಿತಿ ನೀಡುತ್ತೇವೆ ಎಂದರು. ಆದರೆ ಅದನ್ನೂ ಜಾರಿ ಮಾಡಲಿಲ್ಲ. ಯುವನಿಧಿ ಕೊಡುತ್ತೇವೆ ಎಂದರು. ಅದನ್ನೂ ವಿಳಂಬ ಮಾಡಿದರು ಎಂದು ದೂರಿದರು.

**ಪರಿಷತ್ ನಾಲ್ಕೂ ಕ್ಷೇತ್ರಗಳಲ್ಲಿ ಗೆಲ್ಲುವ ವಿಶ್ವಾಸ**

ವಿಧಾನ ಪರಿಷತ್‌ನ ಪದವೀಧರ ಮತ್ತು ಶಿಕ್ಷಕರ ಕ್ಷೇತ್ರಗಳ ಚುನಾವಣೆ ನಾಲ್ಕು ಕಡೆ ನಡೆಯಲಿದೆ. ಕಲ್ಯಾಣ ಕರ್ನಾಟಕ ಭಾಗದ ಈಶಾನ್ಯ ಶಿಕ್ಷಕರ ಕ್ಷೇತ್ರಕ್ಕೆ ಶಶಿಲ್ ನಮೋಶಿ ಬಿಜೆಪಿ ಅಭ್ಯರ್ಥಿಯಾಗಿದ್ದಾರೆ. ಪಶ್ಚಿಮ ಪದವೀಧರ ಕ್ಷೇತ್ರಕ್ಕೆ ಸಂಕನೂರು, ಆಗ್ನೇಯ ಪದವೀಧರ ಕ್ಷೇತ್ರಕ್ಕೆ ಸುರೇಶ್ ಹಾಗೂ ಬೆಂಗಳೂರು ಶಿಕ್ಷಕರ ಕ್ಷೇತ್ರಕ್ಕೆ ಎ.ಪಿ.ರಂಗನಾಥ್ ಸ್ಪರ್ಧಿಸಿದ್ದಾರೆ. ಎಲ್ಲಾ ಕ್ಷೇತ್ರಗಳಲ್ಲಿ ನಮ್ಮ ಅಭ್ಯರ್ಥಿಗಳಿಗೆ ಗೆಲುವಿನ ವಾತಾವರಣ ಇದೆ. ಈ ಚುನಾವಣೆ ಸರ್ಕಾರಕ್ಕೆ ಅಗ್ನಿಪರೀಕ್ಷೆ ಆಗಲಿದೆ ಎಂದು ಹೇಳಿದರು. ಎರಡೂ ಕ್ಷೇತ್ರಗಳ ಚುನಾವಣೆಯಲ್ಲಿ ಪ್ರಾಶಸ್ತ್ಯದ ಮತಗಳ ಮೂಲಕ ಗೆಲ್ಲಿಸಬೇಕಿದೆ. ಈ ಮತ ಹಾಕುವಾಗ ನಮ್ಮ ಅಭ್ಯರ್ಥಿಗಳಿಗೆ ಮೊದಲನೇ ಪ್ರಾಶಸ್ತ್ಯದ ಮತ ನೀಡುವಂತೆ ಹೇಳಿದ್ದೇವೆ. ಮತಗಳು ಸರಿಯಾಗಿ ಹಾಕುವ ವಿಧಾನವನ್ನು ತಿಳಿಸಿದ್ದೇವೆ. ಸಿಂಧು ಮತಗಳ ಸಂಖ್ಯೆ ಹೆಚ್ಚಬೇಕು ಎಂದು ಸುರೇಶ್ ಕುಮಾರ್ ಹೇಳಿದರು.

ಕೆಪಿಎಸ್‌ಸಿಯಿಂದ ರಾಜ್ಯದ ಯುವಕರಿಗೆ ನಿರಂತರ ದ್ರೋಹ ಆಗುತ್ತಿದೆ. ಕರ್ನಾಟಕ ಪಬ್ಲಿಕ್ ಸರ್ವಿಸ್ ಕಮೀಷನ್‌ನಲ್ಲಿ ಸರ್ವಿಸ್ ಇಲ್ಲ. ಇರುವುದು ಕೇವಲ ಕಮೀಷನ್. ಪಬ್ಲಿಕ್ ಇಲ್ಲ ಪ್ರೈವೇಟ್ ಮಾತ್ರ. ರಾಜ್ಯ ಸರ್ಕಾರ ಯುವಕರ ಹತಾಶೆಯನ್ನು ಗಮನಿಸಿಯೇ ಇಲ್ಲ. ಕೆಪಿಎಸ್‌ಸಿ ಸುಧಾರಣೆ ಕಡೆಗೂ ಸರ್ಕಾರ ಗಮನ ಹರಿಸುತ್ತಿಲ್ಲ. ಪಶುವೈದ್ಯಾಧಿಕಾರಿ ಪರೀಕ್ಷೆಯನ್ನೂ ಸರಿಯಾಗಿ ನಡೆಸಲಿಲ್ಲ. ಐಎಎಸ್ ಅಧಿಕಾರಿ ಜ್ಞಾನೇಂದ್ರ ಗಂಗ್ವಾರ್ ಅಕ್ರಮದಲ್ಲಿ ಭಾಗಿಯಾಗಿ ಜೈಲು ಸೇರಿದ್ದಾರೆ. ಯುವಕರಿಗೆ ರಕ್ಷಣೆ ಬದಲು ಅಪರಾಧಿಗಳನ್ನು ರಕ್ಷಿಸುತ್ತಿದೆ ಎಂದು ಸುರೇಶ್‌ಕುಮಾರ್ ಟೀಕಿಸಿದರು.

Chief reporter : SANDEEP RENU ✆ 99728 72151 | Executive Editor : SHARAT JYOTSNA B.R ✆ 9886766483 ✉ vaarthe@gmail.com

Published from: K10,'A'/4, Khriki Extension, Malviya Nagar, New Delhi-110 017. Phone: 95-120-3917916-20
Printed at: Jyoti Printers, E-94, Sector 6, Noida, UP. Phone: 0120-4232687 Off : E-94,Sector 6, Noida,UP | RNI No. DELKAN/2003/10363

24 ವರ್ಷಗಳಿಂದ ದೆಹಲಿಯಲ್ಲಿ ಪ್ರಕಟವಾಗುತ್ತಿರುವ ಪ್ರಪ್ರಥಮ ರಾಷ್ಟ್ರೀಯ ಕನ್ನಡ ದಿನಪತ್ರಿಕೆ

ದೆಹಲಿ ವಾರ್ತೆ

ಅಕ್ಟೋಬರ್, 19, 2026, ಸೋಮವಾರ

## ಒಳಪುಟಗಳಲ್ಲಿ

ಮಾಹಿತಿಹಕ್ಕು ಅರ್ಜಿಗಳ ಆನ್‌ಲೈನ್ ನೋಂದಣಿ ಈಗ ಸಕಾಲ ವ್ಯಾಪ್ತಿಗೆ: 2 ದಿನದಲ್ಲಿ ಅಪ್‌ಲೋಡ್ ಮಾಡುವುದು ಕಡ್ಡಾಯ - ಪು.4

ಬ್ರಿಮ್ಸ್ ನೆಲಮಹಡಿಗೆ ಹೈಟೆಕ್ ಸ್ಪರ್ಶ, ವಾಹನಗಳ ನಿಲುಗಡೆಗೆ ನಿರ್ಧಾರ - ಪು.5

ದೇಶದಲ್ಲಿ ಅರಾಜಕತೆ ಸೃಷ್ಟಿಸುವ ಜಿರಳೆಗಳಿಗೆ ಹಣಕಾಸಿನ ನೆರವು ನೀಡುವುದೇ ಕಾಂಗ್ರೆಸ್ ದೇಶಭಕ್ತಿ: ಛಲವಾದಿ ವಾಗ್ದಾಳಿ - ಪು.7

# ಮತಗಳ್ಳತನ: ಮೋದಿ–ಶಾ ಯೋಜನೆ, ಜ್ಞಾನೇಶ್‌ಕುಮಾರ್ ಜಾರಿ

## ಮಡಗಾವ್‌ನ ಕಾಂಗ್ರೆಸ್ ಗೋಯ್ ರಾಖೋನ್ ಯಾತ್ರೆ ಸಮಾರೋಪದಲ್ಲಿ ರಾಹುಲ್‌ಗಾಂಧಿ ವಾಗ್ದಾಳಿ

**ಮಡಗಾವ್(ದ.ಗೋವಾ), ಅ.18:** ಮತಗಳ್ಳತನದ ಸಂಪೂರ್ಣ ಯೋಜನೆಯನ್ನು ಮೋದಿ ರೂಪಿಸುತ್ತಾರೆ, ಗೃಹ ಸಚಿವ ಅಮಿತ್ ಶಾ ಅದನ್ನು ಕಾರ್ಯಗತಗೊಳಿಸುತ್ತಾರೆ ಮತ್ತು ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಜಾರಿಗೊಳಿಸುತ್ತಾರೆ ಎಂದು ಕಾಂಗ್ರೆಸ್ ನಾಯಕ ಹಾಗೂ ಲೋಕಸಭೆ ವಿರೋಧ ಪಕ್ಷ ರಾಹುಲ್ ಗಾಂಧಿ ವಾಗ್ದಾಳಿ ನಡೆಸಿದ್ದಾರೆ.

ದಕ್ಷಿಣ ಗೋವಾದ ಮಡಗಾವ್‌ನಲ್ಲಿ ಕಾಂಗ್ರೆಸ್‌ನ ಗೋಯ್ ರಾಖೋನ್ ಯಾತ್ರೆ ಸಮಾರೋಪದ ರ್‍ಯಾಲಿ ಉದ್ದೇಶಿಸಿ ಮಾತನಾಡಿದ ಅವರು, ಚುನಾವಣಾ ಅಕ್ರಮಗಳ ಕುರಿತು ಕಾಂಗ್ರೆಸ್ ಮಾಡಿರುವ ಆರೋಪಗಳಿಂದ ಮೋದಿ, ಶಾ ಮತ್ತು ಜ್ಞಾನೇಶ್ ಕುಮಾರ್ ಅವರ ಮೇಲೆ ಒತ್ತಡ ಹೆಚ್ಚುತ್ತಿದೆ ಎಂದು ದೂರಿದರು. ಮತಗಳ್ಳತನದ ಆರೋಪಗಳಿಗೆ ಸಂಬಂಧಿಸಿದಂತೆ ಈ ಮೂವರೂ ಕಾನೂನು ಕ್ರಮ ಎದುರಿಸಬೇಕಾಗುತ್ತದೆ. ಮಧ್ಯಪ್ರದೇಶ, ಹರಿಯಾಣ, ಕರ್ನಾಟಕ, ಛತ್ತೀಸ್‌ಗಢ, ಮಹಾರಾಷ್ಟ್ರ, ಪಶ್ಚಿಮ ಬಂಗಾಳ ಮತ್ತು ಅಸ್ಸಾಂ ಸೇರಿದಂತೆ ಹಲವು ರಾಜ್ಯಗಳಲ್ಲಿ ಚುನಾವಣಾ ಅಕ್ರಮಗಳು ನಡೆದಿರುವುದಕ್ಕೆ ಕಾಂಗ್ರೆಸ್ ಬಳಿ ಪುರಾವೆಗಳಿವೆ ಎಂದೂ ಪ್ರತಿಪಾದಿಸಿದರು.

ಪ್ರಧಾನಿ ಮೋದಿ, ಅಮಿತ್ ಶಾ ಮತ್ತು ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ತಾವು ಮಾಡಿರುವುದಕ್ಕೆ ತಕ್ಕಬೆಲೆ ತೆರಬೇಕಾಗುತ್ತದೆ ಎಂದು ಹೇಳಿದರು.



ತಮ್ಮ ವಿರುದ್ಧ 45ಕ್ಕೂ ಹೆಚ್ಚು ಮಾನನಷ್ಟ ಮೊಕದ್ದಮೆಗಳನ್ನು ದಾಖಲಿಸಲಾಗಿದೆ. ಅವುಗಳಲ್ಲಿ ಮೋದಿ ಮತ್ತು ಅಮಿತ್ ಶಾ ಅವರೊಂದಿಗೆ ಸಂಬಂಧ ಹೊಂದಿರುವವರೂ ಹೂಡಿರುವ ಪ್ರಕರಣಗಳಿವೆ, ಆದರೆ, ತಾವು ಮಾಡಿರುವ ಮತಗಳ್ಳತನದ ಆರೋಪಗಳಿಗೆ ಸಂಬಂಧಿಸಿದಂತೆ ಯಾವುದೇ ಪ್ರಕರಣ ದಾಖಲಿಸಿಲ್ಲ ಎಂದು ಅವರು ಪ್ರತಿಪಾದಿಸಿದರು. ಈ ವಿಷಯ ಕಾನೂನು ಹೋರಾಟಕ್ಕೆ ಕಾರಣವಾಗಬಹುದು ಎಂಬ ಕಾರಣಕ್ಕೆ ಸರ್ಕಾರ ಅದನ್ನು ನ್ಯಾಯಾಲಯದಲ್ಲಿ ಎದುರಿಸಲು ಹಿಂಜರಿಯುತ್ತಿದೆ ಎಂದು ಅಭಿಪ್ರಾಯಪಟ್ಟರು. 2027ರ ಗೋವಾ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್‌ಗೆ ಪೂರ್ಣ ಬಹುಮತ ನೀಡುವಂತೆ ಮತದಾರರನ್ನು ಒತ್ತಾಯಿಸಿದ ರಾಹುಲ್ ಗಾಂಧಿ, ರಾಜ್ಯದಾದ್ಯಂತ ಜನರೊಂದಿಗೆ ಸಂಪರ್ಕದಲ್ಲಿರುವಂತೆ ಪಕ್ಷದ ಕಾರ್ಯಕರ್ತರಿಗೆ ಕರೆ ನೀಡಿದರು. ನೀವು ಗೋವಾದ ಬಗ್ಗೆ ಗಮನ ಹರಿಸಿ. ದೆಹಲಿಯಲ್ಲಿ ನಾವು ಶೀಘ್ರದಲ್ಲೇ ನರೇಂದ್ರ ಮೋದಿ ಮತ್ತು ಅಮಿತ್ ಶಾ ಅವರನ್ನು ಎದುರಿಸುತ್ತೇವೆ. ಅದರ ಬಗ್ಗೆ ನೀವು ಚಿಂತಿಸಬೇಕಿಲ್ಲ. ಕೆಲಸ ನಡೆಯುತ್ತಿದೆ; ಅವರ ಅವಧಿ ಮುಗಿಯುವ ದಿನ ಸಮೀಪಿಸುತ್ತಿದೆ ಎಂದು ಹೇಳಿದರು.

### ರಾಜಕೀಯ ಬೆಂಬಲ, ಪ್ರಚಾರಕ್ಕೆ ಪ್ರತಿಯಾಗಿ ಅದಾನಿ, ಅಂಬಾನಿಗೆ ಕೇಂದ್ರದಿಂದ ಅನುಕೂಲ

ರಾಜಕೀಯ ಬೆಂಬಲ ಮತ್ತು ಪ್ರಚಾರದ ಪ್ರತಿಯಾಗಿ ಮೂಲಸೌಕರ್ಯ ಯೋಜನೆಗಳು, ಭೂಮಿ ಹಾಗೂ ಇತರ ಆರ್ಥಿಕ ಅವಕಾಶಗಳನ್ನು ಕೈಗಾರಿಕೋದ್ಯಮಿಗಳಾದ ಗೌತಮ್ ಅದಾನಿ ಮತ್ತು ಮುಖೇಶ್ ಅಂಬಾನಿ ಅವರಿಗೆ ನೀಡುವ ಮೂಲಕ ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ಅವರಿಗೆ ಅನುಕೂಲ ಮಾಡಿಕೊಡುತ್ತಿದೆ ಎಂದೂ ರಾಹುಲ್ ಗಾಂಧಿ ಆರೋಪಿಸಿದರು. ಗೋವಾ ಸ್ವರ್ಗದಂತಿರುವ ಪ್ರದೇಶ. ದೇಶದ ಅತ್ಯಂತ ಸುಂದರ ಸ್ಥಳಗಳಲ್ಲಿ ಒಂದಾಗಿರುವ ಗೋವಾ ತನ್ನದೇ ಆದ ಶ್ರೀಮಂತ ಸಂಸ್ಕೃತಿಯನ್ನು ಹೊಂದಿದೆ ಎಂದು ಹೇಳಿದ ಅವರು, ರಾಜ್ಯದ ಭೂಮಿಯನ್ನು ಕೋಟ್ಯಧಿಪತಿಗಳಿಗೆ ಹಸ್ತಾಂತರಿಸಲಾಗುತ್ತಿದೆ ಎಂದು ದೂರಿದರು. ದೇಶದಲ್ಲೇ ಗೋವಾದಲ್ಲಿ ನಿರುದ್ಯೋಗ ಪ್ರಮಾಣ ಅತ್ಯಧಿಕವಾಗಿದೆ ಎಂದು ಪ್ರತಿಪಾದಿಸಿದ ಕಾಂಗ್ರೆಸ್ ನಾಯಕ, ಉದ್ಯೋಗಾವಕಾಶಗಳಿಗಾಗಿ ಯುವಜನರು ವಿದೇಶಗಳಿಗೆ ತೆರಳುವಂತಾಗಿದೆ ಎಂದರು. ಬಿಜೆಪಿ ಸರ್ಕಾರ ರಾಜ್ಯದ ಉದ್ಯೋಗ ವ್ಯವಸ್ಥೆಯನ್ನು ಹಾಳುಮಾಡುತ್ತಿದೆ, ಸರ್ಕಾರದ ಆಡಳಿತವನ್ನು ?ಭ್ರಷ್ಟಾಚಾರದ ವಿಶೇಷ ಗೋವಾ ಮಾದರಿ? ಎಂದು ಬಣ್ಣಿಸಿದರು. ಪ್ರಧಾನಿ ಮೋದಿ ಅವರೊಂದಿಗೆ ಗುರುತಿಸಿಕೊಂಡಿರುವ ಗುಜರಾತ್ ಮಾದರಿಯನ್ನೂ ಅವರು ಈ ಸಂದರ್ಭದಲ್ಲಿ ಪ್ರಸ್ತಾಪಿಸಿದರು.

# ಬರ, ಕಬ್ಬು ಬೆಳೆಗಾರರ ಸಮಸ್ಯೆ ಚರ್ಚೆಗೆ ಪ್ರಧಾನಿ ಭೇಟಿಗೆ ಕಾಲಾವಕಾಶ ಕೋರಿದ ಸಿಎಂ ಡಿ.ಕೆ.ಶಿವಕುಮಾರ್

**ಮೈಸೂರು, ಅ.18:** ಕರ್ನಾಟಕದ ಕಬ್ಬು ಬೆಳೆಗಾರರ ಸಮಸ್ಯೆಗಳು ಮತ್ತು ಬರಗಾಲದ ಕುರಿತು ಚರ್ಚಿಸಲು ಪ್ರಧಾನಿ ನರೇಂದ್ರ ಮೋದಿಯವರ ಭೇಟಿಗೆ ಸಿಎಂ ಡಿ.ಕೆ. ಶಿವಕುಮಾರ ಕಾಲಾವಕಾಶ ಕೋರಿದ್ದಾರೆ



ಮೈಸೂರಿನಲ್ಲಿ ಮಾತನಾಡಿದ ಅವರು, ಕಬ್ಬು ಬೆಳೆಗಾರರು ಎದುರಿಸುತ್ತಿರುವ ಸಮಸ್ಯೆಗಳು ಮತ್ತು ಕರ್ನಾಟಕದಲ್ಲಿನ ಬರಗಾಲದ ಪರಿಸ್ಥಿತಿಯ ಕುರಿತು ಚರ್ಚಿಸಲು ಪ್ರಧಾನಿ ನರೇಂದ್ರ ಮೋದಿಯವರ ಭೇಟಿಗೆ ಅವಕಾಶ ಕೋರಲಾಗಿದೆ. ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಪ್ರಧಾನಿಯವರನ್ನು ಭೇಟಿ ಮಾಡಲು ಸರ್ವಪಕ್ಷಗಳ ನಿಯೋಗದೊಂದಿಗೆ ಬರುವಂತೆ ವಿರೋಧ ಪಕ್ಷದ ನಾಯಕರಿಗೆ ಮನವಿ ಮಾಡುವುದಾಗಿ ತಿಳಿಸಿದರು.

ಆದರೆ, ವಿರೋಧ ಪಕ್ಷದ ನಾಯಕರು ಈ ಹಿಂದೆ ನಿಯೋಗದಲ್ಲಿ ಸೇರಲು ತಮ್ಮ ಸಮ್ಮತಿಯನ್ನು ವ್ಯಕ್ತಪಡಿಸಿದ್ದು, ಅವರು ತಮ್ಮ ಮಾತಿಗೆ ಬದ್ಧರಾಗಿರುತ್ತಾರೆ ಎಂದು ನಂಬಿದ್ದೇನೆ ಎಂದರು.

ಕಬ್ಬು ಬೆಳೆಗಾರರ ಪ್ರಸಕ್ತ ಪ್ರತಿಭಟನೆಗೆ ಸಂಬಂಧಿಸಿದ ಪ್ರಶ್ನೆಗೆ ಉತ್ತರಿಸಿದ ಅವರು, ರೈತರು ಪ್ರತಿಭಟನೆಯನ್ನು ಹಿಂಪಡೆದು ಮಾತುಕತೆ ಮೂಲಕ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳುವಂತೆ ಮನವಿ ಮಾಡಿದರು.

ನಾನು ರೈತರೊಂದಿಗೆ ಮಾತನಾಡಿದ್ದೇನೆ ಮತ್ತು ಪ್ರತಿಭಟನೆಯನ್ನು ಹಿಂಪಡೆಯುವಂತೆ ಮಾಧ್ಯಮಗಳ ಮೂಲಕ ಮತ್ತೊಮ್ಮೆ ಮನವಿ ಮಾಡುತ್ತೇನೆ. ಎಲ್ಲರೂ ಒಟ್ಟಾಗಿ ಕುಳಿತು ಪರಿಹಾರ ಕಂಡುಕೊಳ್ಳಬೇಕು. ಈ ವಿಷಯವನ್ನು ರಾಜಕೀಯಗೊಳಿಸುವುದರಲ್ಲಿ ಅಥವಾ ಯರ‍್ರಗೊರ‍್ರನೆ ಆರೋಪ ಮಾಡುವುದರಲ್ಲಿ ಯಾವುದೇ ಅರ್ಥವಿಲ್ಲ. ಇತರ ಪಕ್ಷದವರು ಇಂತಹ ರಾಜಕೀಯ ಮಾಡಬಹುದು, ಆದರೆ ನಾನು ಮಾಡುವುದಿಲ್ಲ. ರೈತರು ಮತ್ತು ಜನರ ಕಲ್ಯಾಣವನ್ನು ಖಚಿತಪಡಿಸುವುದೇ ನಮ್ಮ ಗುರಿಯಾಗಿದೆ. ರೈತರ ಜೀವನೋಪಾಯ ನಮಗೆ ಮುಖ್ಯವಾಗಿದೆ ಎಂದು ಹೇಳಿದರು. ಕಬ್ಬಿನ ಬೆಂಬಲ ಬೆಲೆಗೆ ರಾಜ್ಯ ಸರ್ಕಾರವೂ ಆರ್ಥಿಕ ನೆರವು ನೀಡಬೇಕೆಂಬ ಬೇಡಿಕೆಯ ಕುರಿತು ಕೇಳಲಾದ ಪ್ರಶ್ನೆಗೆ ಉತ್ತರಿಸಿದ ಶಿವಕುಮಾರ್, ಈ ಬಗ್ಗೆ ಚರ್ಚಿಸಬಹುದು ಎಂದರು. ರಾಜ್ಯದಲ್ಲಿ ವಿವಿಧ ವರ್ಗದ ರೈತರಿದ್ದಾರೆ, ಎಲ್ಲರ ಹಿತಾಸಕ್ತಿಗಳನ್ನು ನಾವು ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ ಎಂದು ಹೇಳಿದರು.

## ಸಿಇಸಿ ನೇಮಕಾತಿ ಕಾಯ್ದೆ ಬೆಂಬಲಿಸಿ ತಪ್ಪು ಮಾಡಿದೆ

**ವಿಶಾಖಪಟ್ಟಣಂ, ಅ.18:** ಚುನಾವಣಾ ಆಯುಕ್ತರ ನೇಮಕಾತಿ ಪ್ರಕ್ರಿಯೆಯಲ್ಲಿ ಸುಧಾರಣೆ ತರಬೇಕೆಂದು ವೈಎಸ್‌ಆರ್‌ಸಿಪಿ ಮುಖ್ಯಸ್ಥ ಮತ್ತು ಆಂಧ್ರಪ್ರದೇಶ ಮಾಜಿ ಸಿಎಂ ವೈ.ಎಸ್. ಜಗನ್‌ಮೋಹನ್ ರೆಡ್ಡಿ ಕರೆ ನೀಡಿದ್ದಾರೆ. ಮುಖ್ಯ ಚುನಾವಣಾ ಆಯುಕ್ತರ ಆಯ್ಕೆ ಪ್ರಕ್ರಿಯೆಯು ಆಡಳಿತಾರೂಢ ಸರ್ಕಾರದ ಪ್ರಭಾವದಿಂದ ಮುಕ್ತವಾಗಿರಬೇಕು ಎಂದು ಜಗನ್ ಪ್ರತಿಪಾದಿಸಿದ್ದಾರೆ. ವಿಶಾಖಪಟ್ಟಣಂನಲ್ಲಿ ಸುದ್ದಿಗೋಷ್ಠಿಯಲ್ಲಿ ಭಾನುವಾರ ಮಾತನಾಡಿದ ಅವರು, 2023ರಲ್ಲಿ ಚುನಾವಣಾ ಆಯುಕ್ತರ ನೇಮಕಾತಿ ಕಾಯ್ದೆ ಬೆಂಬಲಿಸಿ ತಪ್ಪು ಮಾಡಿದೆ. ಬೆಂಬಲ ನೀಡಿದ್ದಕ್ಕಾಗಿ ನಾನೀಗ ವಿಷಾದಿಸುತ್ತೇನೆ" ಎಂದು ಹೇಳಿದರು. ಚುನಾವಣೆ ಮತ್ತು ಪರೀಕ್ಷೆಗಳ ನಡುವೆ ಹೋಲಿಕೆ ಮಾಡಿದ ಜಗನ್, ವಿದ್ಯಾರ್ಥಿಯಿಂದ ಪರೀಕ್ಷಕನನ್ನು ನೇಮಿಸಲು ಸಾಧ್ಯವಿಲ್ಲ. ತಟಸ್ಥವಲ್ಲದ ಪ್ರಕ್ರಿಯೆ ಮೂಲಕ ನೇಮಕಗೊಂಡರೆ ಪ್ರಾಮಾಣಿಕ ಚುನಾವಣಾ ಆಯುಕ್ತರೂ ಸಹ ನಿಷ್ಪಕ್ಷಪಾತದ ಬಗ್ಗೆ ಪ್ರಶ್ನೆಗಳನ್ನು ಎದುರಿಸಬೇಕಾಗುತ್ತದೆ ಎಂದು ತಿಳಿಸಿದ್ದಾರೆ.



# ಕಬ್ಬು ಬೆಳೆಗಾರರ ಬೇಡಿಕೆ: ಕೇಂದ್ರ ಕೃಷಿ ಸಚಿವರ ಜತೆ ಚರ್ಚಿಸುವೆ

■ ತಜ್ಞರ ವರದಿ ಬಂದ ನಂತರ ಕ್ರಮ, ಬೆಳೆಗಾರರು ಶಾಂತಿ ಕಾಪಾಡುವಂತೆ ಎಚ್‌ಡಿಕೆ ಮನವಿ

**ಹಾಸನ, ಅ.18:** ರಾಜ್ಯ ಕಬ್ಬು ಬೆಳೆಗಾರರ ಸಂಕಷ್ಟದ ಬಗ್ಗೆ ಕೇಂದ್ರದ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಹಾಗೂ ಆಹಾರ ನಾಗರಿಕ ಪೂರೈಕೆ ಖಾತೆ ಸಚಿವ ಪ್ರಲ್ಹಾದ ಜೋಶಿ ಅವರೊಂದಿಗೆ ಚರ್ಚೆ ನಡೆಸುವುದಾಗಿ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ತಿಳಿಸಿದ್ದಾರೆ.



ಹಾಸನದಲ್ಲಿ ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ರಾಜ್ಯದಲ್ಲಿ ಪ್ರಮುಖವಾಗಿ, ಅದರಲ್ಲೂ ಉತ್ತರ ಕರ್ನಾಟಕ ಭಾಗದಲ್ಲಿ ಕಬ್ಬು ಬೆಳೆಗಾರರು ತಮ್ಮ ಬೇಡಿಕೆಗಳ ಬಗ್ಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಮುಂದೆ ಕಬ್ಬಿನ ದರವನ್ನು ಏರಿಕೆ ಮಾಡಬೇಕು ಎಂದು ಹೋರಾಟ ನಡೆಸುತ್ತಿದ್ದಾರೆ. ಈಗ ಕಬ್ಬನ್ನು ಎಥೆನಾಲ್ ತಯಾರಿಕೆಗೆ ಉಪಯೋಗ ಮಾಡುತ್ತಿದ್ದಾರೆ. 20% ಪೆಟ್ರೋಲ್ ಜೊತೆ ಎಥೆನಾಲ್ ಬೆರೆಸಿ ಉಪಯೋಗ ಮಾಡಲಾಗುತ್ತಿದೆ. ಇನ್ನೊಂದು ಕಡೆ ಎಥೆನಾಲ್ ದರ ಏರಿಕೆ ಮಾಡಬೇಕು ಎಂದು ಒತ್ತಾಯಿಸುತ್ತಿದ್ದಾರೆ ಎಂದು ಹೇಳಿದರು.

ಎಂಎಸ್‌ಪಿ ದರವನ್ನು ಏರಿಕೆ ಮಾಡುವಂತೆ ಕೇಂದ್ರದ ಮುಂದೆ ಬೇಡಿಕೆ ಇಟ್ಟಿದ್ದಾರೆ. ಈ ಬೇಡಿಕೆ ಸಂಬಂಧ ಪ್ರಲ್ಹಾದ ಜೋಶಿ ಅವರು ಕೇಂದ್ರ ಕೃಷಿ ಸಚಿವರ ಜತೆ ಚರ್ಚಿಸಿದ್ದಾರೆ. ಅಲ್ಲದೆ ಕೇಂದ್ರ ಸರ್ಕಾರ ಈಗಾಗಲೇ ತಜ್ಞರ ಸಮಿತಿಯನ್ನು ನೇಮಿಸಿದೆ. ರೈತರ ಬೇಡಿಕೆಗಳನ್ನು ಈಡೇರಿಸಲು ಸಮಿತಿ ವರದಿ ತೆಗೆದುಕೊಂಡು ತೀರ್ಮಾನ ಮಾಡಲಾಗುವುದು ಎಂದು ಜೋಶಿ ಹೇಳಿದ್ದಾರೆ. ಹೀಗಾಗಿ ಕಬ್ಬು ಬೆಳೆಗಾರರು ಶಾಂತಿಯಿಂದ ಇರಬೇಕು ಎಂದು ಸಚಿವರು ಮನವಿ ಮಾಡಿದರು.

ರೈತರು ಟನ್ ಕಬ್ಬಿಗೆ 1000 ರೂ. ಕೊಡಲು ರಾಜ್ಯ ಸರ್ಕಾರ ನಿರ್ಧಾರ ಮಾಡಬೇಕು ಎಂದು ಸಿಎಂಗೆ ಮನವಿ ಮಾಡಿದ್ದಾರೆ. ತಮಿಳುನಾಡಿನಲ್ಲಿ 700 ರೂಪಾಯಿ ಕೊಡಲು ನಿರ್ಧಾರ ಮಾಡಿದ್ದಾರೆ. ಅದೇ ರೀತಿ ಇಲ್ಲಿಯೂ 1000 ರೂ. ಕೊಡಬೇಕು ಎಂದು ಹೇಳಿದ್ದಾರೆ. 1000 ನೀಡಿದರೆ ಸಿಎಂಗೆ 1 ಲಕ್ಷ ರೂ. ಗುಲಾಬಿ ಹಾರ ಹಾಕಿ ಸನ್ಮಾನ ಮಾಡುತ್ತೇವೆ. ಹಾಗಾಗಿ ಮುಖ್ಯಮಂತ್ರಿಗಳು ಸಿಹಿಸುದ್ದಿ ಕೊಡುವುದನ್ನು ಕಾಯುತ್ತಿದ್ದೇನೆ ಎಂದು ಕುಮಾರಸ್ವಾಮಿ ಅವರು ಹೇಳಿದರು.

# ಕಂಬಳ ಕ್ರೀಡೆಯೂ ವಿಶ್ವಖ್ಯಾತಿ ಪಡೆಯಲಿ: ಸಚಿವ ಯತೀಂದ್ರ ಆಶಾವಾದ

■ ಮೈಸೂರು ದಸರಾಗೆ ಕಂಬಳ ಕ್ರೀಡಾಕೂಟದ ಮೆರುಗು: ಇತಿಹಾಸದಲ್ಲೇ ಮೊದಲ ಬಾರಿಗೆ ಅದ್ದೂರಿ ಉದ್ಘಾಟನೆ




**ಮೈಸೂರು, ಅ.18:** ಮೈಸೂರು ದಸರಾ ಸಾಂಸ್ಕೃತಿಕ ವೈಭವಕ್ಕೆ ಈ ಬಾರಿ ಕಂಬಳ ಕ್ರೀಡಾಕೂಟವು ಮತ್ತಷ್ಟು ಮೆರುಗು ನೀಡಿದೆ, ನಮ್ಮ ರಾಜ್ಯದ ಗ್ರಾಮೀಣ ಸಂಸ್ಕೃತಿಯ ಪ್ರತೀಕವಾಗಿರುವ ಈ ಕಂಬಳ ಕ್ರೀಡೆಯು, ಮೈಸೂರು ದಸರೆಯಷ್ಟೇ ಜಾಗತಿಕ ಮಟ್ಟದಲ್ಲಿ ವಿಶ್ವವಿಖ್ಯಾತಿ ಪಡೆಯಲಿ ಎಂದು ನಗರಾಭಿವೃದ್ಧಿ ಸಚಿವ ಡಾ.ಯತೀಂದ್ರ ಸಿದ್ದರಾಮಯ್ಯ ಆಶಿಸಿದರು.



ಮೈಸೂರು ದಸರಾ

ದಸರಾ ಮಹೋತ್ಸವದ ಅಂಗವಾಗಿ ಜಿಲ್ಲಾಡಳಿತದ ವತಿಯಿಂದ ಸಾತಗಳ್ಳಿಯ ವಿ.ಟಿ.ಯು ಕಾಲೇಜು ಬಳಿ ಮೊದಲ ಬಾರಿಗೆ ಆಯೋಜಿಸಲಾಗಿರುವ ಕರಾವಳಿಯ ಹೆಮ್ಮೆಯ ಜನಪದ ಕ್ರೀಡೆ ಕಂಬಳಕ್ಕೆ ಹಸಿರು ನಿಶಾನೆ ತೋರಿಸಿ ಮಾತನಾಡಿ, ಕರಾವಳಿ ಹಾಗೂ ದಕ್ಷಿಣ ಕನ್ನಡ ಜಿಲ್ಲೆಯ ಸಾಂಪ್ರದಾಯಿಕ ಕ್ರೀಡೆಗೆ ಸೂಕ್ತ ಪ್ರೋತ್ಸಾಹ ನೀಡುವ ಹಾಗೂ ನಮ್ಮ ನಾಡಿನ ವೈವಿಧ್ಯಮಯ ಸಂಸ್ಕೃತಿಯನ್ನು ಯುವ ಪೀಳಿಗೆಗೆ ಪರಿಚಯಿಸುವ ಸದುದ್ದೇಶದಿಂದ ಮುಖ್ಯಮಂತ್ರಿಗಳ ಒತ್ತಾಸೆಯ ಮೇರೆಗೆ ಈ ಐತಿಹಾಸಿಕ ಪಾರಂಪರಿಕ ಪಂದ್ಯಾವಳಿಯನ್ನು ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು.

ಕರಾವಳಿ ಭಾಗದಿಂದ 150ಕ್ಕೂ ಹೆಚ್ಚು ಜೋಡಿ ಉತ್ಸಾಹಿ ಕೋಣಗಳ ತಂಡಗಳು ಆಗಮಿಸಿರುವುದು ಸಂತಸ ತಂದಿದೆ. ಈ ವೈಭವದ ಕಂಬಳ ಕಣವನ್ನು ವೀಕ್ಷಿಸಲು ಆಗಮಿಸುತ್ತಿರುವ ಅಪಾರ ಸಂಖ್ಯೆಯ ಸಾರ್ವಜನಿಕರು ಹಾಗೂ ಕ್ರೀಡಾಪ್ರೇಮಿಗಳಿಗೆ ಸಕಲ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲಾಗಿದೆ. ಈ ಐತಿಹಾಸಿಕ ಕಾರ್ಯಕ್ರಮವನ್ನು ಆಯೋಜನೆ ಮಾಡಲು ಶ್ರಮಿಸಿದ ಶಾಸಕ ಅಶೋಕ್ ರೈ ಅವರಿಗೆ ಕೃತಜ್ಞತೆ ತಿಳಿಸಿದರು.



ಶಾಸಕರಾದ ಜಿ.ಟಿ. ದೇವೇಗೌಡ, ಅಶೋಕ್ ಕುಮಾರ್ ರೈ, ವಿಧಾನ ಪರಿಷತ್ ಸದಸ್ಯ ಕೆ. ಶಿವಕುಮಾರ್, ಮೈಸೂರು ಮೃಗಾಲಯ ಪ್ರಾಧಿಕಾರದ ಅಧ್ಯಕ್ಷರಾದ ರಂಗಸ್ವಾಮಿ, ಕರ್ನಾಟಕ ರಾಜ್ಯ ಕಂಬಳ ಅಸೋಸಿಯೇಷನ್ (ರಾಜ್ಯ ಕಂಬಳ ಸಮಿತಿ) ಅಧ್ಯಕ್ಷ ಡಾ. ದೇವಿಪ್ರಸಾದ್ ಶೆಟ್ಟಿ, ಮೈಸೂರು ದಸರಾ ಕಂಬಳ ಉಪಸಮಿತಿ ಅಧ್ಯಕ್ಷ ರವಿರಾಜ್, ದಕ್ಷಿಣ ಕನ್ನಡ ಜಿಲ್ಲಾ ಕಂಬಳ ಸಮಿತಿ ಅಧ್ಯಕ್ಷ ಚಂದ್ರಹಾಸ ಸಾಧು ಸನಿಲ್, ಡಿಸಿ ಜಿ. ಲಕ್ಷ್ಮೀಕಾಂತ ರೆಡ್ಡಿ, ಜಿಪಂ ಸಿಇಓ ಯುಕೇಶ್ ಕುಮಾರ್, ಎಸ್‌ಪಿ ಮಲ್ಲಿಕಾರ್ಜುನ ಬಾಲದಂಡಿ, ಮೈಸೂರು ಪಾಲಿಕೆ ಆಯುಕ್ತೆ ಎಂ.ಕೆ. ಸವಿತಾ ಮತ್ತಿತರರು ಇದ್ದರು.

# ಕರ್ನಾಟಕದಲ್ಲಿ ಸರ್ಕಾರಿ ನೌಕರರ ಹಾಜರಾತಿಗೆ 'ಕರ್ತವ್ಯ' ಆಪ್: ಸರ್ಕಾರ ಆದೇಶ

## ನೌಕರರು ಕೇಂದ್ರಸ್ಥಾನದಲ್ಲಿ ಕಡ್ಡಾಯವಾಗಿ ವಾಸವಿರುವುದನ್ನು ಖಾತ್ರಿಪಡಿಸಿಕೊಳ್ಳಲು ತಂತ್ರಾಂಶ ಅಳವಡಿಕೆ

**ಬೆಂಗಳೂರು, ಅ.18:** ಸರ್ಕಾರಿ ಅಭಿವೃದ್ಧಿ ಕೆಲಸಗಳು ಹಾಗೂ ಸಾರ್ವಜನಿಕ ಸೇವೆಗಳು ಜನಸಾಮಾನ್ಯರಿಗೆ ತಲುಪಬೇಕಾದರೆ ಅಧಿಕಾರಿಗಳು ಮತ್ತು ನೌಕರರು ತಮ್ಮ ಕಾರ್ಯಕ್ಷೇತ್ರ (ಕೇಂದ್ರಸ್ಥಾನ)ದಲ್ಲಿಯೇ ನೆಲೆಸಿರಬೇಕು. ಈ ನಿಟ್ಟಿನಲ್ಲಿ ಸರ್ಕಾರಿ ನೌಕರರು ಕಡ್ಡಾಯವಾಗಿ ನಿಯೋಜಿತ ಕೇಂದ್ರಸ್ಥಾನದಲ್ಲೇ ವಾಸವಿರುವುದನ್ನು ಖಾತ್ರಿಪಡಿಸಿಕೊಳ್ಳಲು ಕರ್ನಾಟಕ ಸರ್ಕಾರ ಈಗ ಜಿಯೋ–ಫೆನ್ಸಿಂಗ್ ತಂತ್ರಜ್ಞಾನ ಆಧಾರಿತ 'ಕರ್ತವ್ಯ' ಆಪ್ ಮೂಲಕ ರಾತ್ರಿ ವೇಳೆಯ ಹಾಜರಾತಿ ದಾಖಲಿಸುವುದನ್ನು ಕಡ್ಡಾಯಗೊಳಿಸಿ ಮಹತ್ವದ ಆದೇಶ ಹೊರಡಿಸಿದೆ.

ಈ ಸಂಬಂಧ ಮೊದಲ ಹಂತವಾಗಿ, 2026ನೇ ನವೆಂಬರ್ 1 ರಿಂದ ಜಾರಿಗೆ ಬರುವಂತೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ತಾಲ್ಲೂಕು ಆಸ್ಪತ್ರೆಗಳು ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಕರ್ತವ್ಯ ನಿರ್ವಹಿಸುವ ಎಲ್ಲಾ ವೈದ್ಯರಿಗೆ ಈ ರಾತ್ರಿ ಹಾಜರಾತಿಯನ್ನು ಕಡ್ಡಾಯಗೊಳಿಸಲಾಗಿದೆ. ಪ್ರತಿದಿನ ರಾತ್ರಿ 9.00 ಗಂಟೆಯ ನಂತರ, ವೈದ್ಯರು ತಮ್ಮ ಕೇಂದ್ರಸ್ಥಾನವಿರುವ ನಗರ, ಪಟ್ಟಣ ಅಥವಾ ಗ್ರಾಮದ ಭೌಗೋಳಿಕ ವ್ಯಾಪ್ತಿಯೊಳಗಿದ್ದುಕೊಂಡೇ 'ಕರ್ತವ್ಯ' ಆಪ್ ಮೂಲಕ ಹಾಜರಾತಿಯನ್ನು ನಮೂದಿಸಬೇಕು.

ಮಂಜೂರಾದ ರಜೆಯಲ್ಲಿರುವ ಅಧಿಕಾರಿ, ಸಿಬ್ಬಂದಿ ಸಕ್ಷಮ ಪ್ರಾಧಿಕಾರದ ಅನುಮತಿ ಪಡೆದು ಕೇಂದ್ರಸ್ಥಾನದಿಂದ ಹೊರಗೆ ಅಧಿಕೃತ ಕರ್ತವ್ಯದಲ್ಲಿರುವ ಮತ್ತು ಕೇಂದ್ರಸ್ಥಾನ ಬಿಡಲು ಸಕ್ಷಮ ಪ್ರಾಧಿಕಾರದಿಂದ ಪೂರ್ವಾನುಮತಿ ಪಡೆದಿರುವ ಅಧಿಕಾರಿ, ಸಿಬ್ಬಂದಿಗೆ ವಿನಾಯಿತಿ ಇರುತ್ತದೆ. ಈ ಸಂಬಂದ ಸದರಿ ರಜೆ ಅಥವಾ ಅನುಮತಿ ಬಗ್ಗೆ ಕಾರಣಗಳನ್ನು ಆಪ್‌ನಲ್ಲಿ ಸ್ಪಷ್ಟವಾಗಿ ದಾಖಲಿಸಬೇಕಾಗುತ್ತದೆ.

ಆಯುಕ್ತರು ಹಾಗೂ ಜಿಲ್ಲಾ ಆರೋಗ್ಯ ಅಧಿಕಾರಿಗಳು ಪ್ರತಿ ತಿಂಗಳು ರಾತ್ರಿ ಹಾಜರಾತಿ ವರದಿಗಳನ್ನು ಕಡ್ಡಾಯವಾಗಿ ಪರಿಶೀಲಿಸಲಿದ್ದಾರೆ. ಸಕ್ಷಮ ಪ್ರಾಧಿಕಾರದ ಅನುಮತಿಯಿಲ್ಲದೆ ಕೇಂದ್ರಸ್ಥಾನದಲ್ಲಿ ವಾಸವಿರದ ಅಧಿಕಾರಿಗಳ ವಿರುದ್ಧ ನಾಗರಿಕ ಸೇವಾ ನಿಯಮಗಳಡಿ ಕಟ್ಟುನಿಟ್ಟಿನ ಶಿಸ್ತುಕ್ರಮ ಜರುಗಿಸಲಾಗುವುದು.

ಉಪಲೋಕಾಯುಕ್ತರ ವಿಚಾರಣೆ ವೇಳೆ ಹಲವು ನೌಕರರು ತಮ್ಮ ನಿಯೋಜಿತ ಕೇಂದ್ರಸ್ಥಾನದಲ್ಲಿ ವಾಸವಿರದೆ ದೂರದ ಊರುಗಳಿಂದ ಆಡಳಿತ ನಡೆಸುತ್ತಿದ್ದು, ಇದರಿಂದ ಕರ್ತವ್ಯಕ್ಕೆ ಸರಿಯಾದ ಸಮಯಕ್ಕೆ ಹಾಜರಾಗದೆ ಸಾರ್ವಜನಿಕರಿಗೆ ತೀವ್ರ ತೊಂದರೆಯಾಗುತ್ತಿರುವುದು ಕಂಡುಬಂದಿತ್ತು. ಸಾರ್ವಜನಿಕರ ಹಿತದೃಷ್ಟಿಯಿಂದ ಹಾಗೂ ಸೇವಾ ನಿಯಮಗಳ ಪಾಲನೆಗಾಗಿ ಮಾನ್ಯ ಮುಖ್ಯಮಂತ್ರಿಗಳ ಅನುಮೋದನೆಯೊಂದಿಗೆ ಪ್ರಜಾ ಸೇವಾ ಇಲಾಖೆಯು ಈ ನೂತನ ವ್ಯವಸ್ಥೆಯನ್ನು ಜಾರಿಗೆ ತಂದಿದೆ.



ಮುಂದಿನ ದಿನಗಳಲ್ಲಿ ಈ ಪ್ರಾಯೋಗಿಕ ಯೋಜನೆಯ ಫಲಿತಾಂಶದ ಆಧಾರದ ಮೇಲೆ, ಸರ್ಕಾರದ ಇತರ ಇಲಾಖೆಗಳು ಹಾಗೂ ವೃಂದಗಳ ನೌಕರರಿಗೂ 'ಕರ್ತವ್ಯ' ಆಪ್ ಆಧಾರಿತ ಹಾಜರಾತಿ ವ್ಯವಸ್ಥೆಯನ್ನು ವಿಸ್ತರಿಸಲಾಗುವುದು. ಈ ಆದೇಶದ ಪಾಲನೆಯಲ್ಲಿ ಯಾವುದೇ ಲೋಪ ಕಂಡುಬಂದಲ್ಲಿ ಸಂಬಂಧಪಟ್ಟ ಇಲಾಖಾ ಮುಖ್ಯಸ್ಥರು ಹಾಗೂ ಅಧಿಕಾರಿಗಳನ್ನೇ ವೈಯಕ್ತಿಕವಾಗಿ ಜವಾಬ್ದಾರರನ್ನಾಗಿ ಮಾಡಲಾಗುವುದ

–ಹರ್ಷಗುಪ್ತ, ಪ್ರಜಾಸೇವಾ ಇಲಾಖೆ ಪ್ರಧಾನ ಕಾರ್ಯದರ್ಶಿ

### ಗುತ್ತಿಗೆ ನೌಕರರಿಗೂ ಅನ್ವಯ

ಕರ್ನಾಟಕ ಸರ್ಕಾರದ ವಿವಿಧ ಇಲಾಖೆಗಳು, ಕಚೇರಿಗಳು, ಮಂಡಳಿಗಳು, ನಿಗಮಗಳು, ಪ್ರಾಧಿಕಾರಗಳು ಹಾಗೂ ಸರ್ಕಾರಿ ಅನುದಾನಿತ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಗುತ್ತಿಗೆ ಮತ್ತು ಹೊರಗುತ್ತಿಗೆ ನೌಕರರ ಹಾಜರಾತಿಯನ್ನು ಇನ್ನುಂದೆ 'ಕರ್ತವ್ಯ' ಆಪ್ ಮೂಲಕವೇ ದಾಖಲಿಸುವುದನ್ನು ಕಡ್ಡಾಯಗೊಳಿಸಿ ರಾಜ್ಯ ಸರ್ಕಾರ ಸುತ್ತೋಲೆ ಹೊರಡಿಸಿದೆ. ಇಲ್ಲಿಯವರೆಗೆ ಕಾಯಂ ಸರ್ಕಾರಿ ನೌಕರರಿಗೆ ಮಾತ್ರ ಸೀಮಿತವಾಗಿದ್ದ 'ಕರ್ತವ್ಯ' ಆಪ್ ಅನ್ನು, ಇದೀಗ ಗುತ್ತಿಗೆ ಮತ್ತು ಹೊರಗುತ್ತಿಗೆ ನೌಕರರಿಗೂ ವಿಸ್ತರಿಸುವ ಪ್ರಸ್ತಾವನೆಗೆ ಮುಖ್ಯಮಂತ್ರಿಗಳು ಅನುಮೋದನೆ ನೀಡಿದ್ದಾರೆ. ಸರ್ಕಾರದ ಅಧೀನದಲ್ಲಿರುವ ಎಲ್ಲಾ ಗುತ್ತಿಗೆ ಹಾಗೂ ಹೊರಗುತ್ತಿಗೆ ನೌಕರರನ್ನು 2026ರ ನವೆಂಬರ್ 25ರೊಳಗಾಗಿ 'ಕರ್ತವ್ಯ' ಆಪ್‌ನಲ್ಲಿ ನೋಂದಾಯಿಸಿಕೊಳ್ಳಲು ಆಯಾ ಇಲಾಖಾ ಮುಖ್ಯಸ್ಥರಿಗೆ ಮತ್ತು ಕಚೇರಿಗಳಿಗೆ ಸೂಚಿಸಲಾಗಿದೆ.

### ಆಪ್ ಹಾಜರಾತಿ ಆಧಾರದಲ್ಲೇ ಗುತ್ತಿಗೆ ಏಜೆನ್ಸಿಗಳ ಬಿಲ್ ಬಿಡುಗಡೆ

2026ರ ಡಿಸೆಂಬರ್ 1ರಿಂದ ಎಲ್ಲಾ ಗುತ್ತಿಗೆ ಮತ್ತು ಹೊರಗುತ್ತಿಗೆ ಸಿಬ್ಬಂದಿಯ ಹಾಜರಾತಿಯನ್ನು ಕೇವಲ 'ಕರ್ತವ್ಯ' ಆಪ್‌ನಲ್ಲಿ ಮಾತ್ರವೇ ದಾಖಲಿಸಬೇಕು. 2027ರ ಜನವರಿ 1ರಿಂದ ಅನ್ವಯವಾಗುವಂತೆ, ಗುತ್ತಿಗೆ ನೌಕರರ ವೇತನ ಹಾಗೂ ಹೊರಗುತ್ತಿಗೆ ಏಜೆನ್ಸಿಗಳ ಬಿಲ್‌ಗಳನ್ನು 'ಕರ್ತವ್ಯ' ಆಪ್‌ನಿಂದ ಪಡೆದ ಹಾಜರಾತಿ ವರದಿಯ ಆಧಾರದ ಮೇಲೆ ಮಾತ್ರ ಬಿಡುಗಡೆ ಮಾಡಲಾಗುವುದು. ಆಪ್‌ನಲ್ಲಿ ಹಾಜರಾತಿ ದಾಖಲಾಗದಿದ್ದರೆ ಯಾವುದೇ ಪಾವತಿ ಮಾಡದಂತೆ ಸೆಳೆಯುವ ಮತ್ತು ಬಟವಾಡೆ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ನಿರ್ದೇಶನ ನೀಡಲಾಗಿದೆ. ಪ್ರಸ್ತುತ ಕೈಬರಹ ಅಥವಾ ಇತರೆ ಪ್ರತ್ಯೇಕ ವ್ಯವಸ್ಥೆಗಳ ಮೂಲಕ ಹಾಜರಾತಿ ನಿರ್ವಹಿಸಲಾಗುತ್ತಿತ್ತು. ವೇತನವನ್ನು ಸರ್ಕಾರದ ಅನುದಾನದಿಂದಲೇ ಭರಿಸುತ್ತಿರುವುದರಿಂದ ವಿಶ್ವಾಸಾರ್ಹತೆ ಮತ್ತು ಏಕರೂಪತೆ ತರಲು ಈ ನೂತನ ವ್ಯವಸ್ಥೆ ತರಲಾಗಿದೆ.

# ಗ್ವಾಲಿಯರ್‌ನಲ್ಲಿ ಭೀಕರ ರಸ್ತೆ ಅಪಘಾತ: ಭಕ್ತರ ಗುಂಪಿನ ಮೇಲೆ ಹರಿದ ಲಾರಿ, 14 ಮಂದಿ ದುರ್ಮರಣ

**ಗ್ವಾಲಿಯರ್, ಅ.18:** ಮಧ್ಯಪ್ರದೇಶದ ಗ್ವಾಲಿಯರ್‌ನಲ್ಲಿ ಭಾನುವಾರ ಮುಂಜಾನೆ ಭೀಕರ ರಸ್ತೆ ಅಪಘಾತವೊಂದು ಸಂಭವಿಸಿದೆ. ಇಲ್ಲಿನ ಪ್ರಸಿದ್ಧ ಶೀತಲಾ ಮಾತಾ ದೇವಸ್ಥಾನದ ಬಳಿ ನಿಯಂತ್ರಣ ತಪ್ಪಿದ ಲಾರಿಯೊಂದು ಭಕ್ತರ ಗುಂಪಿನ ಮೇಲೆ ಹರಿದ ಪರಿಣಾಮ ಕನಿಷ್ಠ 14 ಮಂದಿ ಮೃತಪಟ್ಟಿದ್ದು, 40ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ. ಪೊಲೀಸ್ ತಡೆಗೋಡೆಯನ್ನು ಗುದ್ದಿ ಮುನ್ನುಗ್ಗಿದ ಲಾರಿ ದೇವಸ್ಥಾನದ ಪ್ರವೇಶದ್ವಾರ ಮತ್ತು ಹೊರಗೋಡೆಗೆ ಡಿಕ್ಕಿ ಹೊಡೆದಿದೆ.




ಗ್ವಾಲಿಯರ್‌ನ ಹಿರಿಯ ಪೊಲೀಸ್ ವರಿಷ್ಠಾಧಿಕಾರಿ ಧರ್ಮವೀರ್ ಸಿಂಗ್ ಅವರು ಮಾತನಾಡಿ, ಶೀತಲಾ ಮಾತಾ ದೇವಸ್ಥಾನಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ತೆರಳುತ್ತಿದ್ದರು. ಭಿನೋರ್ ಕಡೆಯಿಂದ ಬರುವ ರಸ್ತೆಯಲ್ಲಿ ಕಡಿದಾದ ಇಳಿಜಾರು ಇರುವುದರಿಂದ ಭಾರೀ ವಾಹನಗಳ ಸಂಚಾರಕ್ಕೆ ನಿರ್ಬಂಧವಿದೆ. ರಾತ್ರಿ ಸುಮಾರು 1.30ಕ್ಕೆ ಭತ್ತ ತುಂಬಿದ್ದ ಲಾರಿಯನ್ನು ಅಲ್ಲಿ ತಡೆಯಲಾಗಿತ್ತು. ಆದರೆ, ಅದು ಪೊಲೀಸ್ ಬ್ಯಾರಿಕೇಡ್‌ಗಳನ್ನು ಮುರಿದು ಮುಂದೆ ಸಾಗಿದ್ದು, ಏಕಾಏಕಿ ನಿಯಂತ್ರಣ ತಪ್ಪಿ ಕೆಳಕ್ಕೆ ಇಳಿದು ದೇವಸ್ಥಾನದ ಹೊರಗೋಡೆ ಮತ್ತು ಪ್ರವೇಶದ್ವಾರಕ್ಕೆ ಡಿಕ್ಕಿ ಹೊಡೆದಿದೆ. ರಸ್ತೆಯಲ್ಲಿದ್ದ ಭಕ್ತರು ಲಾರಿಯಡಿ ಸಿಲುಕಿದ್ದರಿಂದ ಈ ದುರ್ಘಟನೆ ಸಂಭವಿಸಿದೆ. ಘಟನಾ ಸ್ಥಳದಲ್ಲಿ ಕರ್ತವ್ಯದಲ್ಲಿದ್ದ ಇಬ್ಬರು ಪೊಲೀಸ್ ಸಿಬ್ಬಂದಿಗೂ ಗಾಯಗಳಾಗಿದ್ದು, ಅವರಿಗೆ ಚಿಕಿತ್ಸೆ ನೀಡಲಾಗುತ್ತಿದೆ ಎಂದು ತಿಳಿಸಿದರು.

ಅಪಘಾತದ ಬಳಿಕ ಒಟ್ಟು 40 ಮಂದಿಯನ್ನು ಆಸ್ಪತ್ರೆಗೆ ಕರೆದೊಯ್ಯಲಾಗಿದ್ದು, ಅವರಲ್ಲಿ 12 ಮಂದಿ ಮೃತಪಟ್ಟಿದ್ದಾರೆ. ಐದರಿಂದ ಆರು ಮಂದಿಯ ಸ್ಥಿತಿ ಗಂಭೀರವಾಗಿದೆ ಎಂದು ಹಿರಿಯ ಪೊಲೀಸ್ ವರಿಷ್ಠಾಧಿಕಾರಿ ಮಾಹಿತಿ ನೀಡಿದ್ದಾರೆ. ಗ್ವಾಲಿಯರ್ ಜಿಲ್ಲಾಧಿಕಾರಿ ರುಚಿಕಾ ಚೌಹಾಣ್ ಕೂಡ ಘಟನೆಯ ವಿವರ ನೀಡಿದ್ದು, ಅಪಘಾತದ ಮಾಹಿತಿ ಲಭಿಸಿದ ತಕ್ಷಣ ಆಂಬುಲೆನ್ಸ್‌ಗಳು ಮತ್ತು ಇತರ ವಾಹನಗಳನ್ನು ಪರಿಹಾರ ಕಾರ್ಯಾಚರಣೆಗೆ ಕಳುಹಿಸಲಾಗಿತ್ತು ಎಂದು ತಿಳಿಸಿದ್ದಾರೆ. ನವರಾತ್ರಿ ಹಿನ್ನೆಲೆಯಲ್ಲಿ ಆ ರಸ್ತೆಯಲ್ಲಿ ವಾಹನಗಳ ಸಂಚಾರ ನಿಯಂತ್ರಣಕ್ಕಾಗಿ ಬ್ಯಾರಿಕೇಡ್ ಮತ್ತು ಪೊಲೀಸ್ ತಪಾಸಣಾ ಕೇಂದ್ರವನ್ನು ಸ್ಥಾಪಿಸಲಾಗಿತ್ತು. ಆದರೂ ಲಾರಿ ಅಲ್ಲಿಗೆ ಹೇಗೆ ಪ್ರವೇಶಿಸಿತು ಎಂಬುದರ ಕುರಿತು ತನಿಖೆ ನಡೆಸಲಾಗುತ್ತಿದೆ ಎಂದು ಜಿಲ್ಲಾಧಿಕಾರಿ ಹೇಳಿದರು. ಗಾಯಾಳುಗಳಿಗೆ ಸೂಕ್ತ ಚಿಕಿತ್ಸೆ ನೀಡುವ ಉದ್ದೇಶದಿಂದ ವೈದ್ಯಕೀಯ ತಂಡ ನಿರಂತರವಾಗಿ ಸಿಟಿ ಸ್ಕ್ಯಾನ್ ಮತ್ತು ಎಕ್ಸ್‌ರೇ ಪರೀಕ್ಷೆಗಳನ್ನು ನಡೆಸುತ್ತಿದೆ ಎಂದೂ ಹೇಳಿದ್ದಾರೆ.

### ಪ್ರಧಾನಿ ಮೋದಿ ಸಂತಾಪ, ಮೃತರ ಕುಟುಂಬಗಳಿಗೆ ತಲಾ 2 ಲಕ್ಷ ಪರಿಹಾರ

ಗ್ವಾಲಿಯರ್‌ನಲ್ಲಿ ಸಂಭವಿಸಿದ ಅವಘಡದಲ್ಲಿ ಪ್ರಾಣ ಕಳೆದುಕೊಂಡವರಿಗೆ ಪ್ರಧಾನಿ ನರೇಂದ್ರ ಮೋದಿ ಸಂತಾಪ ಸೂಚಿಸಿದ್ದಾರೆ.

ಸುದ್ದಿ ಕೇಳಿ ತೀವ್ರ ದುಃಖವಾಗಿದೆ. ಮೃತರ ಕುಟುಂಬಗಳಿಗೆ ನನ್ನ ಸಂತಾಪಗಳು. ಗಾಯಗೊಂಡವರು ಶೀಘ್ರ ಗುಣಮುಖರಾಗಲಿ ಎಂದು ಪ್ರಾರ್ಥಿಸುತ್ತೇನೆ. ಹಾಗೂ ಗಾಯಗೊಂಡವರು ಶೀಘ್ರ ಗುಣಮುಖರಾಗಲಿ ಎಂದು ಪ್ರಾರ್ಥಿಸಿದ್ದಾರೆ. ಮೃತರ ಕುಟುಂಬಗಳಿಗೆ ಪ್ರಧಾನ ಮಂತ್ರಿ ರಾಷ್ಟ್ರೀಯ ಪರಿಹಾರ ನಿಧಿಯಿಂದ ಮೃತಪಟ್ಟವರ ಕುಟುಂಬಗಳಿಗೆ ತಲಾ 2 ಲಕ್ಷ ಪರಿಹಾರ ಹಾಗೂ ಗಾಯಾಳುಗಳಿಗೆ ತಲಾ 50 ಸಾವಿರ ರೂ. ಪರಿಹಾರ ನೀಡಲಾಗುವುದು ಎಂದು ಘೋಷಣೆ ಮಾಡಿದ್ದಾರೆ. ಈ ಸಂಬಂಧ ಪ್ರಧಾನಮಂತ್ರಿ ಕಾರ್ಯಾಲಯ ಮಾಹಿತಿ ಹಂಚಿಕೊಂಡಿದೆ.

# ಎಸ್‌ಐಆರ್ ಪ್ರಕ್ರಿಯೆ ತಕ್ಷಣ ಸ್ಥಗಿತಗೊಳಿಸಲು ಕಾಂಗ್ರೆಸ್ ಆಗ್ರಹ

**ನವದೆಹಲಿ, ಅ.18:** ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಅವರನ್ನು ಹುದ್ದೆಯಿಂದ ತೆಗೆದುಹಾಕಬೇಕು ಹಾಗೂ ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ ಪ್ರಕ್ರಿಯೆಯನ್ನು ತಕ್ಷಣವೇ ಸ್ಥಗಿತಗೊಳಿಸಬೇಕು ಎಂದು ಕಾಂಗ್ರೆಸ್ ಭಾನುವಾರ ಮತ್ತೆ ಆಗ್ರಹಿಸಿದೆ.



■ ಕೇಂದ್ರ ಮುಖ್ಯ ಚುನಾವಣಾಧಿಕಾರಿ ಪದಚ್ಯುತಿಗೂ ಪಟ್ಟು

ಚುನಾವಣಾ ಆಯೋಗವು ರಾಜಕೀಯ ಪಕ್ಷಗಳಿಗೆ ಮತದಾರರ ಪಟ್ಟಿಯನ್ನು ಸುಲಭವಾಗಿ ಓದಲು ಮತ್ತು ಹುಡುಕಲು ಸಾಧ್ಯವಾಗುವ ರೂಪದಲ್ಲಿ ಒದಗಿಸಲು ನಿರ್ಧರಿಸಿರುವುದನ್ನು ಕಾಂಗ್ರೆಸ್ ಸ್ವಾಗತಿಸಿದೆ. ಪಕ್ಷದ ನಿರಂತರ ಹೋರಾಟ ಹಾಗೂ ದೇಶಾದ್ಯಂತ ನಡೆಯುತ್ತಿರುವ ಪ್ರತಿಭಟನೆಗಳ ಪರಿಣಾಮವಾಗಿ ಈ ನಿರ್ಧಾರ ಕೈಗೊಳ್ಳಲಾಗಿದೆ ಎಂದು ಕಾಂಗ್ರೆಸ್ ಹೇಳಿಕೊಂಡಿದೆ.

ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಅವರು ಈ ಕುರಿತು ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಪ್ರತಿಕ್ರಿಯಿಸಿದ್ದು, ಕಳೆದ ಎರಡು ವರ್ಷಗಳಿಂದ ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಹಾಗೂ ಕಾಂಗ್ರೆಸ್ ಪಕ್ಷವು ರಾಜಕೀಯ ಪಕ್ಷಗಳಿಗೆ ಹುಡುಕಬಹುದಾದ ರೂಪದಲ್ಲಿರುವ ಮತದಾರರ ಪಟ್ಟಿಯನ್ನು ನೀಡುವಂತೆ ಚುನಾವಣಾ ಆಯೋಗವನ್ನು ಒತ್ತಾಯಿಸುತ್ತಿದ್ದವು ಎಂದು ತಿಳಿಸಿದ್ದಾರೆ.

2018ರಲ್ಲಿ ಮಧ್ಯಪ್ರದೇಶದ ಮತದಾರರ ಪಟ್ಟಿಯಲ್ಲಿ ಲಕ್ಷಾಂತರ ನಕಲಿ ಮತದಾರರು ಇದ್ದಾರೆ ಎಂಬುದನ್ನು ಕಾಂಗ್ರೆಸ್ ಪತ್ತೆಹಚ್ಚಿದ ಬಳಿಕ ಚುನಾವಣಾ ಆಯೋಗವು ಹುಡುಕಬಹುದಾದ ರೂಪದಲ್ಲಿರುವ ಮತದಾರರ ಪಟ್ಟಿಯನ್ನು ನೀಡುವುದನ್ನು ನಿಲ್ಲಿಸಿತ್ತು ಎಂದು ಜೈರಾಮ್ ರಮೇಶ್ ಆರೋಪಿಸಿದ್ದಾರೆ. ಈ ಬೇಡಿಕೆಯನ್ನು ಎಂಟು ವರ್ಷಗಳಿಂದ ನಿರಾಕರಿಸಲಾಗಿತ್ತು ಎಂದೂ ಅವರು ಹೇಳಿದ್ದಾರೆ.

ಅಕ್ಟೋಬರ್ 15ರಂದು ಚುನಾವಣಾ ಆಯೋಗವು ವಿಶೇಷ ಸಂಕ್ಷಿಪ್ತ ಪರಿಷ್ಕರಣೆ (ಎಸ್‌ಎಸ್‌ಆರ್) ಅಡಿಯಲ್ಲಿ ರಾಜಕೀಯ ಪಕ್ಷಗಳಿಗೆ ಹುಡುಕಬಹುದಾದ ರೂಪದಲ್ಲಿ ಮತದಾರರ ಪಟ್ಟಿಯನ್ನು ಒದಗಿಸಲು ಆದೇಶ ಹೊರಡಿಸಿದೆ. ಕರಡು ಮತ್ತು ಅಂತಿಮ ಮತದಾರರ ಪಟ್ಟಿಗಳನ್ನು ಮುದ್ರಿತ ಹಾಗೂ ಡಿಜಿಟಲ್ ರೂಪದಲ್ಲಿ ನೀಡಲಾಗುತ್ತದೆ. ಈ ಕ್ರಮವು 17 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ನಡೆಯುತ್ತಿರುವ ಪರಿಷ್ಕರಣೆಗೆ ಅನ್ವಯಿಸಲಿದೆ ಎಂದು ವರದಿಯಾಗಿದೆ.

ಚುನಾವಣಾ ಆಯೋಗದ ಮೇಲಿನ ಸಾರ್ವಜನಿಕರ ವಿಶ್ವಾಸಕ್ಕೆ ಧಕ್ಕೆಯಾಗಿದೆ ಎಂದು ಹೇಳಿದ್ದಾರೆ. ಜ್ಞಾನೇಶ್ ಕುಮಾರ್ ಅವರನ್ನು ಹುದ್ದೆಯಿಂದ ತೆಗೆದುಹಾಕುವುದರ ಜತೆಗೆ ಚುನಾವಣಾ ಆಯೋಗದ ಕಾರ್ಯವೈಖರಿ ಹಾಗೂ ಅದರ ಮಾಹಿತಿ ತಂತ್ರಜ್ಞಾನ ವ್ಯವಸ್ಥೆಯನ್ನು ಸಂಪೂರ್ಣವಾಗಿ ಸುಧಾರಿಸಬೇಕು ಎಂದು ಕಾಂಗ್ರೆಸ್ ಒತ್ತಾಯಿಸಿದೆ.

# ಭಾರತೀಯ ಪ್ರಜೆಯಲ್ಲದ ನಟ ಇಮ್ರಾನ್‌ಖಾನ್ ಪ್ರತಿಭಟನೆಗಳಲ್ಲಿ ಭಾಗಿಯಾಗಿದ್ದು ತಪ್ಪು: ಚಿರಾಗ್



**ಪಟನಾ,ಅ.18:** ಬಾಲಿವುಡ್ ನಟ ಇಮ್ರಾನ್ ಖಾನ್ 'ಭಾರತೀಯ ಪ್ರಜೆಯಲ್ಲ'. ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ (ಎಸ್‌ಐಆರ್) ವಿರುದ್ಧದ ಪ್ರತಿಭಟನೆಗಳಿಂದ ದೂರವಿರಬೇಕಿತ್ತು. ಈ ಪ್ರತಿಭಟನೆಗಳನ್ನು 'ವಿದೇಶಿ ಶಕ್ತಿಗಳ ಬೆಂಬಲದೊಂದಿಗೆ ಅರಾಜಕತೆಯನ್ನು ಹರಡುವ ಪ್ರಯತ್ನವಾಗಿದೆ ಎಂದು ಎಂದು ಕೇಂದ್ರ ಸಚಿವ ಹಾಗೂ ಲೋಕ ಜನಶಕ್ತಿ ಪಕ್ಷದ (ರಾಮವಿಲಾಸ್) ಮುಖ್ಯಸ್ಥ ಚಿರಾಗ್ ಪಾಸ್ವಾನ್ ಬಣ್ಣಿಸಿದ್ದಾರೆ. ಪಟನಾನದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಪಾಸ್ವಾನ್, ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಗೋವಾದಲ್ಲಿ ರಾಜಕೀಯ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದಾಗಿ ಹೇಳಿದ್ದಾರೆ. ಆದರೆ ಕೇಂದ್ರ ಗೃಹ ಸಚಿವ ಅಮಿತ್ ಶಾ, ದುರ್ಗಾಪೂಜೆ ಮಂಟಪದಲ್ಲಿ ಕಾಲ್ತುಳಿತದಲ್ಲಿ 19 ಜನರು ಸಾವನ್ನಪ್ಪಿದ ನಂತರ ಕೋಲ್ಕತ್ತಾದಲ್ಲಿ ತಮ್ಮ ಎಲ್ಲಾ ನಿಗದಿತ ಕಾರ್ಯಕ್ರಮಗಳನ್ನು ರದ್ದುಗೊಳಿಸುವ ಮೂಲಕ 'ಸೂಕ್ಷ್ಮತೆ' ತೋರಿಸಿದ್ದಾರೆ.

"ಭಾರತ ಬಿಟ್ಟು ತೊಲಗಿ" ನೋಟಿಸ್ ಬಗ್ಗೆ ಕೇಳಲಾದ ಪ್ರಶ್ನೆಗೆ ಉತ್ತರಿಸಿದ ಪಾಸ್ವಾನ್, ಲಾಯಿತು. ಇಮ್ರಾನ್ ಅವರ ನಟನೆ ಇಷ್ಟ, ಆದರೆ ಭಾರತದಲ್ಲಿ ಇಷ್ಟು ದಿನ ಸಿನಿಮಾಗಳನ್ನು ಮಾಡಿದ್ದರಿಂದ ಅವರು ಭಾರತೀಯ ಪ್ರಜೆಯಾಗುವುದಿಲ್ಲ ಎನ್ನುವುದನ್ನು ಅರ್ಥಮಾಡಿಕೊಳ್ಳಬೇಕು. ದೇಶದ ನಾಗರಿಕರು ಇಲ್ಲಿ ಪ್ರತಿಭಟನೆಗಳಲ್ಲಿ ಭಾಗವಹಿಸಿದರೆ, ನಾನು ಅದನ್ನು ಗೌರವಿಸುತ್ತೇನೆ. ಆದರೆ ವಿದೇಶಿ ನಾಗರಿಕರು ಹಾಗೆ ಮಾಡಿದರೆ, ಅದು ಕಳವಳಕಾರಿ ವಿಷಯ ಎಂದು ಚಿರಾಗ್ ಪಾಸ್ವಾನ್ ಹೇಳಿದರು.ಇಮ್ರಾನ್ ನಟ ಅಮೀರ್ ಖಾನ್‌ನ ಸೋದರಳಿಯ. ಆತ ಅಮೆರಿಕದಲ್ಲಿ ಜನಿಸಿದ್ದು ಅಮೆರಿಕನ್ ಪೌರತ್ವವನ್ನು ಹೊಂದಿದ್ದಾರೆ. ಆದಾಗ್ಯೂ, ಅವರು ಭಾರತದಲ್ಲಿ ಬೆಳೆದಿದ್ದು ಒಂದು ದಶಕಕ್ಕೂ ಹೆಚ್ಚು ಕಾಲ ಚಲನಚಿತ್ರೋದ್ಯಮದಲ್ಲಿ ಸಕ್ರಿಯರಾಗಿದ್ದಾರೆ.

ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಅವರ ರಾಜೀನಾಮೆಗೆ ಒತ್ತಾಯಿಸಿ ಮುಂಬೈನಲ್ಲಿ ಇತ್ತೀಚೆಗೆ ನಡೆದ ಪ್ರತಿಭಟನೆಯಲ್ಲಿ ಭಾಗವಹಿಸಿದ ಕೆಲವು ದಿನಗಳ ನಂತರ ನಟನಿಗೆ "ಭಾರತ ತೊರೆಯಲು" ನೋಟಿಸ್ ನೀಡಲಾಗಿತ್ತು.

# ಪೇಜಾವರ ಮಠದಲ್ಲಿ ದಸರಾ ಸಂಭ್ರಮ: ದುರ್ಗಾನಮಸ್ಕಾರ ಪೂಜೆ ಸಂಪನ್ನ

**ಮುಂಬಯಿ, ಅ.18:** ಸಾಂತಾಕ್ರೂಜ್ ಪೂರ್ವದಲ್ಲಿನ ಪ್ರಭಾತ್ ಕಾಲೋನಿಯಲ್ಲಿನ ಉಡುಪಿ ಶ್ರೀ ಪೇಜಾವರ ಮಠದ (ಮಧ್ವ ಭವನದ) ಮುಂಬಯಿ ಶಾಖೆಯಲ್ಲಿ ವರ್ಷಂಪ್ರತಿಯಂತೆ ಈ ಬಾರಿಯೂ ಶರನ್ನವರಾತ್ರಿ ಪ್ರಯುಕ್ತ ವಾರ್ಷಿಕ ದುರ್ಗಾ ನಮಸ್ಕಾರ ಪೂಜೆ ಶ್ರದ್ಧಾಪೂರ್ವಕವಾಗಿ ನೆರವೇರಿಸಲ್ಪಟ್ಟಿತು.

ಜಗದ್ಗುರು ಶ್ರೀ ಮಧ್ವಾಚಾರ್ಯ ಮಹಾ ಸಂಸ್ಥಾನದ ಉಡುಪಿ ಶ್ರೀ ಪೇಜಾವರ ಅಧೋಕ್ಷಜ ಮಠಧೀಶ ಶ್ರೀ ವಿಶ್ವಪ್ರಸನ್ನ ಶ್ರೀಪಾದಂಗಳವರ ಮಾರ್ಗದರ್ಶನದಲ್ಲಿ ಮಠದ ಶ್ರೀ ವಿಶ್ವೇಶತೀರ್ಥ ಸಭಾಗೃಹದಲ್ಲಿ ಕಳೆದ ಶುಕ್ರವಾರ ಸಂಜೆ ಮಠದ ಶ್ರೀ ಪೂರ್ಣಪ್ರಜ್ಞ ವಿದ್ಯಾಪೀಠ ಪ್ರತಿಷ್ಠಾನದ ಅಧ್ಯಕ್ಷ ಡಾ| ಸುರೇಶ್ ಎಸ್.ರಾವ್ ಕಟೀಲು ಯಜಮಾನತ್ವ ಹಾಗೂ ಭಕ್ತರನೇಕರ ಕೂಡುವಿಕೆಯಲ್ಲಿ ಶರನ್ನವರಾತ್ರಿ ಆಚರಿಸಲಾಯಿತು.ಶ್ರೀ ಕೃಷ್ಣೈಕ್ಯ ಯತಿಕುಲ ಚಕ್ರವರ್ತಿ ಶ್ರೀ ವಿಶ್ವೇಶತೀರ್ಥ ಸ್ವಾಮೀಜಿ ಅವರನ್ನು ಸ್ಮರಿಸಿ ಪೇಜಾವರ ಮಠದ ಪ್ರಧಾನ ವ್ಯವಸ್ಥಾಪಕ ಡಾ| ರಾಮದಾಸ್ ಉಪಾಧ್ಯಾಯ ರೆಂಜಾಳ ಅವರು ತನ್ನ ಪ್ರಧಾನ ಪೌರೋಹಿತ್ಯದಲ್ಲಿ ದುರ್ಗಾ ಪೂಜೆ ನೆರವೇರಿಸಿ ಅನುಗ್ರಹಿಸಿದರು. ಮಧ್ವೇಶ ಭಜನಾ ಮಂಡಳಿ ಸಾಂತಕ್ರೂಜ್, ವಾಗ್ದೇವಿ ಭಜನಾ ಮಂಡಳಿ ಬೊರಿವಿಲಿ, ಗೋಪಾಲಕೃಷ್ಣ ಭಜನಾ ಮಂಡಳಿ (ಅದಮಾರುಮಠ) ಅಂಧೇರಿ, ರಾಘವೇಂದ್ರ ಭಜನಾ ಮಂಡಳಿ ಅಂಧೇರಿ, ಗೋರೆಗಾಂವ್ ಕರ್ನಾಟಕ ಸಂಘದ ಭಕ್ತೆಯರು ಭಜನೆಯನ್ನಾಡಿದರು.

ವಿಜಯದಶಮಿಯ ಈ ಪವಿತ್ರ ದಿನವು ಕೇವಲ ಅಧರ್ಮದ ಮೇಲಿನ ಧರ್ಮದ ಗೆಲುವಷ್ಟೇ ಅಲ್ಲ, ನಮ್ಮೊಳಗಿನ ಅಜ್ಞಾನ ಹಾಗೂ ನಕಾರಾತ್ಮಕ ಚಿಂತನೆಗಳನ್ನು ತೊಡೆದುಹಾಕಿ ಸತ್‌ಚಿಂತನೆಗಳನ್ನು ಬೆಳೆಸಿಕೊಳ್ಳುವ ಮಹತ್ವದ ಪರ್ವಕಾಲವಾಗಿದೆ. ನಾವೂ ಮಹಾಕಾಳಿ, ಮಹಾಲಕ್ಷ್ಮೀ, ಮಹಾಸರಸ್ವತಿ ಈ ಮೂರು ಸ್ವರೂಪದಲ್ಲಿ ಲಕ್ಷ್ಮೀಯನ್ನೇ ಕಾಣುವುದು.



ದೀಪ ಹಚ್ಚಿದಾಗ ಕತ್ತಲೆ ನಿವಾರಣೆ ಆದಂತೆ ನಮ್ಮೆಲ್ಲರ ಕಷ್ಟಗಳು ಮಹಾತಾಯಿ ನಿವಾರಣೆ ಮಾಡಲಿ. ಆ ತಾಯಿಯ ಕೃಪಾಕಟಾಕ್ಷದಿಂದ ಪ್ರತಿಯೊಬ್ಬರ ಬದುಕಿನಲ್ಲಿ ಜ್ಞಾನದ ದೀಪ ಬೆಳಗಲಿ, ಸಮೃದ್ಧಿ ಮತ್ತು ನೆಮ್ಮದಿಯ ಅಲೆಗಳು ಸದಾ ಹರಿಯಲಿ ಎಂದು ಪ್ರಾರ್ಥಿಸೋಣ. ಶಕ್ತಿ ದೇವತೆಯ ಅನುಗ್ರಹದಿಂದ ಸಮಾಜದಲ್ಲಿ ಒಗ್ಗಟ್ಟು, ಶಾಂತಿ ಮತ್ತು ಸೌಹಾರ್ದತೆ ಮತ್ತಷ್ಟು ಗಟ್ಟಿಗೊಳ್ಳಲಿ ಹಾಗೂ ಎಲ್ಲರ ಸಂಕಲ್ಪಗಳು ಯಶಸ್ವಿಯಾಗಲಿ. ವಿಜಯದ ಸಂಕೇತವಾದ ಈ ದಸರಾ ಸಡಗರವು ಎಲ್ಲರ ಬಾಳಿನಲ್ಲಿ ಹೊಸ ಉತ್ಸಾಹ, ಆರೋಗ್ಯ ಮತ್ತು ಯಶಸ್ಸಿನ ಹೆಬ್ಬಾಗಿಲನ್ನು ತೆರೆಯಲಿ ಎಂದು ಆ ತಾಯಿಯಲ್ಲಿ ಪ್ರಾರ್ಥಿಸೋಣ ಎಂದು ವಿದ್ವಾನ್ ಡಾ| ರಾಮದಾಸ್ ಉಪಾಧ್ಯಾಯ ರೆಂಜಾಳ ಹರಸಿದರು.ಈ ಸಂದರ್ಭದಲ್ಲಿ ಪೂರ್ಣಪ್ರಜ್ಞ ವಿದ್ಯಾಪೀಠ ಪ್ರತಿಷ್ಠಾನದ ಕಾರ್ಯಕಾರಿ ಸಮಿತಿ ಸದಸ್ಯ ಶ್ರೀನಿವಾಸ್ ಎಲ್. ಭಟ್ ಪರೇಲ್, ರಾಮವಿಠ್ಠಲ ಕಲ್ಲೂರಾಯ, ಪೇಜಾವರ ಮಠ ಮುಂಬಯಿ ವ್ಯವಸ್ಥಾಪಕರಾದ ಶ್ರೀಹರಿ ಭಟ್ ಪುತ್ತಿಗೆ, ನಿರಂಜನ್ ಗೋಗ್ಟೆ, ಮಠದ ಆರ್ಚಕವೃಂದ ಹಾಗೂ ಸಿಬ್ಬಂದಿಗಳು, ಪುರೋಹಿತ ವೇ| ಮೂ ಆರ್. ಎಲ್ ಭಟ್ ಉಪಸ್ಥಿತರಿದ್ದು ಭಕ್ತಾಭಿಮಾನಿಗಳ ಸಹಕಾರದಿಂದ ವಾರ್ಷಿಕ ದುರ್ಗಾ ನಮಸ್ಕಾರ ಪೂಜೆಯು ಸಂಪನ್ನಗೊಂಡಿತು.

# ಜಾಮೀನು ತಿರಸ್ಕೃತ: ಸೌರವ್ ದಾಸ್ ಆಶುತೋಷ್ ರಂಕಾ ಬಿಡುಗಡೆ ವಿಳಂಬ

**ನವದೆಹಲಿ, ಅ.18:** ಕಾಕ್ರೋಚ್ ಜನತಾ ಪಕ್ಷ' ನಾಯಕರಾದ ಸೌರವ್‌ದಾಸ್ ಮತ್ತು ಆಶುತೋಷ್ ರಂಕಾ ಅವರ ಜಾಮೀನು ವಿಚಾರಣೆ ವಿಶೇಷ ಕಾರ್ಯನಿರ್ವಾಹಕ ಮ್ಯಾಜಿಸ್ಟ್ರೇಟ್ ನಿಗದಿತ ಸಮಯಕ್ಕೆ ಆಗಮಿಸದ ಕಾರಣ ವಿಳಂಬವಾಯಿತು ಎಂದು ಕಾರ್ಯಕರ್ತೆ ರತ್ನಾ ಸಿಂಗ್ ತಿಳಿಸಿದ್ದಾರೆ. ಅಲ್ಲದೆ, ನಾಲ್ಕು ಜಾಮೀನುದಾರರನ್ನು ಅಸ್ಪಷ್ಟ ಕಾರಣಗಳನ್ನು ನೀಡಿ ತಿರಸ್ಕರಿಸಲಾಗಿದೆ ಎಂದು ಆರೋಪಿಸಿದ್ದಾರೆ.

ಜಂತರ್ ಮಂತರ್ ಪ್ರದೇಶವನ್ನು ಪ್ರತಿಭಟನಾ ಸ್ಥಳದ ಪಟ್ಟಿಯಿಂದ ತೆಗೆದುಹಾಕಲಾಗಿದ್ದರೂ, ಅಲ್ಲಿನ ಬೀಗ ಹಾಕಿದ ಗೇಟ್‌ಗಳನ್ನು ಹತ್ತಿ ಒಳಗೆ ಪ್ರವೇಶಿಸಿದ ಆರೋಪದ ಮೇಲೆ, ಅಕ್ಟೋಬರ್ 14ರಂದು ದಾಸ್ ಮತ್ತು ರಂಕಾ ಅವರನ್ನು ಐದು ದಿನಗಳ ನ್ಯಾಯಾಂಗ ಬಂಧನಕ್ಕೆ ಕಳುಹಿಸಲಾಗಿತ್ತು. ತಾವು ರಾಷ್ಟ್ರಧ್ವಜವನ್ನು ಹಾರಿಸಿ, ಘೋಷಣೆಗಳನ್ನು ಕೂಗಿದೆವು ಎಂದು ಅವಿಕ ನಾಯಕರು ಹೇಳಿಕೊಂಡಿದ್ದಾರೆ. ಈ ಬಗ್ಗೆ ಎಕ್ಸ್‌ನಲ್ಲಿ ಮಾಹಿತಿ ಹಂಚಿಕೊಂಡಿರುವ ರತ್ನಾ ಸಿಂಗ್, ಮಧ್ಯಾಹ್ನ 12 ಗಂಟೆಗೆ ವಿಚಾರಣೆ ನಿಗದಿಯಾಗಿದ್ದರೂ, ತಾನು ಬೆಳಿಗ್ಗೆ 11 ಗಂಟೆಯಿಂದಲೇ ಪೊಲೀಸ್ ಠಾಣೆಯಲ್ಲಿದ್ದೆ. ಸಂಜೆ 4:42ರವರೆಗೂ ಸಹಾಯಕ ಪೊಲೀಸ್ ಆಯುಕ್ತರು ಮಂದಿರ್ ಮಾರ್ಗ್ ಪೊಲೀಸ್ ಠಾಣೆಗೆ ಆಗಮಿಸಿರಲಿಲ್ಲ. "ಇದು ನಿಜಕ್ಕೂ ಕಳವಳಕಾರಿ ವಿಷಯ. ಇಲ್ಲಿಯವರೆಗೆ ಅವರು ನಾಲ್ಕು ಜಾಮೀನುದಾರರನ್ನು ಅಸ್ಪಷ್ಟ ಕಾರಣಗಳಿಗಾಗಿ ತಿರಸ್ಕರಿಸಿದ್ದಾರೆ. ಪ್ರತಿಭಟನೆಯಲ್ಲಿ ಭಾಗವಹಿಸಿದ್ದಕ್ಕಾಗಿ ಯಾರ ವಿರುದ್ಧ ಎಫ್‌ಐಆರ್ ದಾಖಲಾಗಿದೆಯೋ, ಅಂತಹ ವ್ಯಕ್ತಿಗಳನ್ನು 'ಅಪರಾಧ ಹಿನ್ನೆಲೆ' ಹೊಂದಿರುವವರು ಎಂದು ಬಿಂಬಿಸಿದ್ದಾರೆ," ಎಂದು ಸಿಂಗ್ ಆರೋಪಿಸಿದ್ದಾರೆ.

ಈ ಆರೋಪಗಳ ಕುರಿತು ಪೊಲೀಸರಿಂದ ಯಾವುದೇ ಪ್ರತಿಕ್ರಿಯೆ ಬಂದಿಲ್ಲ. ಮತ್ತೊಂದು ಪೋಸ್ಟ್‌ನಲ್ಲಿ ಸಿಂಗ್, "ಭಾರತೀಯ ರಾಷ್ಟ್ರಧ್ವಜವನ್ನು ಹಾರಿಸುವುದು ಅಪರಾಧವಲ್ಲ. ಕೇವಲ ಪ್ರಕ್ರಿಯೆಗಳಲ್ಲಿನ ವಿಳಂಬದಿಂದಾಗಿ ಈ ಯುವಕರು ಬಂಧನದಲ್ಲಿ ಉಳಿಯಬಾರದು," ಎಂದು ಹೇಳಿದ್ದಾರೆ.

# ಸಮುದಾಯೋಭಿವೃದ್ಧಿಗೆ ಒಗ್ಗಟ್ಟು-ಜನಸಂಖ್ಯಾ ಬಲ ಅಗತ್ಯ: ಬಾಲಕೃಷ್ಣ ಹೆಗ್ಡೆ ಮುಲ್ಕಿ

## ಐರೋಲಿಯ ಹೆಗ್ಗಡೆ ಭವನದಲ್ಲಿ ಸಂಭ್ರಮಿಸಲ್ಪಟ್ಟ ವಾರ್ಷಿಕೋತ್ಸವ-ಪ್ರಶಸ್ತಿ ಪ್ರದಾನ

**ಮುಂಬಯಿ, ಅ.18:** ಹೆಗ್ಗಡೆ ಸಮಾಜದ ಬಾಂಧವರು ಪರಸ್ಪರ ಅನ್ಯೋನ್ಯತೆಯಿಂದ ಒಂದಾಗಿ ಸಮಾಜವನ್ನು ಮುನ್ನಡೆಸಬೇಕು. ಹೆಗ್ಗಡೆ ಸಮಾಜದ ಅಭಿವೃದ್ಧಿಗೆ ಒಗ್ಗಟ್ಟು ಮತ್ತು ಜನಸಂಖ್ಯೆಯ ಬಲ ಅಗತ್ಯ. ನಮ್ಮ ಸಮಾಜದ ಜನಸಂಖ್ಯೆ ಕಡಿಮೆ ಇರುವುದರಿಂದ ಸರ್ಕಾರದಿಂದ ಸಿಗಬಹುದಾದ ಸೌಲಭ್ಯಗಳು ಹಾಗೂ ಅವಕಾಶಗಳನ್ನು ಪಡೆಯುವಲ್ಲಿ ಸವಾಲುಗಳಿವೆ. ಮುಂಬಯಿಯಲ್ಲಿ ಸುಮಾರು 1,200, ಬೆಂಗಳೂರುನಲ್ಲಿ 400 ಹಾಗೂ ಮೂಲ ಊರಿನಲ್ಲಿ 6,000 ಜನರಿರಬಹುದು ಎಂದು ಅಂದಾಜಿಸಲಾಗಿದ್ದು, ಸಮಾಜದ ಅಭಿವೃದ್ಧಿಗಾಗಿ ಎಲ್ಲರೂ ಒಗ್ಗಟ್ಟಿನಿಂದ ಕಾರ್ಯನಿರ್ವಹಿಸಬೇಕು. ಹೆಗ್ಗಡೆ ಸಮುದಾಯದ ಮೂಲ, ಇತಿಹಾಸ ಮತ್ತು ಪರಂಪರೆಯ ಕುರಿತು ಹೆಚ್ಚಿನ ಮಾಹಿತಿ ಪಡೆದು ಎಲ್ಲರೊಂದಿಗೆ ಸಂಪರ್ಕ ಬೆಳೆಸಬೇಕು. ಯುವಜನರು ಮಾತ್ರವಲ್ಲದೆ ಎಲ್ಲ ವಯೋಮಾನದವರೂ



ಸಮಾಜದ ಪ್ರಗತಿಗೆ ಕೈಜೋಡಿಸಬೇಕು ಎಂದು ಮಂಗಳೂರಿನ ಉದ್ಯಮಿ ಬಾಲಕೃಷ್ಣ ಹೆಗ್ಡೆ ಮುಲ್ಕಿ ನುಡಿದರು.

ಭಾನುವಾರ ನವಿ ಮುಂಬಯಿಯ ಐರೋಲಿಯ ಹೆಗ್ಗಡೆ ಭವನದಲ್ಲಿರುವ ಐತಮಜಲು ಶ್ರೀಮತಿ ಜಯಂತಿ ವಿಠಲ ಹೆಗ್ಡೆ ಸ್ಮಾರಕ ಸಭಾಗೃಹದಲ್ಲಿ ಹೆಗ್ಗಡೆ ಸೇವಾ ಸಂಘ ಮುಂಬಯಿ ತನ್ನ 66ನೇ ವಾರ್ಷಿಕೋತ್ಸವ ಸಂಭ್ರಮಿಸಿದ್ದು, ದೀಪಹಚ್ಚಿ ಸಭಾಕಾರ್ಯಕ್ರಮಕ್ಕೆ ಚಾಲನೆಯನ್ನಿತ್ತು ವಾರ್ಷಿಕ ಪ್ರಶಸ್ತಿಗಳನ್ನು ಪ್ರದಾನಿಸಿ ಬಾಲಕೃಷ್ಣ ಹೆಗ್ಡೆ ಮಾತನಾಡಿದರು.

ಹೆಗ್ಗಡೆ ಸೇವಾ ಸಂಘದ ಅಧ್ಯಕ್ಷ ಮನೋಜ್ ಹೆಗ್ಡೆ ಅಧ್ಯಕ್ಷತೆಯಲ್ಲಿ ನಡೆಸಲ್ಪ ಸಮಾರಂಭದಲ್ಲಿ ಬೆಂಗಳೂರಿನ ಬಿಬಿಎಂಪಿಯ ನಿವೃತ್ತ ಆರೋಗ್ಯಾಧಿಕಾರಿ ಡಾ| ಮನೋರಂಜನ್ ಹೆಗ್ಡೆ ಮುಖ್ಯ ಅತಿಥಿಯಾಗಿ, ಹೆಗ್ಗಡೆ ಸೇವಾ ಸಂಘ ಬೆಂಗಳೂರು ಇದರ ಮಾಜಿ ಕಾರ್ಯದರ್ಶಿ ಅಡ್ವಕೇಟ್ ಸಂದೀಪ್ ಹೆಗ್ಡೆ ಹಾಗೂ ದಕ್ಷಿಣ ಕನ್ನಡ ಜಿಲ್ಲಾ ಹೆಗ್ಗಡೆ ಸೇವಾ ಸಂಘದ ಕಾರ್ಯಕಾರಿ ಸಮಿತಿ ಸದಸ್ಯ ಉಮೇಶ್ ಹೆಗ್ಡೆ ಗೌರವಾನ್ವಿತ ಅತಿಥಿಗಳಾಗಿ ಹಾಗೂ ಸಂಘದ ಕಾರ್ಯಾಧ್ಯಕ್ಷ ಆನಂದ ಹೆಗ್ಡೆ, ಉಪಾಧ್ಯಕ್ಷ ಅರುಣ್ ಹೆಗ್ಡೆ, ಗೌರವ ಕಾರ್ಯದರ್ಶಿ ಸುರೇಂದ್ರನಾಥ್ ಹೆಗ್ಡೆ, ಗೌರವ ಕೋಶಾಧಿಕಾರಿ ಸಿಎ| ಸುರೇಶ್ ಹೆಗ್ಡೆ, ಜೊತೆ ಕಾರ್ಯಾದರ್ಶಿ ರೂಪೇಶ್‌ಕುಮಾರ್ ಹೆಗ್ಡೆ, ಜೊತೆ ಕೋಶಾಧಿಕಾರಿ ಹರೀಶ್ ಹೆಗ್ಡೆ, ಮಹಿಳಾ ವಿಭಾಗಧ್ಯಕ್ಷೆ ಛಾಯಾ ಹೆಗ್ಡೆ, ಯುವ ವಿಭಾಗಧ್ಯಕ್ಷ ಸುನಿಲ್ ಹೆಗ್ಡೆ ವೇದಿಕೆಯಲ್ಲಿ ಆಸೀನರಾಗಿದ್ದರು.

ಇದೇ ಸಂದರ್ಭದಲ್ಲಿ ಹೆಗ್ಗಡೆ ಭವನ ಕಟ್ಟಡದಲ್ಲಿನ ಕಿರು ಸಭಾಗೃಹಕ್ಕೆ ದಿ| ಶ್ರೀ ನಾರಾಯಣ್ ಟಿ.ಹೆಗ್ಗಡೆ (ಯೆರ್ಲಪಾಡಿ ನಡುಮನೆ) ಬ್ಯಾಂಕ್ವೇಟ್ ಹಾಲ್ ಎಂದಾಗಿಸಿ ನಾಮಕರಣಗೊಳಿಸಲಾಯಿತು. ಈ ಸಂದರ್ಭದಲ್ಲಿ ಉಮಾ ಬಾಲಕೃಷ್ಣ ಹೆಗ್ಡೆ ದಂಪತಿ ರಿಬ್ಬನ್ ಕತ್ತರಿಸಿ ಸೇವೆಗೆ ಚಾಲನೆಯನ್ನಿತ್ತರು. ಹೇಮಾವತಿ ಎನ್.ಹೆಗ್ಗಡೆ ಉಪಸ್ಥಿತರಿದ್ದು ಅವರನ್ನು ವಿಶೇಷವಾಗಿ ಗೌರವಿಸಲಾಯಿತು.

ಮೂರು ದಶಕಗಳಿಗೂ ಅಧಿಕಾವಧಿ ಸಂಘಕ್ಕೆ ಸಲ್ಲಿಸಿದ ಅನುಪಮ ಸೇವೆಯನ್ನು ಪರಿಗಣಿಸಿ ಸಂಘದ ಮಾಜಿ ಉಪಾಧ್ಯಕ್ಷ ಮನ್ಮಥ ಜಿ.ಹೆಗ್ಡೆ ಅವರಿಗೆ 'ಜೀವನ ಶ್ರೇಷ್ಠ ಪ್ರಶಸ್ತಿ' (ಪತ್ನಿ ಶುಭಾವತಿ ಹೆಗ್ಗಡೆ ಜೊತೆಗೂಡಿ) ಪ್ರದಾನಿಸಿ ಗೌರವಿಸಲಾಯಿತು. ಸಮಾಜಸೇವೆ ಹಾಗೂ ಸಂಘದ ಕಾರ್ಯಚಟುವಟಿಕೆಗಳಲ್ಲಿ ಸಕ್ರೀಯರಾಗಿದ್ದು ಸೇವೆ ಸಲ್ಲಿಸಿದ ಹಿರಿಯರಿಗೆ ವಾರ್ಷಿಕವಾಗಿ ಪ್ರದಾನಿಸುವ ಹಿರಿಯ ನಾಗರಿಕ ಪ್ರಶಸ್ತಿಗಳನ್ನು ಕೊಡಮಾಡಲಾಗಿದ್ದು, ಮರಣೋತ್ತರವಾಗಿ ನೀಡಲ್ಪಡುವ ದಿವಂಗತ ರಾಘವ ಬಿ.ಹೆಗ್ಡೆ ಪ್ರಶಸ್ತಿಯನ್ನು ಶ್ರೀಮತಿ ತಾರಾಮತಿ ಹೆಗ್ಡೆ (ಬೆಂಗಳೂರು), ದಿವಂಗತ ನಾರಾಯಣ ಟಿ.ಹೆಗ್ಡೆ ಪ್ರಶಸ್ತಿಯನ್ನು ಶ್ರೀಮತಿ ಹೇಮಾವತಿ ಹೆಗ್ಡೆ (ಮುಲುಂಡ್), ದಿವಂಗತ ಸಂಜೀವ ಡಿ.ಹೆಗ್ಡೆ ಪ್ರಶಸ್ತಿಯನ್ನು ಶ್ರೀಮತಿ ಸುಲೋಚನ ಹೆಗ್ಡೆ (ಮುಲುಂಡ್) ಹಾಗೂ ದಿವಂಗತ ಹಲ್ಯೆಟ್ಟು ಜಯರಾಮ ಹೆಗ್ಡೆ ಪ್ರಶಸ್ತಿಯನ್ನು ಶ್ರೀಮತಿ ಸುಮಿತ್ರ ಹೆಗ್ಡೆ ಕಲ್ಯಾಣ್ (ಪರವಾಗಿ ಸುಪುತ್ರ ರೋಹನ್ ಹೆಗ್ಡೆ) ಇವರಿಗೆ ಅತಿಥಿಗಳು ಪ್ರಶಸ್ತಿಗಳನ್ನು ಪ್ರದಾನಿಸಿ ಗೌರವಿಸಿದರು. ಅಂತೆಯೇ ಸಂಘದ ಕಾರ್ಯಕಾರಿ ಸಮಿತಿಯ ಮಾಜಿ ಸದಸ್ಯ ಹಾಗೂ ಆಂತರಿಕ ಲೆಕ್ಕಪರಿಶೋಧಕ ಶಂಕರ ಹೆಗ್ಡೆ ಮುಲುಂಡ್ ಇವರನ್ನು (ಪತ್ನಿ ಸುಮತಿ ಹೆಗ್ಡೆ ಸಹಿತ) ಹಾಗೂ ಪ್ರಾಯೋಜಕರು, ಕೊಡುಗೈದಾನಿಗಳನ್ನೂ ಗೌರವಿಸಲಾಯಿತು. ಪುರಸ್ಕೃತರು ಸಂದರ್ಭೋಚಿತವಾಗಿ ಮಾತನಾಡಿ ಗೌರವಕ್ಕಾಗಿ ಅಭಿವಂದಿಸಿದರು.

ಡಾ| ಮನೋರಂಜನ್ ಹೆಗ್ಡೆ ಮಾತನಾಡಿ ಮುಂಬಯಿಯಲ್ಲಿ ಭವ್ಯವಾದ ಕಟ್ಟಡ ನಿರ್ಮಿಸುವುದು ಸುಲಭದ ಕೆಲಸವಲ್ಲ. ಇದರ ಹಿಂದೆ ಅನೇಕರು ನಿಸ್ವಾರ್ಥ ಸೇವೆ ಮತ್ತು ಪರಿಶ್ರಮವನ್ನು ಧಾರೆಎರೆದಿರುತ್ತಾರೆ. ಹೆಗ್ಗಡೆ ಸೇವಾ ಸಂಘದ ಸುದೀರ್ಘ ಪಯಣದಲ್ಲಿ ಸಂಘವನ್ನು ಸ್ಥಾಪಿಸಿ, ಬೆಳೆಸಿ, ಇಂದಿನ ಮಟ್ಟಕ್ಕೆ ತಂದು ನಿಲ್ಲಿಸಿದ ಎಲ್ಲಾ ಪದಾಧಿಕಾರಿಗಳ ಹಾಗೂ ಸದಸ್ಯರ ಕೊಡುಗೆ ಅಪಾರವಾಗಿದೆ. ಜೀವನೋಪಾಯಕ್ಕಾಗಿ ಊರು ಬಿಟ್ಟು ಮುಂಬಯಿಗೆ ಬಂದು ದುಡಿದು, ಸಮಾಜದ ಏಳಿಗೆಗಾಗಿ ಸಂಘವನ್ನು ಕಟ್ಟಿ ಬೆಳೆಸಿದ ಹಿರಿಯರ ಸೇವೆಯನ್ನು ಸ್ಮರಿಸಿ, ಮುಂದಿನ ಪೀಳಿಗೆಗೆ ನಮ್ಮ ಸಂಸ್ಕೃತಿ, ಸಂಪ್ರದಾಯ ಮತ್ತು ಪರಂಪರೆಯನ್ನು ಪರಿಚಯಿಸುವಲ್ಲಿ ಇಂತಹ ಸಮಾರಂಭಗಳು ಮಹತ್ವದ ಪಾತ್ರ ವಹಿಸುತ್ತವೆ. ಇಂದಿನ ಜೀವನಶೈಲಿ ಮತ್ತು ಆಹಾರ ಪದ್ಧತಿಯಿಂದ ಸಾಂಕ್ರಾಮಿಕವಲ್ಲದ ಕಾಯಿಲೆಗಳು ಹೆಚ್ಚಾಗುತ್ತಿವೆ. ಆದ್ದರಿಂದ ಆರೋಗ್ಯದ ಬಗ್ಗೆ ಪ್ರತಿಯೊಬ್ಬರೂ ಜಾಗೃತರಾಗಬೇಕು. ವಿಶೇಷವಾಗಿ ಯುವಜನರು ಮದ್ಯಪಾನ, ಧೂಮಪಾನ ಮತ್ತು ಇತರ ಅನಾರೋಗ್ಯಕರ ಅಭ್ಯಾಸಗಳಿಂದ ದೂರವಿದ್ದು, ಆರೋಗ್ಯಕರ ಜೀವನಶೈಲಿಯನ್ನು ರೂಢಿಸಿಕೊಳ್ಳಬೇಕು ಎಂದರು.

ಈ ಹೆಗ್ಗಡೆ ಸಂಘವು ಸಮಾಜಮುಖಿ ಕಾರ್ಯಗಳ ಮೂಲಕ ಪ್ರಶಂಸೆಗೆ ಪಾತ್ರವಾಗಿದೆ. ಸಂಘವು ಮಾತೃಸಂಘಕ್ಕೆ ನಿರಂತರ ಸಹಕಾರ ನೀಡುತ್ತಿದ್ದು, ವಿಶೇಷವಾಗಿ ವಿದ್ಯಾರ್ಥಿವೇತನದ ನೆರವಿಗಾಗಿ ಕೃತಜ್ಞತೆ ಸಲ್ಲಿಸುತ್ತೇವೆ. ಉಭಯ ಸಂಘಗಳ ನಡುವಿನ ಬಾಂಧವ್ಯ ಇದೇ ರೀತಿ ಮುಂದುವರಿಯಲಿ. ಸಮಾಜಸೇವೆಯ ಮೂಲಕ ಇನ್ನಷ್ಟು ಉತ್ತಮ ಕಾರ್ಯಗಳನ್ನು ಕೈಗೊಳ್ಳುವ ಅವಕಾಶ ದೊರೆಯಲಿ ಎಂದು ಉಮೇಶ್ ಹೆಗ್ಡೆ ತಿಳಿಸಿದರು.ಸಂದೀಪ್ ಹೆಗ್ಡೆ ಮಾತನಾಡಿ ಸಂಘಟನೆಯಿಂದ ಸಮುದಾಯದ ಬಾಂಧವ್ಯ ವೃದ್ಧಿಯಾಗುತ್ತಿದೆ. ಸಂಘ-ಸಂಸ್ಥೆಗಳಿಂದ ನಮಗೇನು ಸಿಕ್ಕಿದೆ ಎಂದು ಪ್ರಶ್ನಿಸುವುದಕ್ಕಿಂತ, ನಾವು ಸಂಘಕ್ಕೆ ಏನು ಕೊಡುಗೆ ನೀಡಿದ್ದೇವೆ ಎಂಬುದನ್ನು ಮೊದಲು ಅರಿತುಕೊಳ್ಳಬೇಕು. ಸಂಘವು ನಮಗೆ ಸಮುದಾಯದ ಗುರುತು ಮತ್ತು ಆತ್ಮವಿಶ್ವಾಸವನ್ನು ನೀಡಿದೆ. ನಮ್ಮವರನ್ನು ಒಂದೇ ವೇದಿಕೆಯಲ್ಲಿ ಒಗ್ಗೂಡಿಸುವಲ್ಲಿ ಸಂಘದ ಪಾತ್ರ ಮಹತ್ವದ್ದಾಗಿದೆ. ಸಂಘದ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದರಿಂದ ಹೊಸ ಪರಿಚಯಗಳ ಜೊತೆಗೆ ಹಳೆಯ ಸಂಬಂಧಗಳು ಪುನಃ ಬೆಸೆಯುತ್ತವೆ. ಬಂಧುಗಳ ನಡುವಿನ ಸಂಪರ್ಕ ಗಟ್ಟಿಯಾಗುತ್ತದೆ. ಆದ್ದರಿಂದ ಎಲ್ಲರೂ ಸಂಘದ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಸಂಘಟನೆಯನ್ನು ಮತ್ತಷ್ಟು ಬಲಪಡಿಸಬೇಕು ಎಂದರು.ಮುಂಬಯಿ ಮಹಾನಗರದಲ್ಲಿ ನೆಲೆಸಿರುವ ಹೆಗ್ಗಡೆ ಸಮುದಾಯದವರಿಗೆ ವಾರ್ಷಿಕೋತ್ಸವವು ಭಗವಂತನ ಆರಾಧನೆ, ಸಂಪ್ರದಾಯಗಳ ಪಾಲನೆ ಹಾಗೂ ಸಮುದಾಯದ ಬಾಂಧವ್ಯವನ್ನು ಬಲಪಡಿಸುವ ಪ್ರಮುಖ ಸಂದರ್ಭವಾಗಿದೆ. ಆದ್ದರಿಂದ ಎಲ್ಲರೂ ವಾರ್ಷಿಕೋತ್ಸವದಲ್ಲಿ ಪಾಲ್ಗೊಂಡು ಧಾರ್ಮಿಕ ಸಂಪ್ರದಾಯಗಳನ್ನು ಮುಂದಿನ ಪೀಳಿಗೆಗೆ ಪರಿಚಯಿಸಬೇಕು. ಹಿರಿಯರು ರೂಪಿಸಿಕೊಟ್ಟ ಸಂಪ್ರದಾಯಗಳನ್ನು ಮುಂದುವರಿಸುವ ನಿಟ್ಟಿನಲ್ಲಿ ಹಿರಿಯ ನಾಗರಿಕರಿಗೆ ಸನ್ಮಾನಿಸುವ ಕಾರ್ಯಕ್ರಮವೂ ಮಹತ್ವದ್ದಾಗಿದೆ. ಈ ಸಂದರ್ಭದಲ್ಲಿ ಸಮಾಜಕ್ಕೆ ಅಮೂಲ್ಯ ಕೊಡುಗೆ ನೀಡಿದ ಸಮಾಜದ ಹಿರಿಯರ ಸೇವೆ ಮತ್ತು ಮಾರ್ಗದರ್ಶನವನ್ನು ಸ್ಮರಿಸಿ ಸಂಘದ ಕಾರ್ಯಕಾರಿ ಸಮಿತಿಯ ಕಾರ್ಯವೈಖರಿ ಮತ್ತು ದಾನಿಗಳ ಉದಾರ ಕೊಡುಗೆಗಳನ್ನು ಶ್ಲಾಘಿಸುತ್ತೇನೆ ಎಂದು ಅಧ್ಯಕ್ಷೀಯ ಭಾಷಣದಲ್ಲಿ ಮನೋಜ್ ಹೆಗ್ಡೆ ತಿಳಿಸಿದರು.

ಕಾರ್ಯಕ್ರಮಗಳಲ್ಲಿ ಸಂಘದ ಪದಾಧಿಕಾರಿಗಳು, ಸದಸ್ಯರನೇಕರು ಹಾಜರಿದ್ದರು. ವಿದ್ವಾನ್ ಗುರುಪ್ರಸಾದ್ ಭಟ್ ತನ್ನ ಪೌರೋಹಿತ್ಯದಲ್ಲಿ ಬೆಳಗ್ಗೆ ಗಣಹೋಮ, ಶ್ರೀ ಸತ್ಯನಾರಾಯಣ ಮಹಾಪೂಜೆ, ಮಧ್ಯಾಹ್ನ ಮಹಾಮಂಗಳಾರತಿ ನೆರವೇರಿಸಿ ತೀರ್ಥಪ್ರಸಾದ ವಿತರಿಸಿ ಹರಸಿದರು. ಸರೋಜಾ ರತ್ನಾಕರ ಹೆಗ್ಡೆ ಹಾಗೂ ಮಂಗಳ ರವಿ ಹೆಗ್ಡೆ ದಂಪತಿ ಪೂಜಾದಿಗಳ ಯಜಮಾನತ್ವ ವಹಿಸಿದ್ದರು. ದಸರಾ ನಿಮಿತ್ತ ಸಂಜೆ ದಾಂಡಿಯಾ ನೃತ್ಯ ನಡೆಸಿದರು.

ಕುಲದೇವರು ಶ್ರೀ ವೀರಮಾರುತಿ ಹನುಮಾನ್ ದೇವರು ಮತ್ತು ಶೃಂಗೇರಿ ಶಾರದಾ ದೇವಿಯನ್ನು ಸ್ತುತಿಸಿ ಸಮಾರಂಭ ಆದಿಗೊಳಿಸಲಾಗಿದ್ದು, ಮಹಿಳಾ ವಿಭಾಗದ ಸದಸ್ಯೆಯರು ಪ್ರಾರ್ಥನೆಯನ್ನಾಡಿದರು. ಕೌಶಲ್ಯ ಹೆಗ್ಡೆ, ಡಾ| ನಯನಾಂಬಿಕ ಎಸ್.ಹೆಗ್ಡೆ, ಪ್ರಭಾ ಹೆಗ್ಡೆ ಥಾಣೆ ಹಾಗೂ ಶಶಿ ಹೆಗ್ಡೆ ಪನ್ವೇಲ್ ಅತಿಥಿಗಳನ್ನು ಪರಿಚಯಿಸಿದರು. ಪದಾಧಿಕಾರಿಗಳು ಅತಿಥಿಗಳಿಗೆ ಸ್ಮರಣಿಕೆ, ಪುಷ್ಪಗುಚ್ಛ ಗಳನ್ನೀಡಿ ಗೌರವಿಸಿದರು. ಸಿಎ| ಸುರೇಶ್ ಹೆಗ್ಡೆ ಸಂಘದ ವಾರ್ಷಿಕ ವರದಿ ವಾಚಿಸಿದರು. ಸುಜ್ಞಾ ಹೆಗ್ಡೆ, ಕೃಪಾ ಹೆಗ್ಡೆ ವಿಕ್ರೋಲಿ, ಶೋಭಾ ಹೆಗ್ಡೆ, ತಾರಮತಿ ಹೆಗ್ಡೆ, ಸುಜತಾ ಹೆಗ್ಡೆ, ಅಪೂರ್ವ ಹೆಗ್ಡೆ ಪ್ರಶಸ್ತಿ ಪುರಸ್ಕೃತರನ್ನು ಪರಿಚಯಿಸಿ ಅಭಿನಂದಿಸಿದರು. ಮಹಿಳಾ ಕಾರ್ಯದರ್ಶಿ ಸವಿತಾ ಹೆಗ್ಡೆ ಸಾಧಕ ಪ್ರತಿಭಾನ್ವಿತ ಮಕ್ಕಳ ಯಾದಿ ವಾಚಿಸಿದರು. ಮಾಧ್ಯಮ ಸಂಚಾಲಕ ಲ| ಮುರಳೀಧರ್ ಹೆಗ್ಡೆ ಸ್ವಾಗತಿಸಿ, ಪ್ರಸ್ತಾವನೆಗೈದು, ಕಾರ್ಯಕ್ರಮ ನಿರೂಪಿಸಿ ಆಭಾರ ಮನ್ನಿಸಿದರು. ರಾಷ್ಟ್ರಗೀತೆಯೊಂದಿಗೆ ಸಮಾರಂಭ ಮುಕ್ತಾಯ ಗೊಂಡಿತು.

# ಮುಂಬಯಿಯ ವಡಾಲದ ಎನ್.ಕೆ.ಇ.ಎಸ್ ಶಾಲೆಯ ದೇಶ-ವಿದೇಶದಲ್ಲಿರುವ ಹಳೇ ವಿದ್ಯಾರ್ಥಿಗಳಿಗೆ ಮರಳಿ ಶಾಲೆಗೆ ಬರಲು ವಿಶೇಷ ಅವಕಾಶ

**ಮುಂಬಯಿ, ಅ.18:** ರಾಷ್ಟ್ರದ ಆರ್ಥಿಕ ರಾಜಧಾನಿ ಬೃಹನ್ಮುಂಬಯಿ ಇಲ್ಲಿನ ವಡಾಲದ ಐತಿಹಾಸಿಕ ಕನ್ನಡ ಶಾಲೆ ನ್ಯಾಶನಲ್ ಕನ್ನಡ ಎಜ್ಯುಕೇಶನ್ ಸೊಸೈಟಿ (ಎನ್‌ಕೆಇಎಸ್) ಶಾಲೆಯ ಹಳೆವಿದ್ಯಾರ್ಥಿಗಳೆ, 'ನೀವು ಕಲಿತ ಶಾಲೆ ನಿಮ್ಮ ಬಾಲ್ಯದ ನೆನಪುಗಳ ತಾಣ' ಬದುಕಿನ ಮೊದಲ ಪಾಠ ಕಲಿಸಿದ ಅಂಗಳ. ಇದೀಗ ದೇಶ-ವಿದೇಶಗಳಲ್ಲಿ ನೆಲೆಸಿರುವ ಎನ್.ಕೆ.ಇ.ಎಸ್ ಶಾಲೆಯ ಎಲ್ಲ ಹಳೆಯ ವಿದ್ಯಾರ್ಥಿಗಳು ಮರಳಿ ತಮ್ಮ ಶಾಲಾ ದಿನಗಳ ನೆನಪುಗಳನ್ನು ಹಂಚಿಕೊಳ್ಳಲು ಮತ್ತು ಆಗಿನ ನೀವು ಕಂಡು ಅನುಭವಿಸಿದ ಹಳೇ ಶಾಲಾ ಕಟ್ಟಡವನ್ನು ವೀಕ್ಷಿಸಲು ಅಂತಿಮ ಅವಕಾಶವೊಂದು ಒದಗಿಸಲಾಗಿದೆ.

ವಡಾಲದಲ್ಲಿರುವ ರಾಷ್ಟ್ರೀಯ ಕನ್ನಡ ಶಿಕ್ಷಣ ಸಂಸ್ಥೆ (ಎನ್‌ಕೆಇಎಸ್) ಪ್ರೌಢಶಾಲೆಯ ಬಹು-ಶ್ರೇಣಿಯ ದೇವಾಲಯ ರೂಪಿತ ರಚನೆಯ ಶಾಲಾ ಕಟ್ಟಡಕ್ಕೆ ಅಂತಿಮ ವಿದಾಯ ಹೇಳಲು ಇದೀಗ ಸಿದ್ಧತೆಗಳು ನಡೆಯುತ್ತಿದೆ. ಎನ್.ಕೆ.ಇ.ಎಸ್ ಶಾಲಾ ಕಟ್ಟಡ ಇದೀಗ ಅತ್ಯಾಧುನಿಕವಾಗಿ ನವೀಕರಿಸಲು ಯೋಜನೆ ರೂಪಿಸಲಾಗಿದ್ದು, ಆ ನಿಮಿತ್ತ ಹಳೇ ಕಟ್ಟಡವನ್ನು ಕೆಡವಲು ಸಿದ್ಧತೆ ನಡೆಯುತ್ತಿದೆ. ಮುಂದೆ ನವೀಕೃತ ಕಟ್ಟಡದ ನಿರ್ಮಾಣಕ್ಕೆ ಸಿದ್ಧಗೊಂಡಿದೆ. ಈ ಪ್ರಯುಕ್ತ ದೇಗುಲದಂತಿರುವ ಹಳೇ ಕಟ್ಟದಲ್ಲಿ ವಿದ್ಯಾರ್ಜನೆಗೈದ ಹಳೆ ವಿದ್ಯಾರ್ಥಿಗಳಿಗೆ ಕ್ಯಾಂಪಸ್‌ಗೆ ಮರು ಭೇಟಿಯ ಅಪೂರ್ವ ಮತ್ತು ಕೊನೆಯ ಅವಕಾಶವಿದ್ದು ಅದನ್ನು ಸದುಪಯೋಗ ಮಾಡಿಕೊಳ್ಳಲು ಈ ಮೂಲಕ ವಿನಂತಿಸಲಾಗಿದೆ. ಆ ಪ್ರಯುಕ್ತ 2026ರ ನವೆಂಬರ್-02 ರಿಂದ ನವಂಬರ್-21ರ ಒಳಗೆ ದೇಶ ವಿದೇಶಗಳಲ್ಲಿ ನೆಲೆಯಾದ ಹಳೆವಿದ್ಯಾರ್ಥಿಗಳು




ನಿಮ್ಮನಿಮ್ಮ ಬಿಡುವಿನ ವೇಳೆಯಲ್ಲಿ ಒಮ್ಮೆಯಾದರೂ ತಾವು ಕಲಿತ ಈ ಶಾಲೆಗೆ ಭೇಟಿನೀಡಿ ನಿಮ್ಮ ಬಾಲ್ಯದನೆನಪುಗಳನ್ನು ಮತ್ತೊಮ್ಮೆ ಬಿಚ್ಚಿಕೊಳ್ಳಲು ಅವಕಾಶ ಒದಗಿಸಲಾಗಿದೆ. ಸ್ವಿದ್ಯಾರ್ಥಿ ಸಹಪಾಠಿ, ಗೆಳೆಯರೊಂದಿಗೆ ಕಳೆದ ಆ ಶಾಲಾದಿನಗಳ ಸುಂದರ ಕ್ಷಣಗಳನ್ನು ನೆನಪಿಸಿಕೊಳ್ಳಿ. ನೀವು ಅಕ್ಷರ ಕಲಿತ ತರಗತಿಗಳಲ್ಲಿ ಒಮ್ಮೆ ಹೆಜ್ಜೆ ಹಾಕಿ, ಹಳೆಯ ದಿನಗಳ ಸವಿನೆನಪುಗಳನ್ನು ಮತ್ತೆ ಮೆಲುಕು ಹಾಕುವರೇ ನೆನಪಿಸಿಕೊಳ್ಳುತ್ತೇವೆ.

ಶಾಲೆ ಎಂದರೆ ಕೇವಲ ಕಟ್ಟಡವಲ್ಲ; ಅದು ನಮ್ಮ ಬಾಲ್ಯ, ನಮ್ಮ ಸ್ನೇಹ, ನಮ್ಮ ಬದುಕಿನ ಅಮೂಲ್ಯ ಅಧ್ಯಾಯ. ಇದೀಗ ಅತ್ಯಾಧುನಿಕ ಶೈಕ್ಷಣಿಕ ಸಂಕೀರ್ಣ ಸಿದ್ಧಪಡಿಸಲು ಆಧುನಿಕ ಪುನರಾಭಿವೃದ್ಧಿಗೆ ನಿರ್ಧರಿಸಲಾಗಿದೆ. ವಾಸ್ತುಶಿಲ್ಪ ಇತಿಹಾಸದ ಈ ಶಾಲಾ ಕಟ್ಟಡವನ್ನು ಗೌರವಿಸಲು, ಶಾಲಾ ಆಡಳಿತ ಮಂಡಳಿಯ ದೇಶ ವಿದೇಶಗಳಲ್ಲಿನ ಹಳೆವಿದ್ಯಾರ್ಥಿಗಳಿಗಾಗಿ ಎನ್‌ಕೆಇಎಸ್ ಕ್ಯಾಂಪಸ್‌ನ 'ವಿಶೇಷ ವಿದಾಯ ಭೇಟಿ'ಗಾಗಿ ತನ್ನ ಬಾಗಿಲುಗಳನ್ನುತೆರೆಯುತ್ತಿದೆ ಎಂದು ಅಧಿಕೃತವಾಗಿ ಘೋಷಿಸಿದೆ.

ಮುಂದಿನ ದಿನಗಳಲ್ಲಿ ಈ ಶಾಲಾ ಕಟ್ಟಡ ಹೊಸ ರೂಪ ಪಡೆದುಕೊಳ್ಳಬಹುದು. ಹಾಗಾಗಿ, ಶಾಲಾ ಕಟ್ಟಡದ ಸ್ವರೂಪ ಬದಲಾವಣೆಗೆ ಮುನ್ನ ಒಮ್ಮೆ ಬನ್ನಿ, ನಿಮ್ಮ ಶಾಲೆಯ ಹಳೆಯ ರೂಪವನ್ನು ಕಣ್ತುಂಬಿಕೊಳ್ಳಿ. ನಿಮ್ಮ ನೆನಪುಗಳೊಂದಿಗೆ ಮತ್ತೆ ಒಂದಾಗಿರಿ ಎಂದು ಹಳೆವಿದ್ಯಾರ್ಥಿಗಳಲ್ಲಿವಿನಂತಿಸಿದೆ.

ಪ್ರಸ್ತುತ, ಪಾರ್ಥಸಾರಥಿ ನಾಯಕ್ ಅವರು ಅಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿದ್ದು, ಅವರ ನೇತೃತ್ವದ ಸಮಿತಿಯಲ್ಲಿ ಕು| ಕಮಲಾ ಕೆ. (ಉಪಾಧ್ಯಕ್ಷರು), ಡಾ| ಗಣಪತಿ ಶಂಕರಲಿಂಗ್ (ಉಪಾಧ್ಯಕ್ಷರು), ಪದ್ಮಜಾ ಬನವಾಸಿ (ಗೌರವ ಕಾರ್ಯದರ್ಶಿ), ಶಶಿಕಾಂತ್ ಜೋಶಿ (ಗೌರವ ಕಾರ್ಯದರ್ಶಿ), ಕು| ಭವಾನಿ ಚಂದ್ರಶೇಖರ್ (ಗೌರವ ಕೋಶಾಧಿಕಾರಿ) ಅವರು ಪದಾಧಿಕಾರಿಗಳಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಹಾಗೆಯೇ ಡಾ| ಬಿ.ಆರ್ ಮಂಜುನಾಥ್, ಕೆ.ಮಂಜುನಾಥಯ್ಯ, ಅನಂತ್ ಬನವಾಸಿ ಮತ್ತು ಬಿ.ಎಸ್ ಸುರೇಶ್ ಅವರು ಟ್ರಸ್ಟಿಗಳಾಗಿ ಸೇವಾ ನಿರತರಾಗಿದ್ದಾರೆ. ಇದೇ 2026ರ ನ.02 ರಿಂದ ನ.21 ವರೆಗೆ ಶಾಲಾ ಭೇಟಿಯ ಸಮಯವನ್ನು ಸುಗಮಗೊಳಿಸಲು ಹಳೆ ವಿದ್ಯಾರ್ಥಿಗಳು ತಮ್ಮ ಶಾಲಾ ಅವಧಿಯ ವರ್ಷವನ್ನು ಮತ್ತು ಯಾವ ದಿನ ಮರಳಿ ಶಾಲೆಯತ್ತ ಬರುವಿರಿ ಎಂದು ತಿಳಿಸಲು ಶಾಲಾ ಆಡಳಿತವನ್ನು ಸಂಪರ್ಕಿಸಲು ವಿನಂತಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಸುನೀಲ್ ಹರಿಬಲ್ (ವಾಟ್ಸಪ್ 99675 46652) ಸಂಪರ್ಕಿಸಲು ಶಾಲಾ ಪ್ರಕಟಣೆ ತಿಳಿಸಿದೆ.

### ಕರ್ನಾಟಕ ಸರ್ಕಾರದ ಎಲ್ಲಾ ಇಲಾಖೆ, ಮಂಡಳಿ-ನಿಗಮಗಳು ಸಂಸ್ಥೆಗಳಿಗೆ ತಕ್ಷಣದಿಂದಲೇ ಆದೇಶ ಅನ್ವಯ

# ಮಾಹಿತಿಹಕ್ಕು ಅರ್ಜಿಗಳ ಆನ್‌ಲೈನ್ ನೋಂದಣಿ ಈಗ ಸಕಾಲ ವ್ಯಾಪ್ತಿಗೆ: 2 ದಿನದಲ್ಲಿ ಅಪ್‌ಲೋಡ್ ಮಾಡುವುದು ಕಡ್ಡಾಯ

सूचना का अधिकार RIGHT TO INFORMATION

**ಬೆಂಗಳೂರು, ಅ.18:** ರಾಜ್ಯ ಸರ್ಕಾರವು ಸಾರ್ವಜನಿಕರಿಗೆ ಮಾಹಿತಿ ಹಕ್ಕು ಕಾಯ್ದೆಯಡಿ ಸುಲಭ ಮತ್ತು ವೇಗದ ಸೇವೆ ಒದಗಿಸುವ ನಿಟ್ಟಿನಲ್ಲಿ ಮಹತ್ವದ ನಿರ್ಧಾರ ಕೈಗೊಂಡಿದೆ. ಸಾರ್ವಜನಿಕರಿಂದ ಭೌತಿಕವಾಗಿ (ಅಂಚೆ ಅಥವಾ ಖುದ್ದಾಗಿ) ಸ್ವೀಕರಿಸುವ ಆರ್‌ಟಿಐ ಅರ್ಜಿಗಳನ್ನು ಆರ್‌ಟಿಐ ಆನ್‌ಲೈನ್ ಪೋರ್ಟಲ್‌ನಲ್ಲಿ ನೋಂದಾಯಿಸುವ ಸೇವೆಯನ್ನು ಈಗ ಕರ್ನಾಟಕ ಸಕಾಲ ಸೇವೆಗಳ ಅಧಿನಿಯಮದ ವ್ಯಾಪ್ತಿಗೆ ತರಲಾಗಿದೆ. ಯಾವುದೇ ಸರ್ಕಾರಿ ಕಚೇರಿಯಲ್ಲಿ ಭೌತಿಕವಾಗಿ ಸ್ವೀಕರಿಸಿದ ಆರ್‌ಟಿಐ ಅರ್ಜಿಯನ್ನು ಸಂಬಂಧಪಟ್ಟ ಕಚೇರಿಯ ಮುಖ್ಯಸ್ಥರು ಅಥವಾ ಅವರು ನೇಮಿಸಿದ ಅಧಿಕಾರಿ/ ಸಿಬ್ಬಂದಿಯು 2 ಕೆಲಸದ ದಿನಗಳ ಒಳಗಾಗಿ ಆರ್‌ಟಿಐ ಆನ್‌ಲೈನ್ ಪೋರ್ಟಲ್‌ನಲ್ಲಿ ನಮೂದಿಸುವುದು ಕಡ್ಡಾಯವಾಗಿದೆ.

**ಮೊದಲನೇ ಮೇಲ್ಮನವಿ:** ಸಕ್ಷಮ ಪ್ರಾಧಿಕಾರವು (ಮಾಹಿತಿ ಹಕ್ಕು ಕಾಯ್ದೆಯಡಿಯ ಮೊದಲನೇ ಮೇಲ್ಮನವಿ ಪ್ರಾಧಿಕಾರ) 7 ಕೆಲಸದ ದಿನಗಳಲ್ಲಿ ಇತ್ಯರ್ಥಪಡಿಸಬೇಕು.

**ಎರಡನೇ ಮೇಲ್ಮನವಿ:** ಮೇಲ್ಮನವಿ ಪ್ರಾಧಿಕಾರವು (ಸಂಬಂಧಪಟ್ಟ ಇಲಾಖೆಯ ಕಾರ್ಯದರ್ಶಿಗಳು) 7 ಕೆಲಸದ ದಿನಗಳಲ್ಲಿ ಅರ್ಜಿ ಇತ್ಯರ್ಥಗೊಳಿಸಬೇಕು.

ಸಂಬಂಧಿಸಿದ ಸಾರ್ವಜನಿಕ ಮಾಹಿತಿ ಅಧಿಕಾರಿಯು ಇನ್ನು ಆರ್‌ಟಿಐ ಆನ್‌ಲೈನ್ ಪೋರ್ಟಲ್‌ನಲ್ಲಿ ನೋಂದಾಯಿತರಾಗಿರದಿದ್ದರೆ, ಅರ್ಜಿಯನ್ನು ಜಿಲ್ಲಾ ಅಥವಾ ಇಲಾಖಾ ಮಟ್ಟದ 'ನೋಡಲ್ ಅಧಿಕಾರಿ'ಗೆ ರವಾನಿಸಲಾಗುತ್ತದೆ. ಪಿಐಓ ಅವರನ್ನು ಯಾವುದೇ ವಿಳಂಬವಿಲ್ಲದೆ ಪೋರ್ಟಲ್‌ಗೆ ನೋಂದಾಯಿಸುವ ಜವಾಬ್ದಾರಿ ನೋಡಲ್ ಅಧಿಕಾರಿಯದ್ದಾಗಿರುತ್ತದೆ. ಈ ಆದೇಶವು ಕರ್ನಾಟಕ ಸರ್ಕಾರದ ಎಲ್ಲಾ ಇಲಾಖೆಗಳು, ಮಂಡಳಿಗಳು, ನಿಗಮಗಳು ಹಾಗೂ ಸಂಸ್ಥೆಗಳಿಗೆ ತಕ್ಷಣದಿಂದಲೇ ಅನ್ವಯವಾಗಲಿದೆ.

## ಸಕಾಲ ಸೇವೆ ವಿಳಂಬ ಮಾಡಿದರೆ ಅಧಿಕಾರಿಗಳಿಗೆ ದುರುದ್ದೇಶಪೂರಿತ ದೂರು ನೀಡುವ ನಾಗರಿಕರಿಗೂ ಬೀಳಲಿದೆ ದಂಡ

ಸಕಾಲ ಸೇವೆಗಳನ್ನು ವಿಳಂಬಗೊಳಿಸುವ ಅಧಿಕಾರಿಗಳಿಗೆ ವಿಧಿಸುವ ಪರಿಹಾರ ವೆಚ್ಚ ಹಾಗೂ ದುರುದ್ದೇಶಪೂರಿತ ದೂರು ಸಲ್ಲಿಸುವ ನಾಗರಿಕರಿಗೆ ವಿಧಿಸುವ ದಂಡದ ಮೊತ್ತವನ್ನು ಪರಿಷ್ಕರಿಸಿ ಸರ್ಕಾರ ಅಧಿಸೂಚನೆ ಹೊರಡಿಸಿದೆ. ಈ ನೂತನ ಪರಿಷ್ಕೃತ ದರಗಳು ತಕ್ಷಣದಿಂದಲೇ ಜಾರಿಗೆ ಬಂದಿವೆ ಎಂದು ಸರ್ಕಾರದ ಪ್ರಧಾನ ಕಾರ್ಯದರ್ಶಿ ಹರ್ಷ ಗುಪ್ತಾ ತಿಳಿಸಿದ್ದಾರೆ.

**ದಂಡದ ವಿವರ:** ಮೊದಲ 1ರಿಂದ 5 ದಿನಗಳ ವಿಳಂಬಕ್ಕೆ ದಿನಕ್ಕೆ ರೂ. 20ರಂತೆ ಗರಿಷ್ಠ ರೂ.100 ಪರಿಹಾರ. 6ರಿಂದ 10 ದಿನಗಳ ವಿಳಂಬಕ್ಕೆ ದಿನಕ್ಕೆ ರೂ. 40ರಂತೆ ಗರಿಷ್ಠ ರೂ. 300 ಪರಿಹಾರ. 11ರಿಂದ 15 ದಿನಗಳ ವಿಳಂಬಕ್ಕೆ ದಿನಕ್ಕೆ ರೂ. 60ರಂತೆ ಗರಿಷ್ಠ ರೂ. 600 ಪರಿಹಾರ. 16ರಿಂದ 20 ದಿನಗಳ ವಿಳಂಬಕ್ಕೆ ದಿನಕ್ಕೆ ರೂ. 80ರಂತೆ ಗರಿಷ್ಠ ರೂ. 1,000 ಪರಿಹಾರ. 21ರಿಂದ 25 ದಿನಗಳ ವಿಳಂಬಕ್ಕೆ ದಿನಕ್ಕೆ ರೂ.100ರಂತೆ ಒಟ್ಟಾರೆಯಾಗಿ ಗರಿಷ್ಠ ರೂ. 1,500 ಪರಿಹಾರ ವೆಚ್ಚವನ್ನು ನಿಗದಿಪಡಿಸಲಾಗಿದೆ.

ಅಲ್ಲದೆ, ಸೇವೆಗಳನ್ನು ಸರಿಯಾಗಿ ನೀಡದೆ ಲೋಪದೋಷಗಳಿದ್ದರೆ ಅಥವಾ ಅರ್ಜಿಗಳನ್ನು ಸೂಕ್ತ ಕಾರಣವಿಲ್ಲದೆ ತಪ್ಪಾಗಿ ತಿರಸ್ಕರಿಸಿದ್ದರೆ, ನಾಗರಿಕರಿಗೆ ಗರಿಷ್ಠ ರೂ. 1,500 ಪರಿಹಾರವನ್ನು ಸಂಬಂಧಪಟ್ಟ ಅಧಿಕಾರಿಯಿಂದ ವಸೂಲಿ ಮಾಡಿ ನೀಡಲಾಗುತ್ತದೆ.

**ನಾಗರಿಕರಿಗೆ ದಂಡ:** ಸರ್ಕಾರಿ ನೌಕರರಿಗೆ ಕೇಡು ಉಂಟುಮಾಡುವ, ಕಿರುಕುಳ ನೀಡುವ, ಬೆದರಿಸುವ ಅಥವಾ ದುರುದ್ದೇಶದಿಂದ ಸುಳ್ಳು ಕುಂದುಕೊರತೆ ದೂರು ಸಲ್ಲಿಸುವ ನಾಗರಿಕರ ವಿರುದ್ಧವೂ ಕಠಿಣ ಕ್ರಮ ಕೈಗೊಳ್ಳಲು ಕಾಯ್ದೆಯಲ್ಲಿ ಅವಕಾಶ ಕಲ್ಪಿಸಲಾಗಿದೆ. ತನಿಖೆಯಲ್ಲಿ ದೂರು ದುರುದ್ದೇಶಪೂರಿತ ಎಂದು ಸಾಬೀತಾದರೆ, ಅಂತಹ ನಾಗರಿಕರಿಗೆ ಪ್ರತಿ ಅರ್ಜಿಗೆ ರೂ. 1,500 ದಂಡ ವಿಧಿಸಲಾಗುತ್ತದೆ. ಇದೇ ತಪ್ಪನ್ನು ಪುನರಾವರ್ತಿಸಿದಲ್ಲಿ ಮತ್ತೆ ಪ್ರತಿ ಅರ್ಜಿಗೆ ರೂ. 1,500 ದಂಡ ವಿಧಿಸಲಾಗುತ್ತದೆ. ಈ ದಂಡದ ಮೊತ್ತವನ್ನು ಭೂ ಕಂದಾಯ ಹಿಂಬಾಕಿಯಂತೆ ವಸೂಲಿ ಮಾಡಲಾಗುತ್ತದೆ.



ಡಾ.ಮನಮೋಹನ್‌ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಸೆಂಟ್ರಲ್ ಕಾಲೇಜಿನ ಆವರಣದಲ್ಲಿರುವ ರಾಜಾಜಿಹಾಲ್‌ನಲ್ಲಿ ನವರಾತ್ರಿ ಪ್ರಯುಕ್ತವಾಗಿ ಸರಸ್ವತಿ ಪೂಜೆಯನ್ನು ಕುಲಪತಿಪ್ರೊ. ರಮೇಶ್ ಅಧ್ಯಕ್ಷತೆಯಲ್ಲಿ ನೆರವೇರಿಸಲಾಯಿತು. ಕುಲಸಚಿವ ನವೀನ್ ಜೋಸೆಫ್, ವಿತ್ತಾಧಿಕಾರಿ ಎಂ.ವಿ.ವಿಜಯಲಕ್ಷ್ಮಿ ಹಾಗೂ ಬೋಧಕ-ಬೋಧಕೇತರ ಸಿಬ್ಬಂದಿ ಭಾಗವಹಿಸಿದ್ದರು.

# ಶಿಶು ಆಹಾರದಲ್ಲಿ ಸುಕ್ರೋಸ್-ಫ್ರಕ್ಟೋಸ್ ನಿಷೇಧಿಸಲು ತಿದ್ದುಪಡಿ ಪ್ರಸ್ತಾಪ

**ಬೆಂಗಳೂರು, ಅ.18:** ಭಾರತೀಯ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರ 'ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಶಿಶು ಪೋಷಣೆಗಾಗಿ ಆಹಾರ ನಿಯಮಾವಳಿ 2020'ಕ್ಕೆ ಕರಡು ತಿದ್ದುಪಡಿ ಪ್ರಕಟಿಸಿದೆ. ಆರು ತಿಂಗಳವರೆಗಿನ ಶಿಶುಗಳಿಗಾಗಿ ತಯಾರಿಸಲಾದ ಆಹಾರ ಉತ್ಪನ್ನಗಳಲ್ಲಿ ಸುಕ್ರೋಸ್ ಮತ್ತು ಫ್ರಕ್ಟೋಸ್ ಸೇರಿಸುವುದನ್ನು ನಿಷೇಧಿಸಲು ಇದರಲ್ಲಿ ಪ್ರಸ್ತಾಪಿಸಲಾಗಿದೆ.

ಈ ನಿರ್ಬಂಧದ ಉದ್ದೇಶವು ಶಿಶುಗಳಿಗೆ ಸೂಕ್ತ ಪೋಷಣೆಯನ್ನು ಒದಗಿಸುವುದು ಮತ್ತು ಜೀವನದ ಅತ್ಯಂತ ನಿರ್ಣಾಯಕವಾದ ಮೊದಲ ಆರು ತಿಂಗಳುಗಳಲ್ಲಿ ಅವರ ಆರೋಗ್ಯಕರ ಬೆಳವಣಿಗೆ ಹಾಗೂ ವಿಕಾಸಕ್ಕೆ ಬೆಂಬಲ ನೀಡುವುದಾಗಿದೆ. ಜೀವನದ ಮೊದಲ ಆರು ತಿಂಗಳುಗಳು ಆರೋಗ್ಯಕರ ಬೆಳವಣಿಗೆ ಮತ್ತು ವಿಕಾಸಕ್ಕೆ ಅತ್ಯಂತ ಪ್ರಮುಖವಾದ ಅವಧಿಯಾಗಿರುವುದರಿಂದ, ಈ ಹಂತದಲ್ಲಿ ಸೂಕ್ತ ಪೋಷಣೆ ಅತ್ಯಗತ್ಯವಾಗಿರುತ್ತದೆ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ ತಿಳಿಸಿದೆ. ಶಿಶುಗಳಿಗಾಗಿನ ಆಹಾರ ಉತ್ಪನ್ನಗಳಲ್ಲಿ ಸುಕ್ರೋಸ್ ಮತ್ತು ಫ್ರಕ್ಟೋಸ್‌ನಂತಹ ಅನಗತ್ಯ ಅಂಶಗಳನ್ನು ಸೇರಿಸದೆಯೇ, ಈ ವಯೋಮಾನದ ಮಕ್ಕಳ ಪೌಷ್ಟಿಕಾಂಶದ ಅಗತ್ಯಗಳನ್ನು ಪೂರೈಸುವುದನ್ನು ಖಚಿತಪಡಿಸಿಕೊಳ್ಳುವುದು ಈ ಪ್ರಸ್ತಾವಿತ ನಿರ್ಬಂಧದ




ಗುರಿಯಾಗಿದೆ. ಬಾಲ್ಯದ ಸ್ಥೂಲಕಾಯತೆ ಮತ್ತು ಅದಕ್ಕೆ ಸಂಬಂಧಿಸಿದ ಆರೋಗ್ಯ ಸಮಸ್ಯೆಗಳಿಗೆ ಕಾರಣವಾಗುವ, ಸಕ್ಕರೆ ಅಂಶಗಳ ಸೇವನೆಯಿಂದ ಉಂಟಾಗುವ ಅಪಾಯಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ, ಸಾರ್ವಜನಿಕ ಆರೋಗ್ಯ ಸುಧಾರಣೆಗೆ ಕೈಗೊಂಡಿರುವ ವಿಶಾಲ ಪ್ರಯತ್ನಗಳಿಗೂ ಈ ಕ್ರಮ ಪೂರಕವಾಗಿದೆ.

ಈ ಕರಡು ಅಧಿಸೂಚನೆಯನ್ನು ಸಾರ್ವಜನಿಕ ಸಮಾಲೋಚನೆಗಾಗಿ ಪ್ರಕಟಿಸಲಾಗಿದ್ದು, ಸಂಬಂಧಪಟ್ಟವರು 60 ದಿನಗಳ ಒಳಗಾಗಿ ತಮ್ಮ ಆಕ್ಷೇಪಣೆ ಮತ್ತು ಸಲಹೆಗಳನ್ನು ಸಲ್ಲಿಸಬಹುದೆಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ ತಿಳಿಸಿದೆ. ನಿಗದಿತ ಅವಧಿಯಲ್ಲಿ ಸ್ವೀಕರಿಸಲಾದ ಅಭಿಪ್ರಾಯಗಳನ್ನು ಪರಿಗಣನೆಗೆ ತೆಗೆದುಕೊಂಡ ನಂತರವೇ ಪ್ರಾಧಿಕಾರ ಈ ತಿದ್ದುಪಡಿಯನ್ನು ಅಂತಿಮಗೊಳಿಸಲಿದೆ. ಭಾರತೀಯ ಆಹಾರ ಸುರಕ್ಷತೆ ಮತ್ತು ಮಾನದಂಡಗಳ ಪ್ರಾಧಿಕಾರವು ಚಹಾದಲ್ಲಿ ನಡೆಸುವ ಅಸೆಟಾಮಿ ಪ್ರಿಡ್, ಇಮಿಡಾ ಕ್ಲೋಪ್ರಿಡ್ ಕೀಟನಾಶಕಗಳ ಬಳಕೆಯನ್ನು ಮಿತಿಗೊಳಿಸಿ, ಆದೇಶ ಹೊರಡಿಸಿದೆ.

### ಕಿಂಗ್‌ಪಿನ್ ಪ್ರಶಾಂತ್ ದೊರೆಸ್ವಾಮಿ ಕೃತ್ಯ ಎಸ್‌ಐಟಿ ತನಿಖೆಯಲ್ಲಿ ಬಹಿರಂಗ

# ಬೇನಾಮಿ ಹೆಸರಲ್ಲಿ ಕಂಪನಿ ಹೆಸರಲ್ಲಿ 14 ಕೋಟಿ ರೂ.ಗಳಿಗೂ ಹೆಚ್ಚು ನಕಲಿ ಔಷಧ ಮಾರಾಟ

**ಬೆಂಗಳೂರು, ಅ.18:** ರಾಜ್ಯದಲ್ಲಿ ತಲ್ಲಣ ಮೂಡಿಸಿದ್ದ ನಕಲಿ ಔಷಧ ಜಾಲದ ಪ್ರಕರಣದ ಕಿಂಗ್ಪಿನ್ ಪ್ರಶಾಂತ್ ದೊರೆಸ್ವಾಮಿ ಬೇರೆ ಬೇರೆ ಹೆಸರಿನಲ್ಲಿ ಕಂಪನಿಗಳನ್ನು ಸೃಷ್ಟಿಸಿ ಒಟ್ಟು 14 ಕೋಟಿಗೂ ಹೆಚ್ಚು ಮೌಲ್ಯದ ನಕಲಿ ಔಷಧಗಳನ್ನು ಮಾರುಕಟ್ಟೆಗೆ ಮಾರಾಟ ಮಾಡಿರುವುದು ಎಸ್‌ಐಟಿ ತನಿಖೆಯ ಸಂದರ್ಭದಲ್ಲಿ ಬಹಿರಂಗಗೊಂಡಿದೆ. ಈಗಾಗಲೇ ಮೂರು ಕಂಪನಿಗಳನ್ನು ಸ್ಥಾಪಿಸಿದ್ದ ಆರೋಪಿ, ಅವುಗಳ ಮೂಲಕವೇ ನಕಲಿ ಔಷಧಗಳನ್ನು ಯಶಸ್ವಿಯಾಗಿ ಮಾರುಕಟ್ಟೆಗೆ ಬಿಡುಗಡೆ ಮಾಡಿದ್ದ ಎಂದು ಎಸ್‌ಐಟಿ ಮೂಲಗಳು ತಿಳಿಸಿವೆ.

ವಿವಿಧ ಹೆಸರಿನ ಮೂರು ಕಂಪನಿಗಳನ್ನು ಸೃಷ್ಟಿಸಿ ಅವುಗಳ ಮೂಲಕ ನಕಲಿ ಔಷಧಗಳನ್ನು ಮಾರಾಟ ಮಾಡಿದ್ದ ಆರೋಪಿ, ನಂತರ ಯಾರಿಗೂ ಸಂಶಯ ಬಾರದಂತೆ ಆ ಮೂರೂ ಕಂಪನಿಗಳನ್ನು ಮುಚ್ಚಿದ್ದ. ಅಲ್ಲದೆ, ವ್ಯವಹಾರದ ಎಲ್ಲಾ ಪ್ರಮುಖ ದಾಖಲೆಗಳನ್ನೂ ನಾಶಪಡಿಸಿದ್ದ. ಆದರೆ, ಆತನ ನಾಲ್ಕನೇ ಕಂಪನಿಯ ವಹಿವಾಟು ಬೆಳಕಿಗೆ ಬಂದ ನಂತರ ಪ್ರಕರಣ ಬಯಲಾಗಿದೆ ಎಂದು ತನಿಖೆಯ ವೇಳೆ ತಿಳಿದು ಬಂದಿರುವುದಾಗಿ ಎಸ್‌ಐಟಿ ಮೂಲಗಳು ಹೇಳಿವೆ.

ಆಗಸ್ಟ್ 18ರಂದು ಬೆಂಗಳೂರು ದಕ್ಷಿಣ ಜಿಲ್ಲೆಯ ಬಿಡದಿ ಹಾಗೂ ದೊಡ್ಡೇರಿ ಭಾಗದ ಫಾರ್ಮಾಕ್ಸ್ ಮತ್ತು ಅನಧಿಕೃತ ಪ್ಯಾಕಿಂಗ್ ಘಟಕಗಳ ಮೇಲೆ ಆಹಾರ ಸುರಕ್ಷತೆ ಮತ್ತು ಔಷಧ ನಿಯಂತ್ರಣ ಇಲಾಖೆಯ ಅಧಿಕಾರಿಗಳು ದಾಳಿ ನಡೆಸಿದ್ದರು. ಈ ತಪಾಸಣಾ ಕಾರ್ಯಾಚರಣೆಯ ವೇಳೆ ಪ್ರಸಿದ್ಧ ಬಹುರಾಷ್ಟ್ರೀಯ ಫಾರ್ಮಾ ಕಂಪನಿಗಳು, ಬ್ರ್ಯಾಂಡ್ಗಳ ನಕಲಿ ಲೇಬಲ್ ಹಾಗೂ ಪ್ಯಾಕಿಂಗ್ ಸಾಮಗ್ರಿಗಳು ಮತ್ತು ಅಂದಾಜು 4.5ರಿಂದ 5 ಕೋಟಿ ರೂಪಾಯಿ ಮೌಲ್ಯದ ನಕಲಿ ಔಷಧಗಳನ್ನು ಜಪ್ತಿ ಮಾಡಲಾಗಿತ್ತು. ತುರ್ತು ನಿಗಾ ಘಟಕಗಳಲ್ಲಿ (ಐಸಿಯು) ಗಂಭೀರ ಕಾಯಿಲೆಗಳಿಗೆ ಬಳಸುವ ಜೀವ ರಕ್ಷಕ ಔಷಧಗಳನ್ನು ಅತ್ಯಂತ ಕಳಪೆ ಮಟ್ಟದಲ್ಲಿ ನಕಲು ತಯಾರಿಸಿ, ಮಾರುಕಟ್ಟೆಗೆ ಹಾಗೂ ವಿವಿಧ ಆಸ್ಪತ್ರೆಗಳಿಗೆ ಶೇಕಡಾ 50ರಷ್ಟು ರಿಯಾಯಿತಿ ದರದಲ್ಲಿ ಸರಬರಾಜು ಮಾಡುತ್ತಿದ್ದ ಆತಂಕಕಾರಿ ವಿಷಯ ಬೆಳಕಿಗೆ ಬಂದಿತ್ತು ಎಂದು ಎಸ್‌ಐಟಿ ಮೂಲಗಳು ಮಾಹಿತಿ ನೀಡಿವೆ.

ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿದ್ದ ರಾಜ್ಯ ಸರ್ಕಾರ ಸಮಗ್ರ ತನಿಖೆಗಾಗಿ ಜಂಟಿ ಪೊಲೀಸ್ ಆಯುಕ್ತ ಸಿ. ವಂಶಿಕೃಷ್ಣ ಅವರ ನೇತೃತ್ವದಲ್ಲಿ ವಿಶೇಷ ತನಿಖಾ ತಂಡ



ರಚಿಸಿ ಆದೇಶಿಸಿತ್ತು. ಈ ನಕಲಿ ಔಷಧ ಜಾಲ ಪ್ರಕರಣದ ಮುಖ್ಯ ಆರೋಪಿ ಪ್ರಶಾಂತ್ ದೊರೆಸ್ವಾಮಿಯನ್ನು ವಿಶೇಷ ತನಿಖಾ ತಂಡ (ಎಸ್‌ಐಟಿ) ಸೆಪ್ಟಂಬರ್ 29ರ ಬೆಳಗಿನ ಜಾವ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ವಶಕ್ಕೆ ಪಡೆದಿತ್ತು.

ವಂಚನೆ ಬಯಲಾಗುತ್ತಿದ್ದಂತೆ ದೇಶ ತೊರೆದಿದ್ದ ಆರೋಪಿ ಪ್ರಶಾಂತ್ ಅಜರ್ಬೈಜಾನ್‌ನಲ್ಲಿ ತಲೆಮರೆಸಿಕೊಂಡಿರುವುದು ಪತ್ತೆಯಾಗಿತ್ತು. ಎಸ್‌ಐಟಿ ಅಧಿಕಾರಿಗಳು ನಿರಂತರವಾಗಿ ನಡೆಸಿದ ತೀವ್ರ ಸತತ ಪ್ರಯತ್ನ ಹಾಗೂ ಕಾನೂನು ಕ್ರಮಗಳ ಬಳಿಕ ಆರೋಪಿ ಅನಿವಾರ್ಯವಾಗಿ ಭಾರತಕ್ಕೆ ಹಿಂತಿರುಗಬೇಕಾಗಿತ್ತು. ವಿಮಾನ ನಿಲ್ದಾಣಕ್ಕೆ ಬಂದಿಳಿಯುತ್ತಿದ್ದಂತೆಯೇ ಸಜ್ಜಾಗಿದ್ದ ಎಸ್‌ಐಟಿ ತಂಡ ಆರೋಪಿಯನ್ನು ತಕ್ಷಣವೇ ವಶಕ್ಕೆ ಪಡೆದುಕೊಂಡಿತ್ತು.

# ಲೋಕಭವನಕ್ಕೆ ಕೊಳೆಗೇರಿ ಮಕ್ಕಳ ಕನ್ಯಾಪೂಜೆ ನೆರವೇರಿಸಿದ ರಾಜ್ಯಪಾಲೆ

**ಬೆಂಗಳೂರು, ಅ.18:** ನವರಾತ್ರಿ ಹಬ್ಬದ ಅಂಗವಾಗಿ ಬಡ ಮತ್ತು ನಿರ್ಗತಿಕ ಮಕ್ಕಳನ್ನು ರಾಜ್ಯಪಾಲರಾದ ಡಾ. ಸುಧಾಯಾದವ್ ಲೋಕಭವನಕ್ಕೆ ಬೆಂಗಳೂರಿನ ನಾಗಮ್ಮ ನಗರ ಕೊಳಗೇರಿ ಪ್ರದೇಶದ ಬಾಲಕಿಯರನ್ನು ಆಹ್ವಾನಿಸಿ ವಿಶೇಷ ಕನ್ಯಾಪೂಜೆ ನೆರವೇರಿಸಿದರು. ಈ ಸಂದರ್ಭದಲ್ಲಿ ರಾಜ್ಯ ಪಾಲರು, ಬಾಲಕಿಯರ ಹಣೆಗೆ ತಿಲಕವಿಟ್ಟು ಭಕ್ತಿಯಿಂದ ಪೂಜಾ ವಿಧಾನ ನೆರವೇರಿಸಿದರು.



ಮಕ್ಕಳೊಂದಿಗೆ ಸಂವಾದ ನಡೆಸಿ, ಶಾಲಾ ಬ್ಯಾಗ್, ಪುಸ್ತಕಗಳು ಹಾಗೂ ಲೇಖನ ಸಾಮಗ್ರಿಗಳನ್ನು ನೀಡಿ ಆಶೀರ್ವದಿಸಿದರು.ನವರಾತ್ರಿ ಪವಿತ್ರ ಸಂದರ್ಭದಲ್ಲಿ ಮಕ್ಕಳೊಂದಿಗೆ ಕನ್ಯಾಪೂಜೆ ಆಚರಿಸುವ ಮೂಲಕ ರಾಜ್ಯಪಾಲರು ಮಕ್ಕಳ ಮೇಲಿನ ಪ್ರೀತಿ, ಕರುಣೆ, ಕಾಳಜಿಯ ಸಂದೇಶ ಸಾರಿದ್ದು, ಮಕ್ಕಳ ಶಿಕ್ಷಣಕ್ಕೆ ಬೆಂಬಲ ನೀಡುವುದು ಮತ್ತು ಅವರ ಉಜ್ವಲ ಭವಿಷ್ಯಕ್ಕೆ ಪೂರಕ ವಾತಾವರಣ ಕಲ್ಪಿಸುವ ಮಹತ್ವವನ್ನು ಎತ್ತಿಹಿಡಿದರು.

ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮುಖ್ಯ ಇಂಜಿನಿಯರ್, ಕಾರ್ಯಾಪಾಲಕ ಇಂಜಿನಿಯರ್ ರಾಜ್ಯಪಾಲರ ಸಿಬ್ಬಂದಿ ಇದ್ದರು.

# ಪಡಿತರ ಇ-ಕೆವೈಸಿ: ನ.10ರವರೆಗೆ ದಿನಾಂಕ ವಿಸ್ತರಣೆ

**ಬೆಂಗಳೂರು, ಅ.18:** ಪಡಿತರ ಚೀಟಿ ಫಲಾನುಭವಿಗಳು ಇ-ಕೆವೈಸಿ ದೃಢೀಕರಣಕ್ಕೆ ನಿಗದಿಯಾಗಿದ್ದ ಅ.20ನ್ನು ವಿಸ್ತರಿಸಿದ್ದು, ಇದೀಗ ಕೆವೈಸಿ ದೃಢೀಕರಣಕ್ಕೆ ನ.10ರವರೆಗೆ ಅವಕಾಶ ನೀಡಲಾಗಿದೆ. ಆಹಾರ, ನಾಗರಿಕ ಪೂರೈಕೆ ಮತ್ತು ಗ್ರಾಹಕ ವ್ಯವಹಾರಗಳ ಇಲಾಖೆ ಒಂದು ವರ್ಷಕ್ಕೂ ಮೇಲ್ಪಟ್ಟು ಇ-ಕೆವೈಸಿ ಮಾಡಿಸಿದ 1,15,87,298 ಫಲಾನುಭವಿಗಳು ಮತ್ತೊಮ್ಮೆ ಇ-ಕೆವೈಸಿ ಮಾಡಬೇಕೆಂದು ಆದೇಶಿಸಿರುವ ಹಿನ್ನೆಲೆಯಲ್ಲಿ ಕೊನೆಯ ದಿನಾಂಕವನ್ನು ನವೆಂಬರ್ 10ರ ವರೆಗೆ ವಿಸ್ತರಿಸಲಾಗಿದೆ.

ರಾಜ್ಯದಲ್ಲಿ ಒಂದು ವರ್ಷದ ಹಿಂದೆ ಇ-ಕೆವೈಸಿ ಮಾಡಿಸಿದ ಫಲಾನುಭವಿಗಳ ಜೊತೆಗೆ, ಇದುವರೆಗೆ ಒಂದು ಬಾರಿಯೂ ಇ-ಕೆವೈಸಿ ಮಾಡಿಸದ, 82,362 ಹಾಗೂ ಐದು ವರ್ಷ ಮೇಲ್ಪಟ್ಟು ಇ-ಕೆವೈಸಿ ಮಾಡಿಸಿದ 54,27,396 ಫಲಾನುಭವಿಗಳು ಇನ್ನೂ ಇ-ಕೆವೈಸಿ ದೃಢೀಕರಿಸಬೇಕಿದೆ.




ಈ ಎಲ್ಲ ಫಲಾನುಭವಿಗಳು ಅನ್ನ ಸೇವೆ ಮೊಬೈಲ್ ಅಪ್ಲಿಕೇಶನ್ ಮೂಲಕ ಖುದ್ದಾಗಿ ಅಥವಾ ನ್ಯಾಯಬೆಲೆ ಅಂಗಡಿಗಳಲ್ಲಿ 'ಆಹಾರ' ತಂತ್ರಾಂಶದ ಮೂಲಕ ನವೆಂಬರ್ 10 ರೊಳಗೆ ಕಡ್ಡಾಯವಾಗಿ ಇ-ಕೆವೈಸಿ ಮಾಡಿಸಬೇಕು. ಇಲ್ಲವಾದಲ್ಲಿ ನಿಯಮಾನುಸಾರ ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂದು ಇಲಾಖೆ ತಿಳಿಸಿದೆ.

**ಅನ್ನಸೇವೆ ಆಪ್ ಈಗ ದೇಶಾದ್ಯಂತ ಲಭ್ಯ:** ಹೊರರಾಜ್ಯಗಳಿಗೆ ಕೆಲಸಕ್ಕೆಂದು ಹೋಗಿರುವ ರಾಜ್ಯದ ಪಡಿತರ ಚೀಟಿದಾರಿಗೆ ಅನುಕೂಲ ಕಲ್ಪಿಸಲು, ಅನ್ನಸೇವೆ ಆಪ್‌ನ ಲಭ್ಯತೆಯನ್ನು ಇಂದಿನಿಂದ ದೇಶಾದ್ಯಂತ ವಿಸ್ತರಿಸಲಾಗಿದೆ.

ಹೊರರಾಜ್ಯಗಳಲ್ಲಿರುವ ರಾಜ್ಯದ ಪಡಿತರ ಚೀಟಿದಾರರು ಅವರಿದ್ದಲ್ಲಿಂದಲೇ ಗೂಗಲ್ ಪ್ಲೇ ಸ್ಟೋರ್‌ನಿಂದ ಆಪ್ ಡೌನಲೋಡ್ ಮಾಡಿಕೊಂಡು ಇ-ಕೆವೈಸಿ ಪೂರ್ಣಗೊಳಿಸುವಂತೆ ಇಲಾಖೆ ಮನವಿ ಮಾಡಿದೆ.

# ದೆಹಲಿಯಲ್ಲಿ ಮಹಿಳಾ ಪತ್ರಕರ್ತರ ಮೇಲೆ ಹಲ್ಲೆ ಹಿರಿಯ ಪತ್ರಕರ್ತರ ವೇದಿಕೆಯಿಂದ ಖಂಡನಾ ನಿರ್ಣಯ

**ಬೆಂಗಳೂರು, ಅ.18:** ದೆಹಲಿಯ ವಿವಿಧ ಭಾಗಗಳಲ್ಲಿ, ವಿಶೇಷವಾಗಿ ಜಂತರ್ ಮಂತರ್ ಮತ್ತು ಕನ್ನಾಟ್ ಪ್ಲೇಸ್‌ನಲ್ಲಿ ನಡೆಯುತ್ತಿರುವ ಪ್ರತಿಭಟನಾ ರ್‍ಯಾಲಿಗಳು ಮತ್ತು ಮೆರವಣಿಗೆಗಳ ವರದಿಗಾರಿಕೆ ಮಾಡುತ್ತಿದ್ದ ಪತ್ರಕರ್ತರು ಹಾಗೂ ಮಾಧ್ಯಮ ಪ್ರತಿನಿಧಿಗಳ ಮೇಲೆ, ಮಹಿಳಾ ಪತ್ರಕರ್ತರನ್ನೂ ಒಳಗೊಂಡಂತೆ, ಭದ್ರತಾ ಪಡೆಗಳು ನಡೆಸಿದ ದೈಹಿಕ ಹಲ್ಲೆ ಮತ್ತು ಅತಿಯಾದ ಬಲಪ್ರಯೋಗವನ್ನು ಹಿರಿಯ ಪತ್ರಕರ್ತರ ವೇದಿಕೆ ಖಂಡಿಸಿದೆ.




ನಗರದ ಪ್ರೆಸ್‌ಕ್ಲಬ್‌ನಲ್ಲಿ ನಡೆದ ಹಿರಿಯ ಪತ್ರಕರ್ತರ ವೇದಿಕೆಯ ಸರ್ವ ಸದಸ್ಯರ ಸಭೆಯಲ್ಲಿ ಪಾಲ್ಗೊಂಡಿದ್ದ ಹಿರಿಯ ಪತ್ರಕರ್ತರು ಪೊಲೀಸ್ ದೌರ್ಜನ್ಯವನ್ನು ಪ್ರಸ್ತಾಪಿಸಿ ಖಂಡನಾ ನಿರ್ಣಯ ಅಂಗೀಕರಿಸಿದರು.

ಅನೇಕ ಪತ್ರಕರ್ತರು ತಮ್ಮ ಪತ್ರಿಕಾ ಗುರುತಿನ ಚೀಟಿಗಳನ್ನು ಸ್ಪಷ್ಟವಾಗಿ ಪ್ರದರ್ಶಿಸಿದ್ದರೂ, ತಮ್ಮ ಹಾಜರಾತಿ ಸಂಪೂರ್ಣವಾಗಿ ವೃತ್ತಿಪರ ಕರ್ತವ್ಯದ ಭಾಗವಾಗಿದೆ ಎಂದು ತಿಳಿಸಿದಾಗ್ಯೂ ಅವರನ್ನು ಬಲವಂತವಾಗಿ ವಶಕ್ಕೆ ಪಡೆಯಲಾಗಿದೆ. ವರದಿಗಾರಿಕೆಗೆ ಬಳಸುತ್ತಿದ್ದ ಅವರ ಮೊಬೈಲ್ ಫೋನ್‌ಗಳು ಮತ್ತು ಇತರ ಸಾಧನಗಳನ್ನೂ ವಶಪಡಿಸಿಕೊಳ್ಳಲಾಗಿದೆ ಟೀಕಿಸಿದರು.

ಹಿರಿಯ ಪತ್ರಕರ್ತರ ವೇದಿಕೆಯ ಅಧ್ಯಕ್ಷ ಪಿ.ಆರ್. ಸಾಂಬಸದಾಶಿವ ರೆಡ್ಡಿ ಮಾತನಾಡಿ, ಸಮವಸ್ತ್ರಧಾರಿ ಭದ್ರತಾ ಸಿಬ್ಬಂದಿಯ ಇಂತಹ ಸ್ಪಷ್ಟವಾಗಿ ಸಮರ್ಥಿಸಲಾಗದ ಕ್ರಮವು, ಅ.11ರ ಸುಪ್ರೀಂ ಕೋರ್ಟ್ ನೀಡಿದ ಆದೇಶವನ್ನು ಉಲ್ಲಂಘಿಸುತ್ತದೆ. ಸಾರ್ವಜನಿಕ ಪ್ರತಿಭಟನೆಗಳ ವರದಿಗಾರಿಕೆ ಮಾಡುವ ಸಂದರ್ಭದಲ್ಲಿ ಪತ್ರಕರ್ತರು ಮತ್ತು ಇತರ ವೃತ್ತಿಪರರ ಕರ್ತವ್ಯ ನಿರ್ವಹಣೆಗೆ ಯಾವುದೇ ರೀತಿಯ ಅಡ್ಡಿಪಡಿಸಬಾರದು ಎಂದು ನ್ಯಾಯಾಲಯ ಸ್ಪಷ್ಟ ನಿರ್ದೇಶನಗಳನ್ನು ನೀಡಿತ್ತು. ಈ ಕ್ರಮ ನ್ಯಾಯಾಲಯ ಆದೇಶದ ಉಲ್ಲಂಘನೆಯಾಗಿದೆ ಎಂದು ಹೇಳಿದರು.

ಇಷ್ಟೆಲ್ಲಾ ಆದರೂ ಅಕ್ಟೋಬರ್ 16ರಂದು ದೆಹಲಿಯಲ್ಲಿ ನಡೆದ ತಿರಂಗಾ ರ್‍ಯಾಲಿ ಸಂದರ್ಭದಲ್ಲಿ ಮಾಧ್ಯಮ ಪ್ರತಿನಿಧಿಗಳ ಮೇಲಿನ ಹಲ್ಲೆಗಳು ಮುಂದುವರಿದಿವೆ. ಪತ್ರಕರ್ತರನ್ನು ರಕ್ಷಿಸಿ, ಅವರು ತಮ್ಮ ಸಂವಿಧಾನಬದ್ಧ ಹಕ್ಕುಗಳನ್ನು ಚಲಾಯಿಸಲು ಅನುಕೂಲ ಮಾಡಿಕೊಡಬೇಕಾದ ರಾಜ್ಯ ಮತ್ತು ಅದರ ಸಂಸ್ಥೆಗಳು, ಅತಿಯಾದ ಹಿಂಸಾಚಾರಕ್ಕೆ ಮುಂದಾಗುತ್ತಿವೆ ಹಾಗೂ ಪತ್ರಕರ್ತರು ತಮ್ಮ ಮೂಲಭೂತ ಹಕ್ಕುಗಳನ್ನು ಚಲಾಯಿಸುವುದಕ್ಕೆ ಅಡ್ಡಿಪಡಿಸುತ್ತಿವೆ. ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯದ ಉಲ್ಲಂಘನೆಯಾಗುತ್ತಿದ್ದು, ಯಾವುದೇ ಕಾನೂನುಬದ್ಧ ವೃತ್ತಿ, ಉದ್ಯೋಗ, ವ್ಯಾಪಾರ ಅಥವಾ ವ್ಯವಹಾರವನ್ನು ಕೈಗೊಳ್ಳುವ ಸ್ವಾತಂತ್ರ್ಯವನ್ನು ಕಸಿದುಕೊಂಡಿದೆ ಎಂದು ಹೇಳಿದ್ದಾರೆ.

ವೇದಿಕೆಯ ಪ್ರಧಾನ ಕಾರ್ಯದರ್ಶಿ ಎಂ.ಎನ್. ರಾಜೇಂದ್ರ ಕುಮಾರ್, ಉಪಾಧ್ಯಕ್ಷರಾದ ಎಸ್.ಎಸ್. ರೆಡ್ಡಿ, ಜಂಟಿ ಕಾರ್ಯದರ್ಶಿ ವೆಂಕಟೇಶ್ ಪ್ರಸಾದ್, ಖಜಾಂಚಿ ಬಿ. ನಾರಾಯಣ, ಕಾರ್ಯಕಾರಿ ಸಮಿತಿ ಸದಸ್ಯರಾದ ಹ್ಯಾರಿ ಡಿಸೋಜ, ಮಾಧ್ಯಮ ಅಕಾಡೆಮಿ ಮಾಜಿ ಅಧ್ಯಕ್ಷ ಎಂ. ಸಿದ್ದರಾಜು, ಹಿರಿಯ ಪತ್ರಕರ್ತರಾದ ಗಂಗಾಧರ ಮೊದಲಿಯಾರ್, ನಾಗರಾಜು, ಶಾಂತಕುಮಾರಿ, ಶಶಿಕಲಾ, ನಂಜುಂಡಪ್ಪ.ವಿ ಮತ್ತಿತರರು ಮಾತನಾಡಿ, ಪತ್ರಕರ್ತರು ತಮ್ಮ ವೃತ್ತಿಪರ ಕರ್ತವ್ಯಗಳನ್ನು ಯಾವುದೇ ಅನಗತ್ಯ ಅಡೆತಡೆಯಿಲ್ಲದೆ ನಿರ್ವಹಿಸಲು ಅವಕಾಶ ಕಲ್ಪಿಸಬೇಕು. ಪತ್ರಕರ್ತರು ಸಾರ್ವಜನಿಕ ಪ್ರತಿಭಟನೆಗಳು ಮತ್ತು ಮೆರವಣಿಗೆಗಳನ್ನು ವರದಿ ಮಾಡುವಾಗ ಅವರ ವೃತ್ತಿಪರ ಕರ್ತವ್ಯಗಳಿಗೆ ಯಾವುದೇ ಅಡ್ಡಿಯಾಗದಂತೆ ಸರ್ಕಾರ ಮತ್ತು ಪೊಲೀಸ್ ಇಲಾಖೆ ಖಚಿತಪಡಿಸಬೇಕು. ಪತ್ರಕರ್ತರ ಮೇಲಿನ ಹಿಂಸಾಚಾರದ ಘಟನೆಗಳನ್ನು ಸುಪ್ರೀಂ ಕೋರ್ಟ್ ಸ್ವಯಂಪ್ರೇರಿತವಾಗಿ ಪರಿಗಣಿಸಿ, ಸೂಕ್ತ ಕ್ರಮ ಕೈಗೊಳ್ಳಬೇಕು. ತಪ್ಪಿತಸ್ಥ ಭದ್ರತಾ ಸಿಬ್ಬಂದಿಯ ವಿರುದ್ಧ ಕಾನೂನುಬದ್ಧ ಕ್ರಮ ಜರುಗಿಸಬೇಕು. ಪತ್ರಕರ್ತರು ಸಾರ್ವಜನಿಕ ಪ್ರತಿಭಟನೆಗಳು ಮತ್ತು ಮೆರವಣಿಗೆಗಳನ್ನು ವರದಿ ಮಾಡುವಾಗ ಅವರ ವೃತ್ತಿಪರ ಕರ್ತವ್ಯಗಳಿಗೆ ಯಾವುದೇ ಅಡ್ಡಿಯಾಗದಂತೆ ಸರ್ಕಾರ ಮತ್ತು ಪೊಲೀಸ್ ಇಲಾಖೆ ಖಚಿತಪಡಿಸಬೇಕು ಎಂದು ಆಗ್ರಹಿಸಿದರು.

### ಅ.23ರಂದು ಎಸ್‌ಐಆರ್ ವಿರುದ್ಧ ಜನತೆ

# ಪ್ರಜಾಪ್ರಭುತ್ವ ಮರಳಿ ಪಡೆಯಲು ದೆಹಲಿಯಲ್ಲಿ ಜನತಾ ಮೆರವಣಿಗೆ

**ಬೆಂಗಳೂರು, ಅ.18:** ಪ್ರಧಾನಿ ನರೇಂದ್ರ ಮೋದಿ ಮತ್ತು ಗೃಹ ಸಚಿವ ಅಮಿತ್ ಶಾ ಅವರು ಭಾರತದ ಚುನಾವಣಾ ಆಯೋಗವನ್ನು ದುರುಪಯೋಗಪಡಿಸಿಕೊಂಡು, ಎಸ್‌ಐಆರ್ ಮೂಲಕ 13.41 ಕೋಟಿ ನಾಗರಿಕರ ಮತದಾನದ ಹಕ್ಕುಗಳನ್ನು ಕಸಿದುಕೊಂಡಿರುವುದನ್ನು ವಿರೋಧಿಸಿ ಅ. 23ರಂದು ದೆಹಲಿಯಲ್ಲಿ ತಿರಂಗಾ ಧ್ವಜ ಹಿಡಿದು ಜನತಾ ಮೆರವಣಿಗೆ ನಡೆಯಲಿದೆ ಎಂದು ಎಸ್‌ಐಆರ್ ವಿರುದ್ಧ ಜನತೆ ಸಂಘಟನೆ ಕರೆ ನೀಡಿದೆ.

ತ್ರಿವರ್ಣ ಧ್ವಜವನ್ನು ಕೈಯಲ್ಲಿ ಹಿಡಿದು ಜಿಲ್ಲೆ ಮತ್ತು ತಾಲ್ಲೂಕು ಕೇಂದ್ರಗಳಲ್ಲಿ, ರಾಜ್ಯಗಳ ರಾಜಧಾನಿಗಳಲ್ಲಿ ಹಾಗೂ ರಾಷ್ಟ್ರ ರಾಜಧಾನಿಯಲ್ಲಿ ಮೆರವಣಿಗೆ ನಡೆಸುವ ಮೂಲಕ ಮೋದಿ-ಶಾ ಆಡಳಿತದ ಸರ್ವಾಧಿಕಾರಿ ಧೋರಣೆಯ ವಿರುದ್ಧ ಜನರ ಐಕ್ಯತೆಯನ್ನು ಪ್ರದರ್ಶಿಸಬೇಕು ಎಂದು ಹೇಳಿದೆ.

1960ರ ಮತದಾರರ ನೋಂದಣಿ ನಿಯಮಗಳ ಅಡಿಯಲ್ಲಿ, ನಮೂನೆ-6 ಸೇರಿದಂತೆ ಶಾಸನಬದ್ಧ ನಮೂನೆಗಳನ್ನು ಬದಲಾಯಿಸುವುದಾದರೆ ಅದನ್ನು ಸಂಸತ್ತಿನ ಮುಂದೆ ಮಂಡಿಸಬೇಕು. ಆದರೆ, ಹಾಗೆ ಮಾಡದೆ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಅವರು ಬಿಜೆಪಿ ಯನ್ನು ಅಧಿಕಾರದಲ್ಲಿ ಉಳಿಸುವ ಉದ್ದೇಶ




ದಿಂದ ನೈಜ ನಾಗರಿಕರನ್ನು ಮತದಾರರ ಪಟ್ಟಿಯಿಂದ ತೆಗೆದುಹಾಕಲು ಅನುಕೂಲವಾಗುವಂತೆ ನಮೂನೆಗಳನ್ನು ಬದಲಾಯಿಸಿದ್ದಾರೆ. ಇದು ಸಂವಿಧಾನದ ಉಲ್ಲಂಘನೆ ಯಾಗಿದೆ.

ನಮೂನೆ-6 ಅನ್ನು ಬದಲಾಯಿಸಲು ಚುನಾವಣಾ ಆಯೋಗಕ್ಕೆ ಅನುಮತಿ ನೀಡಿಲ್ಲ ಎಂದು ಸುಪ್ರೀಂಕೋರ್ಟ್ ಒಪ್ಪಿಕೊಂಡಿದೆ.

ಅಲ್ಲದೆ, ಅಂತಹ ಬದಲಾವಣೆಯನ್ನು ಮಾಡುವ ಅಧಿಕಾರ ಸುಪ್ರೀಂಕೋರ್ಟ್ ಗೂ ಇಲ್ಲ. ಜ್ಞಾನೇಶ್ ಕುಮಾರ್ ಅವರು ಸಂವಿಧಾನದ ಹೆಸರಿನಲ್ಲಿ ಸ್ವೀಕರಿಸಿದ ಪ್ರಮಾಣ ವಚನವನ್ನು ಉಲ್ಲಂಘಿಸಿದ್ದಾರೆ ಮತ್ತು ಅವರ ವಿರುದ್ಧ ಕಾನೂನು ಕ್ರಮ ಜರುಗಿಸಬೇಕು.

ಆದರೆ, ಪ್ರಧಾನಿ ಅವರು ತಪ್ಪಿತಸ್ಥರನ್ನು ರಕ್ಷಿಸುತ್ತಿದ್ದಾರೆ ಎಂದು ಹೇಳಿದೆ.

ಜ್ಞಾನೇಶ್ ಕುಮಾರ್ ವಿರುದ್ಧ ಕಾನೂನು ಕ್ರಮ ಜರುಗಿಸುವವರೆಗೆ, ಅಕ್ರಮ ಎಸ್‌ಐಆರ್ ರದ್ದುಗೊಳ್ಳುವವರೆಗೆ, ಭಾರತದ ಪ್ರತಿಯೊಬ್ಬ ಅರ್ಹ ನಾಗರಿಕನ ಮತದಾನದ ಹಕ್ಕು ಮರುಸ್ಥಾಪನೆಯಾಗುವವರೆಗೆ ಮತ್ತು ಚುನಾವಣಾ ಆಯುಕ್ತರ ಕಾಯ್ದೆ-2023ಕ್ಕೆ ತಿದ್ದುಪಡಿ ತರುವವರೆಗೆ ಈ ಹೋರಾಟ ಮುಂದುವರಿಯಲಿದೆ.

ಪ್ರಜಾಸತ್ತಾತ್ಮಕ ಹಕ್ಕುಗಳನ್ನು ರಕ್ಷಿಸುವ ಈ ಶಾಂತಿಯುತ ಸಮಾವೇಶದಲ್ಲಿ ಎಲ್ಲ ಜನಸಮೂಹಗಳ ಮತ್ತು ವರ್ಗಗಳ ಸಂಘಟನೆಗಳು ಹಾಗೂ ನಾಗರಿಕ ಸಮಾಜದ ವೇದಿಕೆಗಳು ಸಕ್ರಿಯವಾಗಿ ಜನರನ್ನು ಸಂಘಟಿಸಿ ಭಾಗವಹಿಸಲಿವೆ.

ರೈತರು, ಕಾರ್ಮಿಕರು, ದಿನಗೂಲಿ ನೌಕರರು, ವ್ಯಾಪಾರಿಗಳು, ಉದ್ಯಮಿಗಳು, ಪತ್ರಕರ್ತರು, ವಕೀಲರು, ಶಿಕ್ಷಕರು, ನೌಕರರು, ಕಲಾವಿದರು, ಬುದ್ಧಿಜೀವಿಗಳು, ಮಹಿಳೆಯರು, ಯುವಜನರು, ವಿದ್ಯಾರ್ಥಿಗಳು, ಆದಿವಾಸಿಗಳು, ದಲಿತರು, ಅಲ್ಪಸಂಖ್ಯಾತರು ಸೇರಿದಂತೆ ಎಲ್ಲ ವರ್ಗಗಳ ಜನರು ನಮ್ಮ ಪ್ರಜಾಪ್ರಭುತ್ವವನ್ನು ಮರಳಿ ಪಡೆಯುವ ಹೋರಾಟದಲ್ಲಿ ಪಾಲ್ಗೊಳ್ಳಬೇಕೆಂದು ಪೀಪಲ್ ಅಗೇನ್ಸ್ಟ್ ಎಸ್‌ಐಆರ್ ಕರೆ ನೀಡಿದೆ. ನಮ್ಮ ಪ್ರಜಾಪ್ರಭುತ್ವವನ್ನು ಮರಳಿ ಪಡೆಯುವವರೆಗೆ ಈ ಹೋರಾಟವನ್ನು ನಿಲ್ಲಿಸುವುದಿಲ್ಲ ಎಂದು ನಾವೆಲ್ಲರೂ ಒಟ್ಟಾಗಿ ಘೋಷಿಸಲಿದ್ದೇವೆ ಎಂದು ಹೇಳಿದೆ.

# ಅಕ್ರಮ ದಾಸ್ತಾನು ಮಾಡಿದ್ದ 528 ಅಡುಗೆ ಅನಿಲ ಸಿಲಿಂಡರ್‌ಗಳ ಜಪ್ತಿ

**ಬೆಂಗಳೂರು, ಅ.18:** ಕಳೆದ ಹತ್ತು ತಿಂಗಳಿಂದ ಹೊಸ ಗ್ಯಾಸ್ ಸಿಲಿಂಡರ್ ಸಂಪರ್ಕ ಸಿಗದ ಜನಸಾಮಾನ್ಯರು ಪರದಾಡುತ್ತಿರುವ ಬೆನ್ನಲ್ಲೇ ಬಾಗಲಗುಂಟೆ ವ್ಯಾಪ್ತಿಯ ಟಿ.ದಾಸರಹಳ್ಳಿಯಲ್ಲಿ ಅಕ್ರಮವಾಗಿ ದಾಸ್ತಾನು ಮಾಡಲಾಗಿದ್ದ 528 ಸಿಲಿಂಡರ್‌ಗಳನ್ನು ಆಹಾರ ಇಲಾಖೆ ಅಧಿಕಾರಿಗಳು ಜಪ್ತಿ ಮಾಡಿದ್ದಾರೆ.

ಭೈರವೇಶ್ವರ ಎಂಟರ್‌ಪ್ರೈಸಸ್ ಮಳಿಗೆಯಲ್ಲಿ ಯಾವುದೇ ಪರವಾನಗಿ ಇಲ್ಲದೇ 192 ಇಂಡೋ ಗ್ಯಾಸ್ ಸಿಲಿಂಡರ್, 164 ಪವರ್ ಗ್ಯಾಸ್ ಸಿಲಿಂಡರ್, 16 ಎಚ್.ಪಿ., 111 ಇತರೆ ಖಾಸಗಿ ಕಂಪನಿಗೆ ಸೇರಿದ ಗ್ಯಾಸ್ ಸಿಲಿಂಡರ್‌ಗಳನ್ನು ಪತ್ತೆಯಾಗಿವೆ. ಬೆಂಗಳೂರು ಉತ್ತರ ತಾಲೂಕು, ಆಹಾರ ನಾಗರಿಕ ಸರಬರಾಜು ಮತ್ತುಗ್ರಾಹಕರ ವ್ಯವಹಾರಗಳ ಇಲಾಖೆ ಆಹಾರ ನಿರೀಕ್ಷಕ ಸಿ.ಪ್ರಸನ್ನಕುಮಾರ್ ನೀಡಿದ ದೂರಿನ ಮೇರೆಗೆ ಬಾಗಲಗುಂಟೆ ಪೊಲೀಸ್ ಠಾಣೆಯಲ್ಲಿ ಪ್ರಶಾಂತ್ ಎಂಬುವರ ವಿರುದ್ಧ ಪ್ರಕರಣ ದಾಖಲಾಗಿದೆ.

ಜನನಿಬಿಡ ಪ್ರದೇಶದಲ್ಲಿ ಸಾರ್ವಜನಿಕರ ಜೀವ ಮತ್ತು ಆಸ್ತಿಗೆ ಅಪಾಯವಾಗುವ ರೀತಿಯಲ್ಲಿ ಅಪಾರ ಪ್ರಮಾಣದ ವಾಣಿಜ್ಯ ಹಾಗೂ ಖಾಸಗಿ ಕಂಪನಿ ಅಡುಗೆ ಸಿಲಿಂಡರ್‌ಗಳನ್ನು ದಾಸ್ತಾನು ಮಾಡಲಾಗಿದೆ. ಅ.15ರಂದು ರಾತ್ರಿ ದಾಳಿ ಮಾಡಿದ ಆಹಾರ ಇಲಾಖೆ ಅಧಿಕಾರಿಗಳು ಅಕ್ರಮ ಸಿಲಿಂಡರ್‌ಗಳನ್ನು ವಶಕ್ಕೆ ಪಡೆದಿದ್ದಾರೆ.



ಇಷ್ಟೊಂದು ಪ್ರಮಾಣದ ಸ್ಫೋಟಕ ಅನಿಲ ದಾಸ್ತಾನು ಮಾಡಲು ಪೆಟ್ರೋಲಿಯಂ ಮತ್ತು ಸುರಕ್ಷತಾ ಸಂಸ್ಥೆ(ಪಿಇಎಸ್‌ಓ), ಅಗ್ನಿಶಾಮಕದಳ ಅಥವಾ ಸಂಬಂಧ ಪಟ್ಟ ತೈಲ ಕಂಪನಿಗಳಿಗೆ ಪಡೆದ ಅಧಿಕೃತ ಡೀಲರ್‌ಶಿಪ್ ದಾಖಲೆಗಳು ಇಲ್ಲದಿರುವುದು ಅಧಿಕಾರಿಗಳಿಗೆ ಕಂಡು ಬಂದಿವೆ ಎಂದು ದೂರಿನಲ್ಲಿ ಉಲ್ಲೇಖಿಸಿದ್ದಾರೆ. ವಶಕ್ಕೆ ಪಡೆದ ಅಕ್ರಮ ಸಿಲಿಂಡರ್‌ಗಳನ್ನು ಅಧಿಕೃತ ಏಜೆನ್ಸಿ ಯಾಗಿರುವ ಕಮಲಾ ಎಚ್‌ಪಿ ಗ್ಯಾಸ್ ಕಂಪನಿ ಗೋದಾಮಿಗೆ ಅವುಗಳನ್ನು ಸ್ಥಳಾಂತರಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

## 1000 ಗ್ರಾಮೀಣ ಬಸ್ ತಂಗುದಾಣ ನಿರ್ಮಾಣ: ಪ್ರಸ್ತಾವನೆ ಸಲ್ಲಿಸಲು ಈಶ್ವರ ಖಂಡ್ರೆ ಸೂಚನೆ



ಬೆಂಗಳೂರು, ಅ.18: ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ 1000 ಗ್ರಾಮೀಣ ಬಸ್ ತಂಗುದಾಣಗಳ ನಿರ್ಮಾಣಕ್ಕೆ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ವಿಬಿ ಜಿ ರಾಮ್ ಜಿ ಅಡಿ ಯೋಜನೆ ರೂಪಿಸುವಂತೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಈಶ್ವರ ಖಂಡ್ರೆ ಸೂಚನೆ ನೀಡಿದ್ದಾರೆ.

ತತ್ಸಬಂಧ ಇಲಾಖೆಯ ಕಾರ್ಯ ದರ್ಶಿಯವರಿಗೆ ಹಾಗೂ ವಿಬಿಜಿ ರಾಮ್ ಜಿ ಆಯುಕ್ತರಿಗೆ ಸೂಚನೆ ನೀಡಿರುವ ಅವರು, ಹೆಚ್ಚಿನ ಸಂಖ್ಯೆಯಲ್ಲಿ ಪ್ರಯಾಣಿಕರ ಆಗಮನ, ನಿರ್ಗಮನ ಇರುವ 1000 ಹಳ್ಳಿಗಳ ಬಸ್ ತಂಗುದಾಣಗಳನ್ನು ಗುರುತಿಸಿ, ಗ್ರಾಮೀಣ ಸೊಗಡಿನ ಹಾಗೂ ಸ್ಥಳೀಯ ಹಿರಿಮೆ ಬಿಂಬಿಸುವಂತಹ ವಿನ್ಯಾಸ ರೂಪಿಸಿ, ಅದಕ್ಕೆ ಆಗುವ ಸಾಮಗ್ರಿ ವೆಚ್ಚ ಮತ್ತು ವಿಬಿಜಿ ರಾಮ್ ಜಿ ಕೂಲಿಯ ವೆಚ್ಚವನ್ನು ಅಂದಾಜು ಮಾಡಿ 15 ದಿನಗಳ ಒಳಗಾಗಿ ಪ್ರಸ್ತಾವನೆಯನ್ನು ಕಡತದಲ್ಲಿ ಸಲ್ಲಿಸಲು ಸೂಚಿಸಿದ್ದಾರೆ.

ರಾಜ್ಯದ 5927 ಗ್ರಾಮ ಪಂಚಾಯತಿಗಳ ವ್ಯಾಪ್ತಿಯಲ್ಲಿರುವ ಹಲವು ಗ್ರಾಮಗಳಿಗೆ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ಬಸ್ ಸೌಲಭ್ಯವಿದ್ದರೂ, ಬಸ್ ನಿಲುಗಡೆಯ ಜಾಗದಲ್ಲಿ ತಂಗುದಾಣಗಳು ಇಲ್ಲದ ಕಾರಣ ಸಾರ್ವಜನಿಕರು, ಬಿಸಿಲು, ಮಳೆಯಲ್ಲಿ ನಿಲ್ಲುವಂತಾಗಿದೆ ಹಾಗೂ ಮತ್ತೆ ಕೆಲವು ಬಸ್ ತಂಗುದಾಣಗಳು ಶಿಥಿಲಾವಸ್ಥೆಯಲ್ಲಿದ್ದು ಬೀಳುವ ಹಂತದಲ್ಲಿದೆ ಎಂಬ ಮಾಹಿತಿ ಹಿನ್ನೆಲೆಯಲ್ಲಿ ಈಶ್ವರ ಖಂಡ್ರೆ ಈ ಸೂಚನೆ ನೀಡಿದ್ದಾರೆ.



ಆಯುಧ ಪೂಜೆ ಸಮೀಪಿಸುತ್ತಿರುವ ಹಿನ್ನೆಲೆಯಲ್ಲಿ, ಭಾನುವಾರ ಬೆಂಗಳೂರಿನ ಕೆ.ಆರ್. ಮಾರುಕಟ್ಟೆಯಲ್ಲಿ ಹೂವಿನ ವ್ಯಾಪಾರದಲ್ಲಿ ಭರಾಟೆ ಕಂಡುಬಂತು.

### ಲಂಚದಿಂದಲೇ 8 ಕೋಟಿ ಆಸ್ತಿ ಮಾಡಿದ ಕನ್ನಾಳೆ

## ಇ.ಡಿ. ತನಿಖೆ ವೇಳೆ ಇನ್ನಷ್ಟು ಅಕ್ರಮಗಳ ಸುಳಿವು ಪತ್ತೆ

**ಬೀದರ, ಅ. 18:** ಕರ್ನಾಟಕ ಲೋಕಸೇವಾ ಆಯೋಗ (ಕೆಪಿಎಸ್‌ಸಿ)ದ ಹಗರಣ ಬಗೆದಷ್ಟೂ ಹೊರಬರುತ್ತಿದೆ. ಮಧ್ಯವರ್ತಿ ಬಸವರಾಜ್ ಕನ್ನಾಳೆ ಅಭ್ಯರ್ಥಿಗಳಿಂದ ಪಡೆದ ಲಂಚದ ಹಣದಿಂದ 8 ಕೋಟಿ ರೂ.ಗೂ ಹೆಚ್ಚಿನ ಮೌಲ್ಯದ ಆಸ್ತಿ ಖರೀದಿಸಿರುವುದು ಜಾರಿ ನಿರ್ದೇಶನಾಲಯ (ಇಡಿ) ತನಿಖೆ ವೇಳೆ ಬೆಳಕಿಗೆ ಬಂದಿರುವುದಾಗಿ ತಿಳಿದು ಬಂದಿದೆ.

ಪಶುವೈದ್ಯಾಧಿಕಾರಿ 400 ಹುದ್ದೆಗಳ ನೇಮಕಾತಿ ಅಕ್ರಮ ಪ್ರಕರಣದಲ್ಲಿ ಆಯೋಗದ ಮಾಜಿ ಅಧ್ಯಕ್ಷ ಶಿವಶಂಕರಪ್ಪ ಸಾಹುಕಾರ್, ಐಎಎಸ್ ಅಧಿಕಾರಿ ಜ್ಞಾನೇಂದ್ರ ಕುಮಾರ್ ಗಂಗ್ವಾರ್, ಸದಸ್ಯೆ ಬಿ.ವಿ.ಗೀತಾ ಹಾಗೂ ಮಧ್ಯವರ್ತಿ ಬಸವರಾಜ್ ಕನ್ನಾಳೆ ವ್ಯವಹಾರ ಜಾಲಾಡುತ್ತಿರುವ ಇ.ಡಿ ಅಧಿಕಾರಿಗಳು 2021ರಿಂದ ನಾಲ್ವರು ಆರೋಪಿಗಳ ಬ್ಯಾಂಕ್ ಖಾತೆ, ಹಣಕಾಸು ವ್ಯವಹಾರ, ಮೂರನೇ ವ್ಯಕ್ತಿಯಿಂದ ಲಕ್ಷ ಲಕ್ಷ ಹಣ ಪಡೆದಿರುವುದು ಹಾಗೂ ಅದೇ ಲಂಚದ ಹಣದಿಂದ ಚಿನ್ನಾಭರಣ ಖರೀದಿ ಸೇರಿ ವಿವಿಧ ಆಯಾಮದಲ್ಲಿ ತನಿಖೆ ಕೈಗೊಂಡಿದ್ದಾರೆ. ಮಧ್ಯವರ್ತಿ ಕನ್ನಾಳೆ ಕೋಟ್ಯಂತರ ರೂಪಾಯಿ ಮೌಲ್ಯದ ಆಸ್ತಿ ಸಂಪಾದನೆ ಮಾಡಿರುವುದನ್ನು ಪತ್ತೆ ಮಾಡಿದ್ದಾರೆ ಎನ್ನಲಾಗಿದೆ.



**ನೇರ ನಗದು ವ್ಯವಹಾರ:** ಅಭ್ಯರ್ಥಿಗಳು ಮತ್ತು ಕೆಲ ಪಾಲಕರಿಂದ ಬಂದ ವ್ಯವಹಾರದ ಹಣದಿಂದ ಕನ್ನಾಳೆ ನೇರವಾಗಿ ಕೃಷಿ ಜಮೀನು, ಆಸ್ತಿ ಖರೀದಿ ಮಾಡುತ್ತಿದ್ದ. ಬ್ಯಾಂಕ್ ಅಥವಾ ಚೆಕ್ ಮೂಲಕ ಹಣ ವರ್ಗಾವಣೆ ಮಾಡಿದರೆ ಮುಂದೆ ತಾನು ಸಿಕ್ಕಿ ಹಾಕಿಕೊಳ್ಳುತ್ತೇನೆಂದು ತಿಳಿದಿದ್ದ ಕನ್ನಾಳೆ ಬಂದ ಹಣದಿಂದ ಆಸ್ತಿ ಮಾಲೀಕರಿಗೆ ನೇರವಾಗಿ ನಗದು ನೀಡುತ್ತಿದ್ದ. ಫಾರ್ಮ್‌ಹೌಸ್ ನಿರ್ಮಾಣಕ್ಕೆ ಬೇಕಾದ ಅಗತ್ಯ ಸಲಕರಣೆ ಖರೀದಿಗೆ ನಗದು ನೀಡಿರುವುದು ತನಿಖೆ ವೇಳೆ ಬಯಲಾಗಿದೆ. ಆರೋಪಿ ಕನ್ನಾಳೆ ಕಡಿಮೆ ಅವಧಿಯಲ್ಲಿ ಬೆಂಗಳೂರಿನ ಸಂಜಯನಗರ ಸೇರಿ ವಿವಿಧ ಕಡೆ ಮನೆ ಖರೀದಿ, ತಮ್ಮ ತಂದೆಯ ಹೆಸರಿನಲ್ಲಿ ಬೀದರ್ ಜಿಲ್ಲೆ ಭಾಲ್ಕಿಯಲ್ಲಿ ಜಮೀನು ಹೊಂದಿದ್ದ. ಅಭ್ಯರ್ಥಿಗಳಿಗೆ ಸರ್ಕಾರಿ ಹುದ್ದೆ ಕೊಡಿಸುವುದಾಗಿ ಅವರಿಂದ ಪಡೆದ ಹಣದಲ್ಲಿ ಶೇ.40 ಹಣ ಐಎಎಸ್ ಅಧಿಕಾರಿ ಜ್ಞಾನೇಂದ್ರ ಕುಮಾರ್?ಗೆ ತಲುಪುವಂತೆ ಮಾಡುತ್ತಿದ್ದ. ಉಳಿದ ಶೇ.60 ಲಾಭದ ಹಣ ಕನ್ನಾಳೆ ಪಾಲಾಗುತ್ತಿತ್ತು ಎನ್ನಲಾಗಿದೆ.

**ಬ್ಯಾಂಕ್ ದಾಖಲೆ ಸಂಗ್ರಹ:** ಆಯೋಗದ ಪ್ರಮುಖ ಜವಾಬ್ದಾರಿ ಹೊತ್ತಿದ್ದ ಐಎಎಸ್ ಅಧಿಕಾರಿ ಜ್ಞಾನೇಂದ್ರ, ಮಾಜಿ ಅಧ್ಯಕ್ಷ ಶಿವಶಂಕರಪ್ಪ ಸಾಹುಕಾರ್ ಅಣತಿಯಂತೆ ಮಧ್ಯವರ್ತಿಗಳು, ಕೆಲ ಸದಸ್ಯರು ಕೋಟ್ಯಂತರ ರೂ. ಅಕ್ರಮ ಎಸಗಿದ್ದಾರೆ. ಅವುಗಳಿಗೆ ಸಂಬಂಧಿಸಿದ ತಾಂತ್ರಿಕ ಹಾಗೂ ಕೆಲ ಮಹತ್ವದ ದಾಖಲೆಗಳನ್ನು ಅಧಿಕಾರಿಗಳು ವಿವಿಧ ಬ್ಯಾಂಕ್‌ಗಳಿಂದ ಪಡೆದಿದ್ದಾರೆ ಎಂದು ಮೂಲಗಳು ತಿಳಿಸಿವೆ.

**ಅಕ್ರಮಕ್ಕೆ ಪಂಚತಾರಾ ನಂಟು:** ಪಶುವೈದ್ಯಾಧಿಕಾರಿಗಳ ಪರೀಕ್ಷೆಗಾಗಿ ಅಭ್ಯರ್ಥಿಗಳಿಗೆ ಕೇರಳ, ಕರ್ನಾಟಕ ಗಡಿಯಲ್ಲಿರುವ ರೆಸಾರ್ಟ್, ಬೆಂಗಳೂರಿನ ಫೈವ್‌ಸ್ಟಾರ್ ಹೋಟೆಲ್‌ನಲ್ಲಿ ತರಬೇತಿ ನೀಡಿದ್ದರು ಎನ್ನಲಾಗಿದೆ. ಪರೀಕ್ಷೆಗೂ ಮುನ್ನವೇ ಚೀಟಿಯೊಂದರಲ್ಲಿ ಕೆಲವು ಉತ್ತರಗಳನ್ನು ಬರೆದು ಕೊಡಲಾಗಿತ್ತು. ಮಾನಸಿಕ ಸಾಮರ್ಥ್ಯ, ಹೊಂದಿಸಿ ಬರೆಯುವುದು, ಸಂಖ್ಯಾಶಾಸ್ತ್ರ ವಿಷಯದ ಉತ್ತರಗಳು ಸೇರಿ ಯಾವ ಪ್ರಶ್ನೆಗೆ ಯಾವ ಉತ್ತರ ಎಂಬ ಗೊಂದಲ ಅಭ್ಯರ್ಥಿಗಳಲ್ಲಿ ಉಂಟಾಗು ತ್ತಿತ್ತು.

ಇದರಿಂದ ಪ್ರಶ್ನೆಪತ್ರಿಕೆ ಮತ್ತು ಓಎಂಆರ್ ಶೀಟ್ ನೀಡಿ ಸ್ಟಾರ್ ಹೋಟೆಲ್‌ನಲ್ಲಿ ಪರೀಕ್ಷೆ ಬರೆಸಿದ್ದಾರೆ. ನಂತರ ಆ ಒಎಂಆರ್ ಶೀಟ್‌ಗಳನ್ನು ಮೌಲ್ಯಮಾಪನ ಮಾಡುವ ಪಟ್ಟಿಯಲ್ಲಿ ಸೇರಿಸಲಾಗುತ್ತಿತ್ತು ಎಂಬ ಮಾಹಿತಿಯನ್ನು ಇ.ಡಿ ಸಂಗ್ರಹಿಸಿದೆ. ಇಂಗ್ಲಿಷ್‌ನಲ್ಲಿ ಹೆಸರು, ವಿಳಾಸ ಬರೆಯಲು ಬಾರದ ಅಭ್ಯರ್ಥಿಯೊಬ್ಬನಿಗೆ ಹಣದ ಆಸೆಗೆ ಆಯ್ಕೆ ಪಟ್ಟಿಯಲ್ಲಿ ಹೆಸರು ಬರುವಂತೆ ಮಾಡಿದ್ದರು ಎನ್ನಲಾಗಿದೆ.

### ಎಚ್‌ಡಿಕೆ ವಿರುದ್ಧ ಸಚಿವ ಪ್ರಿಯಂಕ್ ಖರ್ಗೆ ವಾಗ್ದಾಳಿ

## ದಾಖಲೆಗಳಿದ್ದರೆ ಗಾಳಿಯಲ್ಲಿ ಗುಂಡು ಹಾರಿಸದೆ ತನಿಖಾ ಸಂಸ್ಥೆಗಳಿಗೆ ನೀಡಲಿ

**ಕಲಬುರಗಿ, ಅ. 18:** ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಅವರು ಕೇವಲ ಗಾಳಿಯಲ್ಲಿ ಗುಂಡು ಹಾರಿಸುವ ರಾಜಕಾರಣ ಮಾಡುವುದನ್ನು ಬಿಟ್ಟು, ತಮ್ಮ ಬಳಿ ಇರುವ ಎಲ್ಲ ದಾಖಲೆಗಳು ಮತ್ತು ನಿರ್ದಿಷ್ಟ ಮಾಹಿತಿಗಳನ್ನೂ ತನಿಖಾ ಸಂಸ್ಥೆಗಳಿಗೆ ಸಲ್ಲಿಸಲಿ ಎಂದು ರಾಜ್ಯ ಗೃಹ ಹಾಗೂ ಐಟಿ–ಬಿಟಿ ಸಚಿವ ಪ್ರಿಯಾಂಕ್ ಖರ್ಗೆ ಸವಾಲು ಹಾಕಿದರು.



ನಗರದಲ್ಲಿನ ತಮ್ಮ ನಿವಾಸದಲ್ಲಿ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದ ಅವರು, ತನಿಖೆ ನಡೆಯುತ್ತಿರುವಾಗಲೇ ಅದರ ಪ್ರಕ್ರಿಯೆ ಮತ್ತು ಕ್ರಮಗಳ ಬಗ್ಗೆ ಹೊರಗಿನಿಂದಲೇ ಕಲ್ಪಿತ ನಿರ್ಧಾರಗಳಿಗೆ ಬರುವುದು ಸರಿಯಲ್ಲ. ಒಂದು ವೇಳೆ ನಮ್ಮ ತನಿಖಾ ಸಂಸ್ಥೆಗಳ ಮೇಲೆ ನಂಬಿಕೆ ಇಲ್ಲದಿದ್ದರೆ, ಅವರು ನೇರವಾಗಿ ನ್ಯಾಯಾಲಯದ ಮುಂದೆ ದಾಖಲೆಗಳನ್ನು ಸಲ್ಲಿಸಿ ಸತ್ಯಾಂಶವನ್ನು ಸಾಬೀತುಪಡಿಸಲಿ ಎಂದು ಎಂದರು.

ರಾಜಕೀಯದಲ್ಲಿ ಘನತೆ ಯಾರಿಂದ ಕಡಿಮೆಯಾಗುತ್ತಿದೆ ಎಂಬುದನ್ನು ನಾಡಿನ ಜನರೇ ನಿರ್ಧರಿಸಲಿದ್ದಾರೆ. ದಲಿತ ಸಮುದಾಯದ ಕುರಿತು ವ್ಯಂಗ್ಯವಾಗಿ ಮಾತನಾಡುವುದರಿಂದ ತಮ್ಮ ಮೇಲೆ ಯಾವುದೇ ಪರಿಣಾಮ ಬೀರುವುದಿಲ್ಲ. ಆದರೆ, ಇಂತಹ ಹೇಳಿಕೆಗಳು ಮಾತನಾಡುವವರ ಭಾಷೆ, ಸಂಸ್ಕೃತಿ ಮತ್ತು ಅವರ ಮನೋಭಾವ ತೋರಿಸುತ್ತವೆ ಎಂದು ಟೀಕಿಸಿದರು.

ನಾವು ಯಾರೊಂದಿಗೂ ರಾಜಕೀಯ ಹೊಂದಾಣಿಕೆ ಮಾಡಿಕೊಳ್ಳುವುದಿಲ್ಲ. ಆರ್‌ಎಸ್‌ಎಸ್ ಕುರಿತು ಹಿಂದೆ ತೀಕ್ಷ್ಣವಾಗಿ ಬರೆದವರು, ಇಂದು ಅದೇ ಆರ್‌ಎಸ್‌ಎಸ್ ಚಡ್ಡಿ ಹಾಕಿಕೊಂಡು ಆತ್ಮವಂಚನೆಯಿಂದ ತಿರುಗಾಡುತ್ತಿದ್ದಾರೆ. ಸ್ವಂತ ಕುಟುಂಬಕ್ಕೇ ನಿಜ ಹೇಳದವರು, ಸಾರ್ವಜನಿಕವಾಗಿ ಏನು ಸತ್ಯ ಹೇಳಲು ಸಾಧ್ಯ? ಎಂದು ವ್ಯಂಗ್ಯವಾಡಿದರು.

ಇದೇ ವೇಳೆ ಸ್ಟಿಂಗ್ ಆಪರೇಷನ್‌ನಲ್ಲಿ ಕಾಂಗ್ರೆಸ್ ಸಚಿವರ ಕೈವಾಡವಿದೆ ಎಂಬ ಆರೋಪವನ್ನು ತಳ್ಳಿಹಾಕಿದ ಪ್ರಿಯಾಂಕ್ ಖರ್ಗೆ, ಈ ಪ್ರಕರಣದ ಸಮರ್ಪಕ ತನಿಖೆ ನಡೆಯುತ್ತಿದ್ದು ಸದ್ಯದಲ್ಲೇ ಸತ್ಯ ಹೊರಬರಲಿದೆ. ಹಳೆಯ ದ್ವೇಷದ ಹಿನ್ನೆಲೆಯಲ್ಲಿ ಇದರ ಹಿಂದೆ ಕುಮಾರಸ್ವಾಮಿ ಅವರೇ ಯಾಕೆ ಇರಬಾರದು? ಎಂದು ಪ್ರಶ್ನಿಸಿದ ಅವರು, ಇದರಲ್ಲಿ ಕಾಂಗ್ರೆಸ್ ನಾಯಕರಿದ್ದಾರೆ ಎಂದು ಆರೋಪಿಸುತ್ತಿರುವ ಬಿಜೆಪಿ ನಾಯಕ ಸಿ.ಟಿ. ರವಿ ಅವರು ಮೊದಲು ತಮ್ಮ ಧ್ವನಿ ಮಾದರಿಯನ್ನು ತನಿಖೆಗೆ ನೀಡಲಿ. ಈ ಕಾರ್ಯಾಚರಣೆಯ ಹಿಂದಿರುವ ನಿರ್ದೇಶಕರು ಮತ್ತು ಚಿತ್ರೀಕರಣ ನಡೆಸಿದವರು ಯಾರು ಎಂಬುದು ತನಿಖೆಯಿಂದ ಬಯಲಾಗಲಿದೆ ಎಂದರು.

ಕೆಪಿಎಸ್‌ಸಿ ಪ್ರಕರಣದಲ್ಲಿ ಹಿರಿಯ ಪೊಲೀಸ್ ಅಧಿಕಾರಿ ಅಲೋಕ್ ಕುಮಾರ್ ಅವರ ಕುರಿತು ಸರ್ಕಾರ ತಪ್ಪು ಮಾಹಿತಿ ನೀಡಿದೆ ಎಂಬ ಆರೋಪಕ್ಕೆ ಪ್ರತಿಕ್ರಿಯಿಸಿದ ಅವರು, ಸರ್ಕಾರ ಸಲ್ಲಿಸಿರುವ ಅಫಿಡವಿಟ್‌ನಲ್ಲಿ ಕೇವಲ ವಾಸ್ತವಾಂಶಗಳಿದ್ದು, ಆರೋಪ ಮಾಡುವವರು ಮೊದಲು ಅದನ್ನು ಸರಿಯಾಗಿ ಪರಿಶೀಲಿಸಲಿ ಎಂದರು.

ಇನ್ನು ವಿಜಯದಶಮಿ ಅಂಗವಾಗಿ ಆರ್‌ಎಸ್‌ಎಸ್ ಪಥಸಂಚಲನ ನಡೆಸುವ ವಿಚಾರವಾಗಿ ಪ್ರತಿಕ್ರಿಯಿಸಿದ ಅವರು, ರಾಜ್ಯದಲ್ಲಿ ಸುಮಾರು 82 ಸಾವಿರ ಸ್ಥಳಗಳಲ್ಲಿ ಗಣೇಶ ವಿಸರ್ಜನೆಗೆ ಕಾನೂನುಬದ್ಧವಾಗಿ ಅನುಮತಿ ನೀಡಲಾಗಿದೆ. ಅದೇ ರೀತಿ ಆರ್‌ಎಸ್‌ಎಸ್‌ನವರು ಕೂಡ ನಿಯಮಾನುಸಾರ ಅಗತ್ಯ ವಿವರಗಳೊಂದಿಗೆ ಅರ್ಜಿ ಸಲ್ಲಿಸಿದರೆ, ಕಾನೂನಿನ ಚೌಕಟ್ಟಿನಲ್ಲಿ ಪರಿಶೀಲಿಸಿ ಅನುಮತಿ ನೀಡಲಾಗುವುದು ಎಂದು ಸ್ಪಷ್ಟಪಡಿಸಿದರು.

ಕಬ್ಬು ಬೆಳೆಗಾರರಿಗೆ ನ್ಯಾಯಸಮ್ಮತ ಮತ್ತು ಲಾಭದಾಯಕ ಬೆಲೆ ನಿಗದಿಪಡಿಸುವ ವಿಚಾರದಲ್ಲಿ ಕೇಂದ್ರ ಸರ್ಕಾರ ವಿಫಲವಾಗಿದೆ. ಕಬ್ಬಿನ ಬೆಲೆ ನಿಗದಿಪಡಿಸುವುದು ಕೇಂದ್ರದ ಹೊಣೆಗಾರಿಕೆ ಯಾಗಿದ್ದು, ರೈತರ ಎಲ್ಲ ಸಮಸ್ಯೆಗಳಿಗೆ ರಾಜ್ಯ ಸರ್ಕಾರವೇ ಪರಿಹಾರ ಒದಗಿಸಲು ಸಾಧ್ಯವಿಲ್ಲ. ರೈತರ ಸಮಸ್ಯೆ ಆಲಿಸಲು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಖುದ್ದಾಗಿ ಹುಬ್ಬಳ್ಳಿಗೆ ಹೋಗಿದ್ದಾರೆ ಎಂದರು.

### ಉಗ್ರ ಸಂಘಟನೆಯ ನಂಟು

## ಕಲಬುರಗಿಯಲ್ಲಿ ಮತ್ತೊಬ್ಬ ಶಂಕಿತ ಉಗ್ರ ಸೆರೆ

**ಕಲಬುರಗಿ, ಅ. 18:** ಪಾಕ್ ಉಗ್ರರೊಂದಿಗೆ ನಂಟು ಹೊಂದಿದ್ದ ಮತ್ತೊಬ್ಬ ಶಂಕಿತ ಉಗ್ರರನನ್ನ ಪೊಲೀಸರು ನಗರದಲ್ಲಿ ಪೊಲೀಸರು ವಶಕ್ಕೆ ಪಡೆದಿದ್ದಾರೆ. ಕೇಂದ್ರೀಯ ಗುಪ್ತಚರ ಇಲಾಖೆ ಹಾಗೂ ಸ್ಥಳೀಯ ಪೋಲಿಸರ ಜಂಟಿ ಕಾರ್ಯಾಚರಣೆ ವೇಳೆ ಪಾಕಿಸ್ತಾನದ ಭಯೋತ್ಪಾದಕ ಸಂಘಟನೆ ಲಷ್ಕರ್ ಇ ತಯ್ಯಾಬಾ ಉಗ್ರರೊಂದಿಗೆ ಸಂಪರ್ಕ ಹೊಂದಿದ್ದ ಎನ್ನಲಾಗ್ತಿರೋ ಶಂಕಿತ ಉಗ್ರನನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.




ಪಶ್ಚಿಮ ಬಂಗಾಳದ ಮಮ್ತಾಜ್ ಉಲ್ ಮಲೀಕ್ ಎಂಬಾತ ಕಲಬುರಗಿ ನಗರದ ಸರಾಫ್ ಬಜಾರ್‌ನಲ್ಲಿ ಸಹೋದರನೊಂದಿಗೆ ಚಿನ್ನಾಭರಣ ಕೆಲಸ ಮಾಡುತ್ತಿದ್ದ. ಈತ ಸಾಮಾಜಿಕ ಜಾಲತಾಣಗಳ ಮೂಲಕ ಲಷ್ಕರ್ ಇ ತಯ್ಯಬಾದ ಖಾತೆಯೊಂದಿಗೆ ಸಂಪರ್ಕ ಹೊಂದಿದ್ದ ಎನ್ನಲಾಗಿದೆ. ಹಲವು ಮಹತ್ವದ ವಿಷಯಗಳನ್ನು ಮೆಸೇಜ್ ಮೂಲಕ ಹಂಚಿಕೊಂಡಿದ್ದು, ಈ ಮಾಹಿತಿ ಕೇಂದ್ರೀಯ ಗುಪ್ತಚರ ಇಲಾಖೆಗೆ ಗೊತ್ತಾಗಿದೆ. ಈ ಹಿನ್ನೆಲೆ ಶಂಕಿತ ಉಗ್ರನನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

**ಶಂಕಿತ ಉಗ್ರನ ಬಂಧನ:** ಸ್ಥಳೀಯ ಪೊಲೀಸ್ ಜೊತೆ ಕಾರ್ಯಾಚರಣೆ ನಡೆಸಿದ ಕೇಂದ್ರಿಯ ಗುಪ್ತಚರ ಇಲಾಖೆ ಅಧಿಕಾರಿಗಳು ಶಂಕಿತ ಉಗ್ರನನ್ನ ಬಂಧಿಸಿದ್ದಾರೆ. ಬ್ರಹ್ಮಪೂರ್ ಠಾಣೆ ವ್ಯಾಪ್ತಿಯಲ್ಲಿ ಈ ಘಟನೆ ನಡೆದಿದ್ದು, ಕೆಲ ದಿನಗಳ ಹಿಂದಷ್ಟೇ ನಗರದ ಕಸಾಯಿಖಾನೆಯಲ್ಲಿ ಕೆಲಸ ಮಾಡುತ್ತಿದ್ದ ಉತ್ತರ ಪ್ರದೇಶದ ಯುವಕನನ್ನು ಬಂಧಿಸಲಾಗಿತ್ತು. ಇದೀಗ ಮತ್ತೊಬ್ಬ ಶಂಕಿತ ಉಗ್ರನನ್ನ ಪೊಲೀಸರು ವಶಕ್ಕೆ ಪಡಿದಿದ್ದು, ಜನರಲ್ಲಿ ಆತಂಕ ಹೆಚ್ಚಿದೆ.

**ಅಂದು ಸಮೀರ್ ಬಂಧನ:** ಪಾಕಿಸ್ತಾನ ಮೂಲದ ಉಗ್ರ ಸಂಘಟನೆಗಳ ಜೊತೆ ಸಂಪರ್ಕ ಹೊಂದಿದ್ದ ಆರೋಪದ ಮೇಲೆ ಮಹಮ್ಮದ್ ಸಮೀರ್ (23) ಎಂಬಾತನನ್ನು ಕಲಬುರಗಿ ವಿಶ್ವವಿದ್ಯಾಲಯ ಠಾಣೆ ಪೊಲೀಸರು ಬಂಧಿಸಿದ್ದರು. ತನಿಖೆ ವೇಳೆ ಸ್ಫೋಟಕ ವಿಚಾರಗಳು ಬಯಲಾಗಿದೆ. ಪಾಕ್ ಜೊತೆ ಸಮೀರ್ ನಿರಂತರ ಸಂಪರ್ಕ ಹೊಂದಿದ್ದ ಎಂಬ ಮಾಹಿತಿ ಬೆಳಕಿಗೆ ಬಂದಿತ್ತು. ಭಯೋತ್ಪಾದಕ ಸಂಘಟನೆಗಳ ಲಿಂಕ್: ಸಮೀರ್ ಬಂಧನದ ಬಳಿಕ ಮತ್ತಷ್ಟು ರೋಚಕ ಮಾಹಿತಿ ಬೆಳಕಿಗೆ ಬಂದಿದ್ದು, ಈತ ವಿದೇಶಿ ಮೂಲದ ಮೊಬೈಲ್ ಸಂಖ್ಯೆಗಳ ಬಳಕೆ ಮಾಡ್ತಿದ್ದನಂತೆ. ಇದ್ರಿಂದಲೇ ವಾಟ್ಸಾಪ್ ಮತ್ತು ಇನ್ಸಾಗ್ರಾಮ್ ಮೂಲಕ ಹಲವರ ಜೊತೆ ಸಂಪರ್ಕ ಹೊಂದಿದ್ದ ಎಂಬ ಪಾಕಿಸ್ತಾನದ ಭಯೋತ್ಪಾದಕ ಸಂಘಟನೆಯ ಅಬೀದ್ ಜಟ್, ಶಹಜಾದ್ ಭಟ್ಟಿ ಜೊತೆಯೂ ಸಮೀರ್‌ಗೆ ಲಿಂಕ್ ಇತ್ತು ಎಂಬ ಮಾಹಿತಿ ಕೂಡ ಬೆಳಕಿಗೆ ಬಂದಿದೆ.

ಸಮೀರ್ ಮೊಬೈಲ್‌ನಲ್ಲಿ ಸ್ಫೋಟಕ ಮಾಹಿತಿ: ಪಾಕಿಸ್ತಾನದ ಭಯೋತ್ಪಾದಕ ಸಂಘಟನೆಗಳೊಂದಿಗೆ ಸಂಪರ್ಕ ಹೊಂದಿದ್ದ ಸಮೀರ್ ಮೊಬೈಲ್‌ನಲ್ಲಿ ಉಗ್ರರ ಫೋಟೋ, ವಿಡಿಯೋಗಳು ಪತ್ತೆಯಾಗಿದೆ. ಸಮೀರ್ ಮೊಬೈಲ್‌ನಲ್ಲಿ ಸಿಕ್ಕ ವಿಡಿಯೋಗಳಲ್ಲಿ ಭಾರತವನ್ನು ವಿರೋಧಿಸೋ ವಿಡಿಯೋಗಳೇ ಅತಿ ಹೆಚ್ಚು ಪತ್ತೆಯಾಗಿದೆ.

## ಬ್ರಿಮ್ಸ್ ನೆಲಮಹಡಿಗೆ ಹೈಟೆಕ್ ಸ್ಪರ್ಶ, ವಾಹನಗಳ ನಿಲುಗಡೆಗೆ ನಿರ್ಧಾರ

**ಬೀದರ್, ಅ. 18:** ನಗರದ ಬೀದರ್ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ (ಬ್ರಿಮ್ಸ್) ನೆಲಮಹಡಿಯಲ್ಲಿ ನೀರು ಜಮಾವಣೆಯಿಂದ ಆಗುತ್ತಿದ್ದ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲಾಗಿದ್ದು, ಆ ಸ್ಥಳಕ್ಕೀಗ ಹೈಟೆಕ್ ಸ್ಪರ್ಶ ನೀಡಿ, ವಾಹನಗಳ ಪಾರ್ಕಿಂಗ್‌ಗೆ ಬಳಸಿಕೊಳ್ಳಲು ನಿರ್ಧರಿಸಲಾಗಿದೆ.

ಬ್ರಿಮ್ಸ್ ನೆಲಮಹಡಿಯಲ್ಲಿ ಪುರಾತನ ಬಾವಿ ಇದ್ದು, ಮಳೆಗಾಲದಲ್ಲಿ ಆ ಬಾವಿ ಭರ್ತಿಯಾಗಿ, ಅದರಿಂದ ನೀರು ಹೊರಬಂದು, ಎಲ್ಲೆಡೆ ಜಮಾವಣೆ ಆಗಿ ನಾನಾ ಸಮಸ್ಯೆಗಳನ್ನು ತಂದೊಡ್ಡುತ್ತಿತ್ತು.

ತಜ್ಞರ ನೆರವಿನೊಂದಿಗೆ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲಾಗಿದೆ. ನೆಲಮಹಡಿಯಲ್ಲಿ ಎಂಟು ಸಂಪ್‌ಗಳನ್ನು ನಿರ್ಮಿಸಲಾಗಿದೆ. ಮೂರು ಎಚ್‌ಪಿಯ ಎಂಟು ಮೋಟಾರ್ ಪಂಪ್‌ಸೆಟ್‌ಗಳನ್ನು ಅಳವಡಿಸಲಾಗಿದೆ. ಪೈಪ್‌ಲೈನ್ ಸಂಪರ್ಕ ಕಲ್ಪಿಸಿ, ಬ್ರಿಮ್ಸ್‌ನಲ್ಲಿ ವಿವಿಧ ಉದ್ದೇಶಕ್ಕಾಗಿ ಅಲ್ಲಿನ ನೀರು ಬಳಸಿಕೊಳ್ಳಲು ತೀರ್ಮಾನಿಸಲಾಗಿದೆ. ಈಗ ನೀರು ಸಂಗ್ರಹವಾಗುವುದು ನಿಂತಿರುವುದರಿಂದ ನೆಲಮಹಡಿಗೆ ಹೈಟೆಕ್ ಸ್ಪರ್ಶ ನೀಡಲಾಗಿದೆ. ಇಡೀ ಜಾಗವನ್ನು ವಾಹನಗಳ ನಿಲುಗಡೆಗೆ ಬಳಸಿಕೊಳ್ಳಲು ನಿರ್ಧರಿಸಲಾಗಿದೆ.

ಬ್ರಿಮ್ಸ್ ನೆಲಮಹಡಿಯಲ್ಲಿ ವೈಜ್ಞಾನಿಕವಾಗಿ ನೀರು ಸಂಗ್ರಹಿಸಿ, ಬೇರೆ ಬೇರೆ ಉದ್ದೇಶಕ್ಕೆ ಬಳಸಿಕೊಳ್ಳಲಾಗುವುದು. ನೀರು ಸಂಗ್ರಹವಾಗುತ್ತಿದ್ದ ಜಾಗ ನವೀಕರಿಸಿ, ಪಾರ್ಕಿಂಗ್‌ಗೆ ಮೀಸಲಿಡಲಾಗಿದೆ.

ಈಗಾಗಲೇ ಸುಣ್ಣ, ಬಣ್ಣ ಬಳಿಯುವ ಅಂತಿಮ ಹಂತದ ಕೆಲಸ ನಡೆಯುತ್ತಿದ್ದು, ಒಂದು ತಿಂಗಳಲ್ಲಿ ಉದ್ಘಾಟಿಸಲು ಯೋಜಿಸಲಾಗಿದೆ ಎಂದು ಬ್ರಿಮ್ಸ್ ಆಡಳಿತಾಧಿಕಾರಿ ಪ್ರಕಾಶ್ ತಿಳಿಸಿದರು.

> ಬ್ರಿಮ್ಸ್ ನೆಲಮಹಡಿಗೆ ಸಂಪೂರ್ಣವಾಗಿ ಹೊಸ ಸ್ವರೂಪ ನೀಡಲಾಗಿದ್ದು, ಸುಸಜ್ಜಿತ ಪಾರ್ಕಿಂಗ್ ವ್ಯವಸ್ಥೆ ಮಾಡಲಾಗಿದೆ. ಶೀಘ್ರದಲ್ಲೇ ಉದ್ಘಾಟನೆ ನಡೆಯಲಿದೆ.
>
> – ಪ್ರಕಾಶ್
> ಆಡಳಿತಾಧಿಕಾರಿ, ಬ್ರಿಮ್ಸ್.

ಬ್ರಿಮ್ಸ್‌ನಲ್ಲಿ ವೈದ್ಯರು, ನರ್ಸ್ ಸೇರಿದಂತೆ ಒಟ್ಟು 800 ಜನ ಸಿಬ್ಬಂದಿ ಕೆಲಸ ನಿರ್ವಹಿಸುತ್ತಾರೆ. ಈಗ ಆಸ್ಪತ್ರೆಯ ಕಟ್ಟಡದ ಸುತ್ತಮುತ್ತ ಎಲ್ಲರೂ ವಾಹನಗಳನ್ನು ನಿಲ್ಲಿಸುತ್ತಿದ್ದಾರೆ. ಇನ್ಮುಂದೆ ನೆಲಮಹಡಿಯಲ್ಲಿ ವಾಹನಗಳ ನಿಲುಗಡೆಗೆ ಅನುಕೂಲವಾಗಲಿದೆ. ಇಡೀ ಆಸ್ಪತ್ರೆ ಆವರಣ ಸುಂದರವಾಗಿ ಕಾಣಿಸಲಿದೆ ಎಂದು ಹೇಳಿದರು.

**ಒಪಿಡಿ ಸೇವೆ ಆನ್‌ಲೈನ್:** ಬ್ರಿಮ್ಸ್ ಒಪಿಡಿ ಸೇವೆ ಈಗ ಆನ್‌ಲೈನ್ ಮಾಡಲಾಗಿದೆ. ಜನ ಸರತಿಯಲ್ಲಿ ಒಪಿಡಿ ಚೀಟಿಗಾಗಿ ನಿಲ್ಲುವುದು ತಪ್ಪಲಿದೆ. ಬ್ರಿಮ್ಸ್‌ಗೆ ನಿತ್ಯ 1,200 ರೋಗಿಗಳು ಬಂದು ಹೋಗುತ್ತಾರೆ. ಒಪಿಡಿ ಆನ್‌ಲೈನ್ ಆಗಿರುವುದರಿಂದ ಸರತಿಯಲ್ಲಿ ಜನ ನಿಲ್ಲುವುದು ತಪ್ಪಲಿದೆ. ಕಲ್ಯಾಣ ಕರ್ನಾಟಕದ ಸರ್ಕಾರಿ ಆಸ್ಪತ್ರೆಯಲ್ಲಿ ಇದು ಮೊದಲ ಪ್ರಯತ್ನ. ಬರುವ ದಿನಗಳಲ್ಲಿ ಇನ್ನಷ್ಟು ಸೇವೆಗಳು ಆನ್‌ಲೈನ್‌ನಲ್ಲಿ ಕಲ್ಪಿಸಲು ಯೋಜಿಸಲಾಗಿದೆ ಎಂದು ಬ್ರಿಮ್ಸ್ ಆಡಳಿತಾಧಿಕಾರಿ ಪ್ರಕಾಶ್ ತಿಳಿಸಿದ್ದಾರೆ.

## ನವೋದ್ಯಮಿಗಳಿಗೆ ಸುವರ್ಣಾವಕಾಶ: ಇಂದು ದಾವಣಗೆರೆಯಲ್ಲಿ ಸ್ಟಾರ್ಟ್‌ಅಪ್ ಪಿಚ್ಚಿಂಗ್ ಕಾರ್ಯಕ್ರಮ

**ದಾವಣಗೆರೆ, ಅ.18:** ನವೋದ್ಯಮಿಗಳಿಗೆ ತಮ್ಮ ನವೀನ ಆವಿಷ್ಕಾರಗಳು ಹಾಗೂ ಉದ್ಯಮ ಪರಿಕಲ್ಪನೆಗಳನ್ನು ಜಾಗತಿಕ ಮಟ್ಟದಲ್ಲಿ ಪರಿಚಯಿಸಲು ಅವಕಾಶ ಕಲ್ಪಿಸುವ ಉದ್ದೇಶದಿಂದ ವಿಷನ್ ದಾವಣಗೆರೆ, ಕರ್ನಾಟಕ ಡಿಜಿಟಲ್ ಎಕಾನಮಿ ಮಿಷನ್ (ಕೆಡಿಇಎಂ) ಹಾಗೂ ರಾಜ್ಯ ಸರ್ಕಾರದ ಎಲೆಕ್ಟ್ರಾನಿಕ್ಸ್, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಇಲಾಖೆಯ ಸಹಯೋಗದಲ್ಲಿ ಅಕ್ಟೋಬರ್ 19ರಂದು ಬೆಳಿಗ್ಗೆ 11 ಗಂಟೆಗೆ ನಗರದ ಬಿಐಇಟಿ ಕಾಲೇಜಿನ ಬೋರ್ಡ್ ರೂಮ್‌ನಲ್ಲಿ ಸ್ಟಾರ್ಟ್‌ಅಪ್ ಪಿಚ್ಚಿಂಗ್ ಕಾರ್ಯಕ್ರಮ ಆಯೋಜಿಸಲಾಗಿದೆ.

ಕಾರ್ಯಕ್ರಮಕ್ಕೆ ಸಂಸದರಾದ ಡಾ. ಪ್ರಭಾ ಮಲ್ಲಿಕಾರ್ಜುನ್ ಚಾಲನೆ ನೀಡಲಿದ್ದಾರೆ ನವೋದ್ಯಮಿಗಳು ತಮ್ಮ ನೂತನ ಆವಿಷ್ಕಾರಗಳು, ತಂತ್ರಜ್ಞಾನ ಆಧಾರಿತ ಉತ್ಪನ್ನಗಳು ಹಾಗೂ ಉದ್ಯಮ ಪರಿಕಲ್ಪನೆಗಳನ್ನು ತಜ್ಞರ ತೀರ್ಪುಗಾರರ ಸಮಿತಿಯ ಮುಂದೆ ಪ್ರಸ್ತುತಪಡಿಸಲು ಅವಕಾಶ ವಿದೆ. ಆಯ್ಕೆಯಾಗುವ ನವೋದ್ಯಮಿಗಳಿಗೆ ಪ್ರತಿಷ್ಠಿತ ಬೆಂಗಳೂರು ಟೆಕ್ ಸಮ್ಮಿಟ್ 2026ರಲ್ಲಿ ತಮ್ಮ ಉತ್ಪನ್ನಗಳು ಹಾಗೂ ಸೇವೆಗಳನ್ನು ಪ್ರದರ್ಶಿಸಲು ಪ್ರತ್ಯೇಕ ಪ್ರದರ್ಶನ ಮಳಿಗೆ (ಎಕ್ಸಿಬಿಷನ್ ಪಾಡ್) ಪಡೆಯುವ ಅವಕಾಶ ಕಲ್ಪಿಸಲಾಗಿದೆ.

ಬೆಂಗಳೂರು ಟೆಕ್ ಸಮ್ಮಿಟ್‌ನಲ್ಲಿ ಒಂದು ಲಕ್ಷಕ್ಕೂ ಅಧಿಕ ಪ್ರತಿನಿಧಿಗಳು, 60 ಸಾವಿರಕ್ಕೂ ಹೆಚ್ಚು ಉದ್ಯಮ ವಲಯದ ಸಂದರ್ಶಕರು ಭಾಗವಹಿಸುವ ನಿರೀಕ್ಷೆಯಿದ್ದು, ನವೋದ್ಯಮಿಗಳಿಗೆ ಜಾಗತಿಕ ಹೂಡಿಕೆದಾರರು, ಉದ್ಯಮ ತಜ್ಞರು ಹಾಗೂ ಅಂತರ ರಾಷ್ಟ್ರೀಯ ಪ್ರತಿನಿಧಿಗಳೊಂದಿಗೆ ಸಂಪರ್ಕ ಬೆಳೆಸಲು ವೇದಿಕೆ ದೊರೆಯಲಿದೆ.

ಉದ್ಯಮ ವಿಸ್ತರಣೆ, ಹೂಡಿಕೆ ಹಾಗೂ ಹೊಸ ವ್ಯಾಪಾರ ಅವಕಾಶಗಳನ್ನು ಅನ್ವೇಷಿಸಲು ಈ ಕಾರ್ಯಕ್ರಮ ಸಹಕಾರಿಯಾಗಲಿದೆ ಎಂದು ಆಯೋಜಕರು ತಿಳಿಸಿದ್ದಾರೆ.

ಆಸಕ್ತ ನವೋದ್ಯಮಿಗಳು https://forms.gle/XtZdHmpQVEBRKfµ8 ಲಿಂಕ್ ಮೂಲಕ ನೋಂದಣಿ ಮಾಡಿಕೊಳ್ಳಬಹುದು. ಭಾಗವಹಿಸಲು ಸೀಮಿತ ಅವಕಾಶಗಳಿದ್ದು, ಮೊದಲು ನೋಂದಾಯಿಸಿಕೊಂಡವರಿಗೆ ಆದ್ಯತೆ ನೀಡಲಾಗುವುದು. ದಾವಣಗೆರೆ ಸೇರಿದಂತೆ ಜಿಲ್ಲೆಯ ನವೋದ್ಯಮಿಗಳು ಈ ಅವಕಾಶವನ್ನು ಸದುಪಯೋಗ ಪಡಿಸಿಕೊಳ್ಳುವಂತೆ ಆಯೋಜಕರು ತಿಳಿಸಿದ್ದಾರೆ.

### ಬಿ.ಕೆ.ಹರಿಪ್ರಸಾದ್ ಜೊತೆ ಈಡಿಗ ಮುಖಂಡರ ಚರ್ಚೆ

## ಈಡಿಗ ನಿಗಮಕ್ಕೆ 500 ಕೋಟಿ ಬಜೆಟ್ ಘೋಷಣೆಗೆ ಮನವಿ

**ಕಲಬುರಗಿ, ಅ.10–** ಈಡಿಗ – ಬಿಲ್ಲವ ಸೇರಿದಂತೆ 26 ಪಂಗಡಗಳಿಗೆ ರಾಜ್ಯ ಸರ್ಕಾರವು 500 ಕೋಟಿ ರೂಪಾಯಿಗಳನ್ನು ಮುಂದಿನ ಬಜೆಟ್ ನಲ್ಲಿ ಘೋಷಣೆ ಮಾಡುವಂತೆ ಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಅವರಿಗೆ ಒತ್ತಾಯಿಸಬೇಕು ಎಂದು ಈಡಿಗ ಮುಖಂಡರ ನಿಯೋಗವು ಕೆಪಿಸಿಸಿ ಅಧ್ಯಕ್ಷ ಬಿ.ಕೆ ಹರಿಪ್ರಸಾದ್ ಅವರನ್ನು ಒತ್ತಾಯಿಸಿತು.



ಕಲಬುರಗಿ ಪ್ರವಾಸಕ್ಕೆ ಆಗಮಿಸಿದ ಬಿ.ಕೆ ಹರಿಪ್ರಸಾದ್ ಅವರನ್ನು ಖಾಸಗಿ ಹೋಟೆಲ್‌ನಲ್ಲಿ ಭೇಟಿಯಾದ ನಿಯೋಗವು ಚರ್ಚಿಸಿ ಈ ಸರಕಾರ ಇದುವರೆಗೆ ನಾಲ್ಕು ಬಜೆಟ್ ಗಳನ್ನು ಮಂಡಿಸಿದರೂ ಈಡಿಗ ನಿಗಮಕ್ಕೆ ಅನುದಾನ ಬಿಡುಗಡೆ ಮಾಡಲಿಲ್ಲ. ಆದರೆ ನಿಗಮವು ಕಾರ್ಯ ಚಟುವಟಿಕೆ ಆರಂಭಿಸಲು ಈ ಸರಕಾರ ಅನುವು ಮಾಡಿಕೊಟ್ಟಿದೆ. ಈಗ ನಮ್ಮ ಸಮುದಾಯದವರೇ ರಾಜ್ಯದಲ್ಲಿ ಪಕ್ಷದ ಉನ್ನತ ಸ್ಥಾನದಲ್ಲಿರುವುದರಿಂದ ಮುಖ್ಯಮಂತ್ರಿಗಳಿಗೆ ಒತ್ತಡ ಹೇರಿ ನಿಗಮಕ್ಕೆ 500 ಕೋಟಿ ರೂ.ಬಿಡುಗಡೆ ಮಾಡಬೇಕೆಂದು ಚಿತ್ತಾಪುರ ಕರದಾಳ ಬ್ರಹ್ಮಶ್ರೀ ನಾರಾಯಣಗುರು ಶಕ್ತಿಪೀಠದ ಮಾಧ್ಯಮ ಸಂಚಾಲಕರಾದ ಡಾ. ಸದಾನಂದ ಪೆರ್ಲ ವಿವರಿಸಿದರು. ನಿಗಮವು ಸದ್ಯ ದೇವರಾಜ ಅರಸು ನಿಗಮದಿಂದ ನೀಡಲಾದ 10 ಕೋಟಿ ರೂಪಾಯಿಗಳಲ್ಲಿ ತನ್ನ ಕಾರ್ಯ ಚಟುವಟಿಕೆ ಪ್ರಾರಂಭಿಸಿದ್ದು ಮುಂದಿನ ಬಜೆಟ್ ನಲ್ಲಿ 500 ಕೋಟಿ ಅನುದಾನ ದೊರೆತರೆ ರಾಜ್ಯದ ಈಡಿಗ – ಬಿಲ್ಲವ ಸೇರಿದಂತೆ 26 ಪಂಗಡಗಳ ಕಲ್ಯಾಣಕ್ಕಾಗಿ ವಿವಿಧ ಯೋಜನೆಗಳನ್ನು ಅನುಷ್ಠಾನ ಮಾಡಲು ಅನುಕೂಲವಾಗುತ್ತದೆ. ತಮ್ಮ ನಾಯಕತ್ವದಲ್ಲಿ ಬೇಡಿಕೆ ಈಡೇರಿಸುವಂತಾಗಲಿ ಎಂದು ನಿಯೋಗವು ಹರಿಪ್ರಸಾದ್ ಅವರನ್ನು ಒತ್ತಾಯಿಸಿತು.

**ಪ್ರಾಮಾಣಿಕ ಪ್ರಯತ್ನ – ಅನುದಾನ ಖಚಿತ:** ನಿಯೋಗದ ಜೊತೆ ಚರ್ಚಿಸಿದ ಬಿ ಕೆ ಹರಿಪ್ರಸಾದ್ ಮಾತನಾಡಿ ಮುಖ್ಯಮಂತ್ರಿಗಳ ಗಮನಕ್ಕೆ ಈ ವಿಷಯ ತರಲಾಗುವುದು ಹಾಗೂ ಮುಂದಿನ ಬಜೆಟ್ ನಲ್ಲಿ ಅನುದಾನ ಸಿಗುವಂತೆ ಪ್ರಾಮಾಣಿಕ ಪ್ರಯತ್ನ ಮಾಡುವುದಲ್ಲದೆ ಈ ಬಾರಿ ಹಣ ಘೋಷಣೆಯಾಗುವುದು ಖಚಿತ ಎಂದು ಭರವಸೆ ನೀಡಿದರು.

### ಸತ್ತ ಜಾನುವಾರುಗಳ ಪರಿಹಾರದ ಹಣ ನುಂಗಿದರು

## ರಾಬಕೊವಿ ಹಾಲು ಒಕ್ಕೂಟದ ಮತ್ತಷ್ಟು ಅಕ್ರಮ ಬಯಲು!

**ರಾಯಚೂರು, ಅ. 18:** ರಾಯಚೂರು, ಬಳ್ಳಾರಿ, ಕೊಪ್ಪಳ ಮತ್ತು ವಿಜಯನಗರ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟದ (ರಾಬಕೊವಿ) ಹಾಲು ಒಕ್ಕೂಟದಲ್ಲಿ ಅಕ್ರಮಗಳ ಸರಮಾಲೆ ಒಂದೊಂದಾಗಿ ಬೆಳಕಿಗೆ ಬರುತ್ತಿದೆ. ಸತ್ತ ಜಾನುವಾರುಗಳ ವಿಮಾ ಪರಿಹಾರದ ಹಣವನ್ನು ಕೂಡ ದುರುಪಯೋಗಪಡಿಸಿಕೊಂಡು, ಕೋಟ್ಯಂತರ ರೂಪಾಯಿ ಲೂಟಿ ಮಾಡಿರುವ ಗಂಭೀರ ಆರೋಪ ಕೇಳಿಬಂದಿದೆ.

ಒಕ್ಕೂಟದ ಅಕೌಂಟೆಂಟ್ ಹಾಗೂ ನಿವೃತ್ತ ಮ್ಯಾನೇಜರ್ ನಡುವಿನ ದೂರವಾಣಿ ಸಂಭಾಷಣೆಯ ಆಡಿಯೋವೊಂದು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದ್ದು, ಒಕ್ಕೂಟದ ಒಳಗಿನ ಕರ್ಮಕಾಂಡವನ್ನು ಹೊರಹಾಕಿದೆ. ವೈರಲ್ ಆಗಿರುವ ಆಡಿಯೋದಲ್ಲಿ ಒಕ್ಕೂಟದ ಅಕೌಂಟೆಂಟ್ ಉಮಾ ಮಹೇಶ್ವರಿ ಹಾಗೂ ನಿವೃತ್ತ ಮ್ಯಾನೇಜರ್ ವೆಂಕಟೇಶ್ ಪರಸ್ಪರ ಮಾತನಾಡಿರುವುದು ದಾಖಲಾಗಿದೆ. ಜಾನುವಾರುಗಳು ಮೃತಪಟ್ಟ ನಂತರ ಬರುವ ಇನ್ಸೂರೆನ್ಸ್ (ವಿಮೆ) ಹಣವನ್ನು ಮತ್ತು ಇತರೆ ಪರಿಹಾರ ಧನವನ್ನು ಅಕ್ರಮವಾಗಿ ಬೇರೆಡೆಗೆ ವರ್ಗಾವಣೆ ಮಾಡಿಕೊಂಡಿರುವ ಬಗ್ಗೆ ಈ ಸಂಭಾಷಣೆಯಲ್ಲಿ ಉಲ್ಲೇಖಿಸಲಾಗಿದೆ. ಹಿಂದಿನ ನಿರ್ದೇಶಕರ ಅವಧಿಯಲ್ಲಿ ಆರಂಭವಾದ ಈ ಭ್ರಷ್ಟಾಚಾರ ಈಗಲೂ ಮುಂದುವರೆದಿದ್ದು, ಪ್ರಕರಣ ಬೆಳಕಿಗೆ ಬರುತ್ತಿದ್ದಂತೆ ದುರ್ಬಳಕೆ ಮಾಡಿಕೊಂಡಿರುವ ಹಣವನ್ನು ಹೊಂದಿಸಲು ಅಕೌಂಟೆಂಟ್ ಪರದಾಡುತ್ತಿರುವುದು ಆಡಿಯೋದಿಂದ ಸ್ಪಷ್ಟವಾಗಿದೆ.

ಜಾನುವಾರುಗಳು ಸಾವನ್ನಪ್ಪಿದರೂ ಸಹ, ರೈತರಿಗೆ ಸಲ್ಲಬೇಕಾದ ಹಾಗೂ ವಿಮಾ ಕಂಪನಿಯಿಂದ ಬರಬೇಕಾದ ಪರಿಹಾರದ ಹಣವನ್ನು ಅಧಿಕಾರಿಗಳೇ ನುಂಗಿ ಹಾಕುತ್ತಿದ್ದಾರೆ ಎಂಬ ಆರೋಪ ಸಾರ್ವಜನಿಕ ವಲಯದಲ್ಲಿ ತೀವ್ರ ಆಕ್ರೋಶಕ್ಕೆ ಕಾರಣವಾಗಿದೆ. ಬಡ ರೈತರ ಹೆಸರಿನಲ್ಲಿ ಬರುವ ಹಣವನ್ನು ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದವರೇ ಲೂಟಿ ಮಾಡುತ್ತಿರುವುದು ಹಾಲು ಒಕ್ಕೂಟದ ಆಡಳಿತ ವ್ಯವಸ್ಥೆಯ ಮೇಲಿನ ನಂಬಿಕೆಯನ್ನು ಹುಸಿಗೊಳಿಸಿದೆ.



ಈ ಭ್ರಷ್ಟಾಚಾರ ಪ್ರಕರಣದ ಕುರಿತು ಕೂಲಂಕಷವಾಗಿ ತನಿಖೆ ನಡೆಸಿ, ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ಆಗ್ರಹಿಸಿ ಧನಂಜಯ್ ಹಾಮಲ್ ಎಂಬುವವರು ಬಳ್ಳಾರಿಯ ಬ್ರೂಸ್ ಪೇಟೆ ಪೊಲೀಸ್ ಠಾಣೆ ಹಾಗೂ ಕೆಎಂಎಫ್ ಅಧ್ಯಕ್ಷರಿಗೆ ಅಧಿಕೃತವಾಗಿ ದೂರು ದಾಖಲಿಸಿದ್ದಾರೆ. ಈ ಹಗರಣದಲ್ಲಿ ಭಾಗಿಯಾಗಿರುವ ಪ್ರಮುಖರ ವಿರುದ್ಧ ಕಠಿಣ ಕ್ರಮ ಜರುಗಿಸಬೇಕು ಮತ್ತು ರೈತರಿಗೆ ನ್ಯಾಯ ಒದಗಿಸಬೇಕು ಎಂಬ ಒತ್ತಾಯ ಜೋರಾಗಿದೆ.

### ಬೀದರ ಜಿಲ್ಲೆಗೂ ಬಂತು ಕಬ್ಬು ಬೆಳೆಗಾರರ ಹೋರಾಟ

## ಹೈದರಾಬಾದ್–ಮುಂಬೈ ಹೆದ್ದಾರಿ ತಡೆ ನಡೆಸಿದ ರೈತರು

**ಬೀದರ, ಅ. 18:** ಪ್ರತಿ ಟನ್ ಕಬ್ಬಿಗೆ 5500 ರೂ. ಎಫ್‌ಆರ್‌ಪಿ ನಿಗದಿಪಡಿಸುವುದು ಸೇರಿ ರೈತರ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಕರ್ನಾಟಕ ರಾಜ್ಯ ರೈತ ಸಂಘದ (ಕೆಕೆಆರ್‌ಎಸ್) ಜಿಲ್ಲಾ ಘಟಕ ಹಾಗೂ ವಿವಿಧ ರೈತಪರ ಸಂಘಟನೆಗಳ ನೇತೃತ್ವದಲ್ಲಿ ರೈತರು ಹುಮನಾಬಾದ ಪಟ್ಟಣದ ಹೊರವಲಯದಲ್ಲಿ ಹೈದರಾಬಾದ–ಮುಂಬಯಿ ರಾಷ್ಟ್ರೀಯ ಹೆದ್ದಾರಿ ಸಂಚಾರ ತಡೆ ನಡೆಸಿ ಬೃಹತ್ ಪ್ರತಿಭಟನೆ ನಡೆಸಿದರು. ಪ್ರತಿಭಟನೆಯಿಂದಾಗಿ ರಾಷ್ಟ್ರೀಯ ಹೆದ್ದಾರಿ 65 ಸೇರಿದಂತೆ ಪ್ರಮುಖ ಸೇವಾ ರಸ್ತೆಗಳಲ್ಲೂ ವಾಹನ ಸಂಚಾರ ಕೆಲಕಾಲ ಅಸ್ತವ್ಯಸ್ತಗೊಂಡಿತು.

ಹುಮನಾಬಾದ ಪ್ರವಾಸಿ ಮಂದಿರದಿಂದ ಪ್ರತಿಭಟನಾ ಮೆರವಣಿಗೆ ಆರಂಭಗೊಂಡು ಚಿದ್ರಿ ಬೈಪಾಸ್ ಹಾಗೂ ಚಿದ್ರಿ ಪೆಟ್ರೋಲ್ ಬಂಕ್ ಸಮೀಪದ ಹೈದರಾಬಾದ್–ಮುಂಬೈ ರಾಷ್ಟ್ರೀಯ ಹೆದ್ದಾರಿ 65ರಲ್ಲಿ ರೈತರು ಹಲವು ಗಂಟೆಗಳ ಕಾಲ ರಸ್ತೆ ತಡೆ ನಡೆಸಿ ಸರ್ಕಾರದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಬಳಿಕ ಹಳೆಯ ಚೆಕ್‌ಪೋಸ್ಟ್ ಸಮೀಪದ ಬೀದರ್&ಕಲಬುರಗಿ ಹೆದ್ದಾರಿಯಲ್ಲಿ ರಸ್ತೆ ತಡೆ ಮುಂದುವರಿಸಿ ಸಂಜೆವರೆಗೂ ಪ್ರತಿಭಟನೆ ನಡೆಸಿದರು.ರೈತ ಸಂಘದ ಹಾಗೂ ವಿವಿಧ ಸಂಘಟನೆಗಳ ಪ್ರಮುಖರು ಮಾತನಾಡಿ, ರೈತರ ತೀವ್ರ ಸಂಕಷ್ಟದಲ್ಲಿದ್ದಾರೆ. ಬರಗಾಲ ಆವರಿಸಿದೆ. ರೈತರ ಜತೆ ಚಲ್ಲಾಟವಾಡದೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಕೂಡಲೇ ಬೇಡಿಕೆ ಈಡೇರಿಸಬೇಕು. ಇಲ್ಲದಿದ್ದಲ್ಲಿ ಉಗ್ರ ಹೋರಾಟ ನಡೆಸುವುದಾಗಿ ಎಚ್ಚರಿಕೆ ನೀಡಿದರು.



ಟನ್ ಕಬ್ಬಿಗೆ 5,000 ರೂ. ಎಫ್‌ಆರ್‌ಪಿ ನಿಗದಿಪಡಿಸಬೇಕು. ಕೃಷಿ ಉತ್ಪನ್ನಗಳಿಗೆ ಕನಿಷ್ಠ ಬೆಂಬಲ ಬೆಲೆ (ಎಂಎಸ್‌ಪಿ) 6,000 ರೂ.ನಿಗದಿಗೊಳಿಸಬೇಕು. ಬರಪೀಡಿತ ರೈತರ ಸಂಪೂರ್ಣ ಸಾಲ ಮನ್ನಾ ಮಾಡಬೇಕು. ಬೆಳೆ ನಷ್ಟಕ್ಕೆ ಪ್ರತಿ ಎಕರೆಗೆ 50 ಸಾವಿರ ರೂ. ಪರಿಹಾರ ನೀಡಬೇಕು ಸೇರಿ ಬೇಡಿಕೆಗಳ ಈಡೇರಿಕಗೆ ಪ್ರಧಾನಿ ಮೋದಿ ಅವರಿಗೆ ಬರೆದ ಮನವಿ ಪತ್ರವನ್ನು ಸ್ಥಳಕ್ಕೆ ಆಗಮಿಸಿದ ಜಿಲ್ಲಾಧಿಕಾರಿ ಶಿಲ್ಪಾ ಶರ್ಮಾರ್ ಅವರಿಗೆ ಸಲ್ಲಿಸಿದರು.

**ಮನವಿ ಸ್ವೀಕರಿಸಿದ ಜಿಲ್ಲಾಧಿಕಾರಿ:** ಜಿಲ್ಲಾಧಿಕಾರಿಗಳು ಸ್ಥಳಕ್ಕೆ ಆಗಮಿಸಿ ಮನವಿ ಸ್ವೀಕರಿಸಬೇಕೆಂಬ ರೈತರ ಒತ್ತಾಯಕ್ಕೆ ಮಣಿದು ಸಂಜೆ ಪ್ರತಿಭಟನಾ ಸ್ಥಳಕ್ಕೆ ಆಗಮಿಸಿದ ಜಿಲ್ಲಾಧಿಕಾರಿ ಶಿಲ್ಪಾ ಶರ್ಮಾ ಅವರು ರೈತರಿಂದ ಮನವಿ ಪತ್ರ ಸ್ವೀಕರಿಸಿದರಿಂದ ಪ್ರತಿಭಟನೆ ಕೈಬಿಡಲಾಯಿತು.

**ವಾಹನ ಸವಾರರ ಪರದಾಟ:** ರೈತರ ರಸ್ತೆ ತಡೆಯಿಂದ ಹೆದ್ದಾರಿಯ ಎರಡೂ ಬದಿಗಳಲ್ಲಿ ವಾಹನಗಳು ಸಾಲುಗಟ್ಟಿ ನಿಂತಿದ್ದವು. ಇದರಿಂದ ಪ್ರಯಾಣಿಕರು ಹಾಗೂ ವಾಹನ ಸವಾರರು ಪರದಾಡುವಂತಾಯಿತು. ನಂತರ ವಾಹನಗಳ ಸಂಚಾರಕ್ಕೆ ತೊಂದರೆಯಾಗದಂತೆ ಪರ್ಯಾಯ ಮಾರ್ಗದ ಮೂಲಕ ಸಂಚಾರ ವ್ಯವಸ್ಥೆ ಕಲ್ಪಿಸಲಾಗಿತ್ತು.

# ದೇಶದಲ್ಲಿ ಅರಾಜಕತೆ ಸೃಷ್ಟಿಸುವ ಜಿರಳೆಗಳಿಗೆ ಹಣಕಾಸಿನ ನೆರವು ನೀಡುವುದೇ ಕಾಂಗ್ರೆಸ್ ದೇಶಭಕ್ತಿ: ಛಲವಾದಿ ವಾಗ್ದಾಳಿ



**ಕಲಬುರಗಿ, ಅ. 18:** ಜಿರಳೆ ಪಕ್ಷದವರಿಗೆ ಕಾಂಗ್ರೆಸ್ ಪಕ್ಷವೇ ಹಣಕಾಸಿನ ನೆರವು ನಿಡುತ್ತಿದೆ. ಮೋದಿ ವಿರುದ್ಧ ಯಾರೇ ಹೋರಾಟ ನಡೆಸಿದರೂ ಅವರಿಗೆ ಕಾಂಗ್ರೆಸ್ ನೆರವು ನೀಡಲಿದೆ ಎಂದು ಕೆಪಿಸಿಸಿ ಅಧ್ಯಕ್ಷ ಹರಿಪ್ರಸಾದ್ ಅವರೇ ಹೇಳುವ ಮೂಲಕ, ಕಾಂಗ್ರರೆಸ್ಸಿನ ದೇಶಭಕ್ತಿ ಎಂಥದ್ದು ಎಂಬುದು ಬಹಿರಂಗವಾಗಿದೆ. ದೇಶದಲ್ಲಿ ಅರಾಜಕತೆ ಸೃಷ್ಟಿಸುವವರಿಗೆ ಹಣಕಾಸು ನೆರವು ನಿಡುವುದೆಂದರೆ ದೇಶವನ್ನು ಮತ್ತೊಮ್ಮೆ ಗುಲಾಮಗಿರಿಗೆ ತಳ್ಳುವುದಾಗಿದೆ ಎಂದು ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಕಾಂಗ್ರೆಸ್ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ವಿಧಾನ ಪರಿಷತ್‌ಗೆ ಈಶಾನ್ಯ ಶಿಕ್ಷಕರ ಕ್ಷೇತ್ರದಿಂದ ನಡೆಯುತ್ತಿರುವ ಚುನಾವಣೆಗಗಿ ಆಗಮಿಸಿರುವ ಅವರು, ಖಾಸಗಿ ಹೊಟೆಲ್‌ನಲ್ಲಿ ಮಾಧ್ಯಮಗೋಷ್ಠಿಯಲ್ಲಿ ಮಾತಾಡಿ, ಕಾಂಗ್ರೆಸ್‌ನಿಂದಲೇ ದೇಶಕ್ಕೆ ಸ್ವಾತಂತ್ರ್ಯ ಸಿಕ್ಕಿದೆ ಎಂದು ಬಾಯ್ಬಡಿದುಕೊಳ್ಳುವವರು, ದೇಶದಲ್ಲಿ ಅರಾಜಕತೆ ಸೃಷ್ಟಿಸುವ ಯಾವುದೇ ಸಂಘಟನೆಗಳಿಗೆ ವ್ಯಕ್ತಿಗಳಿಗೆ ಹಣಕಾಸು ನೆರವು ನೀಡುವುದಗಿ ಕೆಪಿಸಿಸಿ ಅಧ್ಯಕ್ಷ ಬಿಕೆ ಹರಿಪ್ರಸಾದ ಅವರು ಬಹಿರಂಗವಾಗಿ ಹೇಳಿದ್ದಾರೆ. ಯಾರು ದೇಶದಲ್ಲಿ ಅರಾಜಕತೆಗೆ ಸಹಕಾರ ನೀಡುತ್ತಾರೋ ಅಂಥವರಿಂದ ದೇಶಕ್ಕೆ ಸ್ವಾತಂತ್ರ್ಯ ಸಿಕ್ಕಿದೆ ಎಂದು ಹೇಳಿದರೆ ನಂಬಲಾದೀತೇ? ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದಲ್ಲಿ ವಿಶ್ವದಲ್ಲಿ ಸ್ವಾಭಿಮಾನದಿಂದ ನಾಲ್ಕನೇ ಅತಿದೊಡ್ಡ ಆರ್ಥಿಕತೆಯಿಂದ ತಲೆ ಎತ್ತಿ ನಿಂತಿರುವ ಭಾರತವನ್ನು ಮತ್ತೊಮ್ಮೆ ಗುಲಾಮಗಿರಿಗೆ ತಳ್ಳುವ ಪ್ರಯತ್ನ ಕಾಂಗ್ರೆಸ್ ಮಾಡುತ್ತಿದೆ ಎಂದು ಆರೋಪಿಸಿದರು.

ಕಾಂಗ್ರೆಸ್ ಬಂಡವಾಳ ಏನೆಂಬುದು ಇಡೀ ದೇಶ ನೋಡುತ್ತಿದೆ. ರಾಜ್ಯದಲ್ಲಿ ಸರ್ಕಾರದ ನಾಯಕತ್ವ ಬದಲಾಗಿರ ಬಹುದು. ಆದರೆ ಅಧಿಕಾರಕ್ಕಾಗಿ ತಮ್ಮದೇ ಪಕ್ಷದ ನಾಯಕ ಮಾಜಿ ಸಿಎಂ ವಿರುದ್ಧ ಸ್ಟಡಿಂಗ್ ಆಪರೇಶನ್ ಮಾಡುವ ಮೂಲಕ ತಾವೇ ಹೊಡೆದಾಡಿ ಕೊಳ್ಳುತ್ತಿದ್ದಾರೆ. ಇ ಪಕ್ಷವನ್ನು ಮುಂದಿನ ಚುನಾವಣೆಯಲ್ಲಿ ಸೋಲಿಸಲು ನಮ್ಮ ಪ್ರಯತ್ನವನ್ನು ಇವರು ಸಲೀಸುಗೊಳಿಸಿದ್ದಾರೆ ಎಂದರು.

ಸಚಿವ ಪ್ರಿಯಾಂಕ್ ಖರ್ಗೆ ಒಬ್ಬ ಅಪ್ರಬುದ್ಧ ರಾಜಕಾರಣಿ. ಅಪ್ಪನ ಬಲದಿಂದ ಮಂತ್ರಿ ಪದವಿ ಪಡೆದಿದ್ದು, ಯಾವ ಹುದ್ದೆ ಯವ ರೀತಿ ಸಂಭಾಳಿಸಿಕೊಂಡು ಹೋಗಬೇಕೆಂಬ ಪರಿಜ್ಞಾನ ಇಲ್ಲದವನಿಗೆ ಗೃಹ ಖಾತೆಯಂತಹ ಮಹತ್ವದ ಖಾತೆ ನೀಡಲಾಗಿದೆ. ಐಟಿ ಬಿಟಿ ಎಂದರೇನೆಂದೇ ತಿಳಿಯದವರಿಗೆ ಐಟಿಬಿಟಿ ಖಾತೆ ಕುಡ ನೀಡಿದ್ದಾರೆ. ಇವನು ಬೆಂಗಳೂರು ಬಿಟ್ಟು ಕದಲುವದಿಲ್ಲ. ಅಲ್ಲಿ ಕುಳಿತು ದೇಶದ ಪ್ರಧಾನಿ ಬಗ್ಗೆ ಪ್ರತಿಕ್ರಿಯೆ ಮಾಡುವುದೇ ಈತನ ಕೆಲಸ. ತನ್ನ ಕ್ಷೇತ್ರದ ಜನರಿಗೆ ಕುಡಿಯಲು ನೀರಿಗೆ ಗತಿಯಿಲ್ಲ. ಐವತ್ತು ವರ್ಷಗಳಿಂದ ಅಪ್ಪ ಮಗ ಆಡಳಿತ ನಡೆಸಿದ ಅಭಿವೃದ್ಧಿಯ ದುರಂತವಿದು ಎಂದು ಮೂದಲಿಸಿದರು.

ಐದು ದಶಕಗಳ ವರೆಗೆ ಗುರುಮಠಕಲ್ ಕ್ಷೇತ್ರದಿಂದ ನಿರಂತರ ಆಯ್ಕೆಯಾಗುತ್ತ ಸೋಲಿಲ್ಲದ ಸರದಾರ ಎಂಬ ಹೆಗ್ಗಳಿಕೆಯೊಂದಿಗೆ ಪ್ರತಿ ಬಾರಿ ರಾಜ್ಯ ಮತ್ತು ಕೇಂದ್ರದಲ್ಲಿ ಮಂತ್ರಿಗಿರಿ ಅನುಭವಿಸುತ್ತ ಬಂದಿದ್ದರೂ, ರಾಜ್ಯದಲ್ಲಿ ಅತ್ಯಧಿಕ ವಲಸೆ ಹೋಗುವ ಕಾರ್ಮಿಕರು ಗುರುಮಠಕಲ್ ಕ್ಷೇತ್ರದವರಾಗಿದ್ದಾರೆ. ಅಲ್ಲಿ ನೀರಾವರಿ ಇಲ್ಲ, ಕುಡಿಯುವ ನೀರಿಲ್ಲ, ಕಯಗಾರಿಕೆ ಇಲ್ಲ, ಉದ್ಯೋಗ ಇಲ್ಲ. ರಸ್ತೆಗಳಿಲ್ಲ, ಶಾಲಾ ಕಾಲೇಜುಗಳಿಲ್ಲ. ಇದು ಮಲ್ಲಿಕಾರ್ಜುನ ಖರ್ಗೆ ಅವರು ಮಾಡಿರುವ ಸಾಧನೆ. ಇವರ ಜೀವನದ ಅತಿ ದೊಡ್ಡ ಸಾಧನೆ ಎಂದರೆ ಕಾಂಗ್ರೆಸ್ ಅಧಿನಾಯಕಿ ಸೋನಿಯಾ ಗಾಂಧಿ ಮತ್ತು ರಾಹುಲ್ ಗಾಂಧಿ ಅವರ ಗುಲಾಮಗಿರಿ. ಯಾವ ಅಂಬೇಡ್ಕರ್ ದಲಿತರಿಗೆ ಸ್ವಾಭಿಮಾನದ ಬದುಕು ನಿಡಲು ತಮ್ಮ ಜೀವನವನ್ನೇ ಸವೆಸಿದರೋ ಅದೇ ಅಂಬೇಡ್ಕರ್ ಹೆಸರಿನಲ್ಲಿ ರಾಜಕೀಯ ಮಾಡುತ್ತ ಬಂದವರು, ಅಧಿಕಾರದ ದುರಾಸೆಯಿಂದ ತಮ್ಮನ್ನು ತಾವು ಗಾಂಧಿ ಕುಟುಂಬಕ್ಕೆ ಅಡವಿಟ್ಟು ದಲಿತ ಸಮುದಾಯ ತಲೆತಗ್ಗಿಸುವಂತೆ ಮಾಡಿದ್ದಾರೆ ಎಂದು ಆರೋಪಿಸಿದರು.



ಬೆಂಗಳೂರಿನ ನೈಸ್ (NICE) ರಸ್ತೆಯಲ್ಲಿರುವ ಕನಕಪುರ ರಸ್ತೆ ಟೋಲ್ ಪ್ಲಾಜಾ ಬಳಿ, ಭಾನುವಾರ ರಾಸಾಯನಿಕ ಟ್ಯಾಂಕರ್ ಒಂದರ ಪಲ್ಟಿಯಾದ ನಂತರ ಭಾರೀ ಅಗ್ನಿ ಅವಘಡ ಸಂಭವಿಸಿದೆ. ಬೆಂಗಳೂರಿನಿಂದ ಚೆನ್ನೈಗೆ ತೆರಳುತ್ತಿದ್ದ, ರಾಸಾಯನಿಕ ದ್ರಾವಕವನ್ನು (chemical solvent) ಸಾಗಿಸುತ್ತಿದ್ದ ಟ್ರಕ್‌ಗೆ ಬೆಂಕಿ ಹೊತ್ತಿಕೊಂಡಿದ್ದರಿಂದ, ಹಲವು ಗಂಟೆಗಳ ಕಾಲ ವಾಹನ ಸಂಚಾರ ಸಂಪೂರ್ಣವಾಗಿ ಸ್ಥಗಿತಗೊಂಡಿತು.

# ರಾಜಕಾರಣದಲ್ಲಿ ಧರ್ಮ ಉಳಿಯಲು ಧಾರ್ಮಿಕ ಗುರುಗಳ ಆಶೀರ್ವಾದ ಅಗತ್ಯ: ನೊಣವಿನಕೆರೆಶ್ರೀ



**ಚಿಕ್ಕಬಳ್ಳಾಪುರ, ಅ. 17:** ಧರ್ಮದಲ್ಲಿ ರಾಜಕಾರಣ ಬೆರೆಯಬಾರದು. ಆದರೆ ರಾಜಕಾರಣದಲ್ಲಿ ಧರ್ಮ ಮತ್ತು ಮೌಲ್ಯಗಳು ಉಳಿಯುವಂತಾಗಲು ಧಾರ್ಮಿಕ ಗುರುಗಳು ರಾಜಕಾರಣಿಗಳಿಗೆ ಆಶೀರ್ವಾದ ನೀಡಿ, ಮಾರ್ಗದರ್ಶನ ಮಾಡಬೇಕು ಎಂದು ನೊಣವಿನಕೆರೆಯ ಕಾಡಸಿದ್ದೇಶ್ವರ ಮಠದ ಕರಿವೃಷಭ ದೇಶಿಕೇಂದ್ರ ಶಿವಯೋಗೀಶ್ವರ ಸ್ವಾಮೀಜಿ ಹೇಳಿದರು. ಮುದ್ದೇನಹಳ್ಳಿಯ ಸತ್ಯಸಾಯಿ ಗ್ರಾಮದಲ್ಲಿ ನಡೆಯುತ್ತಿರುವ ನವರಾತ್ರಿ ಉತ್ಸವದ ಏಳನೇ ದಿನದ ಕಾರ್ಯಕ್ರಮದಲ್ಲಿ ಮಾತನಾಡಿದ ಶ್ರೀಗಳು, ರಾಜಕೀಯದಲ್ಲಿ ಧರ್ಮ ಉಳಿಯಬೇಕು ಎಂಬುದು ಭಗವಾನ್ ಸತ್ಯ ಸಾಯಿಬಾಬಾ ಅವರ ಆಶಯವಾಗಿತ್ತು. ಅದೇ ಮಾರ್ಗದಲ್ಲಿ ಸದ್ಗುರು ಮಧುಸೂದನ ಸಾಯಿ ಮುನ್ನಡೆಯುತ್ತಿದ್ದಾರೆ ಎಂದರು.

'ರಾಜಾ ಪ್ರತ್ಯಕ್ಷ ದೇವತಾ' ಎಂಬ ಮಾತಿನಂತೆ, ಜನಪ್ರತಿನಿಧಿಗಳು ಉತ್ತಮ ಕಾರ್ಯಗಳನ್ನು ಕೈಗೊಳ್ಳಲು ಅವರಿಗೆ ಶಕ್ತಿ ತುಂಬುವ ಕೆಲಸ ವಾಗಬೇಕು. ಈ ನಿಟ್ಟಿನಲ್ಲಿ ಧಾರ್ಮಿಕ ಗುರುಗಳಾದ ನಾವೆಲ್ಲರೂ ರಾಜಕಾರಣಿಗಳಿಗೆ ಪ್ರೇರಣೆ ಮತ್ತು ಆಶೀರ್ವಾದ ನೀಡಬೇಕು ಎಂದು ಅಭಿಪ್ರಾಯಪಟ್ಟರು. ನವರಾತ್ರಿಯ ಏಳನೇ ದಿನದ ಕಾಳರಾತ್ರಿ ಆರಾಧನೆಯ ಮಹತ್ವವನ್ನು ವಿವರಿಸಿದ ಅವರು, ಮಹಿಳೆ ಹಲವು ಅವತಾರಗಳನ್ನು ತಾಳಬಲ್ಲಳು. ಗುರುವಿಗೂ ಗುರು, ಪರಮ ಗುರುವೆಂದರೆ ತಾಯಿ. ರೈತರ ಬದುಕು ಹಾಗೂ ಸಮಾಜದ ಜೀವನಮಟ್ಟವನ್ನು ಬದಲಿಸುವ ಉದ್ದೇಶದಿಂದ ಸೇವಾ ಕಾರ್ಯಗಳಲ್ಲಿ ತೊಡಗಿರುವ ಸದ್ಗುರು ಮಧುಸೂದನ ಸಾಯಿ ಅವರ ಕಾರ್ಯ ಶ್ಲಾಘನೀಯ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ವಿಧಾನ ಪರಿಷತ್ ಸದಸ್ಯೆ ಹಾಗೂ ಎಐಸಿಸಿ ವಿದೇಶಾಂಗ ವ್ಯವಹಾರಗಳ ಸಮಿತಿಯ ಉಪಾಧ್ಯಕ್ಷೆ ಆರತಿ ಕೃಷ್ಣ ಮಾತನಾಡಿ, ಒನ್ ವರ್ಲ್ಡ್ ಒನ್ ಫ್ಯಾಮಿಲಿ ಮಿಷನ್ ವಿದೇಶಗಳಲ್ಲಿ ಯಾವುದೇ ಯೋಜನೆಗಳನ್ನು ಕೈಗೆತ್ತಿಕೊಂಡರೂ ಅಗತ್ಯ ಸಹಕಾರ ನೀಡಲು ಸಿದ್ಧವಿರುವುದಾಗಿ ಭರವಸೆ ನೀಡಿದರು.

ಕತ್ತಲೆ ನಿವಾರಿಸುವ ಕಾಳರಾತ್ರಿ

ನವರಾತ್ರಿಯ ಒಂಬತ್ತು ದಿನಗಳಲ್ಲಿ ದೇವಿಯ ವಿವಿಧ ಸ್ವರೂಪಗಳನ್ನು ಆರಾಧಿಸುವ ಸಂಪ್ರದಾಯದ ಮಹತ್ವವನ್ನು ವಿವರಿಸಿದ ಒನ್ ವರ್ಲ್ಡ್ ಒನ್ ಫ್ಯಾಮಿಲಿ ಮಿಷನ್ ಸಂಸ್ಥಾಪಕ ಸದ್ಗುರು ಶ್ರೀ ಮಧುಸೂದನ ಸಾಯಿ, ಮನುಷ್ಯನ ಬದುಕಿನ ಅಂಧಕಾರವನ್ನು ನಿವಾರಿಸುವ ಶಕ್ತಿ ಕಾಳರಾತ್ರಿ ದೇವಿಗಿದೆ ಎಂದು ಹೇಳಿದರು.

ಕತ್ತಲಿನಲ್ಲಿ ಭಯಗೊಂಡ ಮಗು ತಾಯಿಯನ್ನು ನೆನೆದು 'ಅಮ್ಮ' ಎಂದು ಕರೆಯುವಂತೆ, ಮನುಷ್ಯರೂ ತಮ್ಮೊಳಗಿನ ಅಜ್ಞಾನ ಮತ್ತು ಅಂಧಕಾರವನ್ನು ನಿವಾರಿಸಿಕೊಳ್ಳಲು ಜಗನ್ಮಾತೆಯ ಮೊರೆ ಹೋಗಬೇಕು ಎಂದರು.

ತನ್ನ ಮಕ್ಕಳ ಕತ್ತಲೆಯನ್ನು ದೂರಮಾಡಲು ತಾಯಿ ಕಾಳರಾತ್ರಿ ನಿದ್ರೆಯನ್ನೂ ತ್ಯಜಿಸಿ, ಅವರ ಸಂಕಷ್ಟಗಳನ್ನು ನಿವಾರಿಸಲು ಶ್ರಮಿಸುವ ತಾಯಿಯ ತ್ಯಾಗ ಮತ್ತು ಕಾಳಜಿಯನ್ನು ದೇವಿಯ ಸ್ವರೂಪದಲ್ಲಿ ಕಾಣಬಹುದು ಎಂದು ವಿವರಿಸಿದರು.

ಅವಧೂತ ವಿನಯ್ ಗುರೂಜಿ ಮಾತನಾಡಿ, ನಾನು ಗುರುವಲ್ಲ; ಸದ್ಗುರುಗಳ ಸಪ್ಲಿಮೆಂಟರಿ ವಿದ್ಯಾರ್ಥಿ. ಹೊರಗಿದ್ದರೂ ಇಲ್ಲಿಗೆ ವಿದ್ಯಾರ್ಥಿಯಾಗಿಯೇ ಬರುತ್ತೇನೆ ಎಂದು ಹೇಳಿದರು. ಮುದ್ದೇನಹಳ್ಳಿಯಲ್ಲಿ ಕರುಣೆ ಮತ್ತು ಪಾರದರ್ಶಕತೆ ನೆಲೆಸಿವೆ. ಮಾನವೀಯತೆ ಮತ್ತು ದೈವತ್ವದ ಸಂಗಮವಾಗಿದೆ. ಜೀವನದ ಉದ್ದೇಶವನ್ನು ಕಲಿಸುವ ಸಂಸ್ಥೆ ಸತ್ಯಸಾಯಿ ಸಂಸ್ಥೆ ಎಂದು ಬಣ್ಣಿಸಿದರು. ಇಲ್ಲಿ ಇಂತಹ ಕಾರ್ಯಕ್ರಮಗಳನ್ನು ಆಯೋಜಿಸುವ ಮೂಲಕ ಎರಡು ರೀತಿಯ ತರಬೇತಿಗಳನ್ನು ನೀಡಲಾಗುತ್ತಿದೆ.

ರಾಜಕಾರಣಿಗಳಿಗೆ ಉತ್ತಮ ಆಡಳಿತದ ಮಾರ್ಗದರ್ಶನ ನೀಡಿದರೆ, ಸನ್ಯಾಸಿಗಳಿಗೆ ಶಿಸ್ತು ಮತ್ತು ಸಂಯಮದ ಪಾಠ ಕಲಿಸಲಾಗುತ್ತಿದೆ ಎಂದು ತಿಳಿಸಿದರು.

ಪುಟ್ಟಪರ್ತಿಯಲ್ಲಿ ಹಿಂದಿನ ಅವತಾರದಲ್ಲಿ ಸ್ವಾಮಿ ಮ್ಯಾಜಿಕ್ ಮಾಡುತ್ತಿದ್ದರೆ, ಈ ಜನ್ಮದಲ್ಲಿ ಮುದ್ದೇನಹಳ್ಳಿಯಲ್ಲಿ ಲಾಜಿಕ್ ಮೂಲಕ ಕಾರ್ಯಸಾಧನೆ ಮಾಡುತ್ತಿದ್ದಾರೆ. ಅಪಾರ ದೂರದೃಷ್ಟಿಯೊಂದಿಗೆ ಜ್ಞಾನವನ್ನು ಪಸರಿಸುವ ಕೆಲಸ ಮಾಡುತ್ತಿದ್ದಾರೆ ಎಂದು ಸದ್ಗುರು ಮಧುಸೂದನ ಸಾಯಿ ಅವರ ಕಾರ್ಯವನ್ನು ಶ್ಲಾಘಿಸಿದರು.



# ಕಬ್ಬು ಬೆಳೆಗೆ ಎಂಎಸ್‌ಪಿ ನೀಡಿ– ಎ.ಐ.ಕೆ.ಕೆ.ಎಂ.ಎಸ್ ಆಗ್ರಹ




ಬಳ್ಳಾರಿ, ಅ.18. ಕಲ್ಯಾಣ ಕರ್ನಾಟಕ ಹಾಗೂ ಕಿತ್ತೂರು ಕರ್ನಾಟಕ ಭಾಗದಲ್ಲಿ ಕಳೆದ ಕೆಲವು ದಿನಗಳಿಂದ ಕಬ್ಬಿನ ಬೆಂಬಲ ಬೆಲೆಗಾಗಿ ನಡೆಯುತ್ತಿರುವ ರೈತರ ಬೃಹತ್ ಹೋರಾಟವನ್ನು ಎಐಕೆಕೆ ಎಮ್‌ಎಸ್ ಬಳ್ಳಾರಿ ಜಿಲ್ಲಾ ಸಮಿತಿಯು ಬೆಂಬಲಿಸುತ್ತದೆ ಎಂದು ಸಂಘದ ಜಿಲ್ಲಾ ಕಾರ್ಯದರ್ಶಿ ಗುರಳ್ಳಿ ರಾಜ ತಿಳಿಸಿದ್ದಾರೆ.

ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು ಪ್ರತಿ ಟನ್ ಕಬ್ಬಿಗೆ ಕನಿಷ್ಠ ಬೆಂಬಲ ಬೆಲೆ ನಿಗದಿ ಮಾಡಬೇಕು ಎಂಬ ಬೇಡಿಕೆ ನ್ಯಾಯ ಸಮ್ಮತವಾಗಿದ್ದು ಕೇಂದ್ರ ಹಾಗೂ ರಾಜ್ಯ ಸರಕಾರಗಳು ಕೂಡಲೇ ಈ ಬೇಡಿಕೆಯನ್ನು ಈಡೇರಿಸಬೇಕೆಂದು ಎಐಕೆಕೆಎಮ್‌ಎಸ್ ಅಗ್ರಹಿಸುತ್ತದೆ.

ಕೃಷಿ ಒಳಸುರಿಗಳಾದ ಬೀಜ, ಗೊಬ್ಬರ, ಕೀಟನಾಶಕ, ಉಪಕರಣಗಳು ಇತ್ತಾದಿ ಬೆಲೆಗಳು ಗಗನಮುಟ್ಟಿರುವಾಗ ಕಬ್ಬಿನ ಬೆಲೆಮಾತ್ರ ಓಬೇರಾಯನ ಕಾಲದಿಂದ ಹಾಗೇ ಉಳಿದಿದೆ ಈಗಾಗಿ ರೈತರು ದಿನೇ ದಿನೇ ಬೀದಿಪಾಲಾಗುತಿದ್ದಾರೆ. ಒಂದಡೆ ತೀವ್ರ ಬರ ಇನ್ನೊಂದಡೆ ಬೆಲೆ ಕುಸಿತದಿಂದಾಗಿ ರೈತರು ಕಂಗಾಲಾಗಿದ್ದಾರೆ.

ಇಂತಹ ಸಂದರ್ಭದಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಒಬ್ಬರ ಮೇಲೊಬ್ಬರು ಗೂಬೆಕೂಡಿಸುವುದನ್ನು ಮತ್ತು ಮೊಸಳೆ ಕಣ್ಣೀರು ಸುರಿಸುವುದನ್ನು ಬಿಟ್ಟು ಕಂಗೆಟ್ಟ ರೈತರ ಸಹಾಯಕ್ಕೆ ದಾವಿಸಬೇಕೆಂದು ಎಐಕೆಕೆಎಮ್‌ಎಸ್ ಒತ್ತಾಯಿಸುತ್ತದೆ. ಹೋರಾಟ ನಿರತ ರೈತರು ಯಾವುದೇ ಕಾರಣಕ್ಕೂ ಸಂದಾನಮಾಡಿಕೊಳ್ಳದೆ ಸಂದಾನಾತೀತವಾಗಿ ಒಗ್ಗಟ್ಟಿನಿಂದ ಬೇಡಿಕೆ ಈಡೇರುವವರೆಗೆ ಹೋರಾಟವನ್ನು ಮುಂದುವರಿಸಬೇಕೆಂದು ಎಐಕೆಕೆಎಮ್‌ಎಸ್ ಕರೆ ನೀಡುತ್ತದೆ ಎಂದು ತಿಳಿಸಿದ್ದಾರೆ.

# ಸಿಜೆಪಿಗೆ ಹಣಕಾಸಿನ ನೆರವು ನೀಡಿ ದೇಶದಲ್ಲಿ ಅರಾಜಕತೆ ಸೃಷ್ಟಿಗೆ ಸಂಚು

**ಸತತ ಸೋಲಿನಿಂದ ರಾಹುಲ್‌ಗಾಂಧಿ ಹತಾಶರಾಗಿದ್ದಾರೆ: ಬಿ.ವೈ. ವಿಜಯೇಂದ್ರ ಆರೋಪ**



ಹುಬ್ಬಳ್ಳಿ, ಅ.18: ಸತತ ಸೋಲುಗಳಿಂದ ರಾಹುಲ್ ಗಾಂಧಿ ಹತಾಶರಾಗಿದ್ದಾರೆ, ಹೀಗಾಗಿ ಸಿಜೆಪಿಗೆ ಹಣಕಾಸಿನ ನೆರವು ನೀಡಿ ಅರಾಜಕತೆ ಸೃಷ್ಟಿ ಮಾಡುತ್ತಿದ್ದಾರೆ. ಕಾಂಗ್ರೆಸ್ ಮತ್ತು ರಾಹುಲ್ ಗಾಂಧಿ ಮೇಲೆ ದೇಶದ ಜನ ವಿಶ್ವಾಸ ಕಳೆದ ುಕೊಂಡಿದ್ದಾರೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ತಿಳಿಸಿದರು. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ದೇಶದ್ರೋಹಿಗಳಿಗೆ ಹಣಕಾಸಿನ ನೆರವು ನೀಡುವುದು ಕಾಂಗ್ರೆಸ್‌ಗೆ ಇದೇನು ಹೊಸದಲ್ಲ. ದೆಹಲಿಯಲ್ಲಿ ಕಾಂಗ್ರೆಸ್ ಇದನ್ನೆ ಮಾಡುತ್ತಿದೆ. ರಾಜ್ಯದ ಮುಖ್ಯಮಂತ್ರಿ ದೆಹಲಿ ಹೋರಾಟಕ್ಕೆ ಹೋಗಿ ತಮ್ಮ ಮರ್ಯಾದೆ ಕಳೆದುಕೊಂಡ ಬಂದಿದ್ದಾರೆ ಎಂದರು.

ಕಬ್ಬು ಬೆಳೆಗಾರರ ಹೋರಾಟ ವಿಚಾರಕ್ಕೆ ಸಂಬಂಧಿಸಿದಂತೆ ಪ್ರತಿಕ್ರಿಯಿಸಿದ ವಿಜಯೇಂದ್ರ, ನಾನು ಹೋಗುತ್ತಿಲ್ಲ ಎಂದರೆ ಬೆಂಬಲ ನೀಡುತ್ತಿಲ್ಲ ಅಂದೇನಲ್ಲ. ಪ್ರಧಾನಿ ನರೇಂದ್ರ ಮೋದಿ ಸರಕಾರವು ರೈತರ ಪರವಿದೆ. ಈ ಹಿಂದೆ ಸಕ್ಕರೆ ಕಾರ್ಖಾನೆಗಳು ಬೆಳೆಗಾರರ ಮೇಲೆ ಸವಾರಿ ಮಾಡುತ್ತಿದ್ದವು. ಅವುಗಳಿಗೆ ಮೋದಿ ಸರ್ಕಾರ ಬ್ರೇಕ್ ಹಾಕಿದೆ. ಎಥೆನಾಲ್ ಪಾಲಿಸಿ ತಂದು ಕಾರ್ಖಾನೆ ಮತ್ತು ರೈತರಿಗೆ ಅನಕೂಲ ಮಾಡಿದೆ. ಈಗಾಗಲೇ ಕೇಂದ್ರ ಸಮಿತಿ ರಚನೆ ಮಾಡಿದೆ. ರೈತರು ಹೋರಾಟ ಮಾಡುವುದು ತಪ್ಪು ಅಲ್ಲ. ಹೋರಾಟದಲ್ಲಿ ತೇಜೋವಧೆ ಮಾಡುವುದು, ವೈಯಕ್ತಿಕ ಟೀಕೆ ಸರಿಯಲ್ಲಾ ಎಂದರು.

ಮುಖ್ಯಮಂತ್ರಿಗಳು ತಮ್ಮ ನಿಮ್ಮ ರಿಯಲ್ ಎಸ್ಟೇಟ್ ಬುದ್ದಿ ಬಿಟ್ಟು ರೈತರ ನೆರವಿಗೆ ಬರಬೇಕು. ಹೆಲಿಕಾಪ್ಟರ್‌ನಲ್ಲಿ ಬಂದು ಹೋದರೆ ಪ್ರಯೋಜನವಿಲ್ಲ. ಬೇರೆ ರಾಜ್ಯಗಳಲ್ಲಿ ಎಸ್‌ಎಪಿ ನೀಡಿವೆ. ರಾಜ್ಯ ಸರ್ಕಾರಕ್ಕೆ ಕಾರ್ಖಾನೆಗಳಿಂದ ಸಾವಿರಾರು ಕೋಟಿ ಆಧಾಯ ಬರುತ್ತಿದೆ. ಈ ನಿಟ್ಟಿನಲ್ಲಿ ರಾಜ್ಯ ಸರ್ಕಾರ ಎಸ್‌ಎಪಿ ನೀಡಬೇಕು. ರೈತರಿಗೆ ಎರಡುವರೆ ಸಾವಿರ ಘೋಷಣೆ ಮಾಡಿರುವುದು ನಿವೇನು ಭಿಕ್ಷೆ ಹಾಕ್ತಿದ್ದೀರಾ ಎಂದು ವಾಗ್ದಾಳಿ ನಡೆಸಿದರು.

# ಆಯತಪ್ಪಿ ಉರುಳಿಬಿದ್ದ ಈರುಳ್ಳಿ ಲಾರಿ: ಚಾಲಕ–ಕ್ಲೀನರ್ ರಕ್ತದ ಮಡುವಿನಲ್ಲಿದ್ದರೂ ಈರುಳ್ಳಿ ಕೊಳ್ಳೆಹೊಡೆದ ಸ್ಥಳೀಯರು!



ರಾಯಚೂರು, ಅ. 18: ಸಂಕಷ್ಟದಲ್ಲಿ ಸಿಲುಕಿರುವವರಿಗೆ ಸಹಾಯ ಹಸ್ತ ಚಾಚುವುದೇ ನಿಜವಾದ ಮಾನವೀಯತೆ. ಆದರೆ, ಜಿಲ್ಲೆಯಲ್ಲಿ ನಡೆದಿರುವ ನಾಚಿಕೆಗೇಡಿನ ಘಟನೆಯು ನಾಗರಿಕ ಸಮಾಜ ತಲೆತಗ್ಗಿಸುವಂತೆ ಮಾಡಿದೆ.

ರಸ್ತೆ ಅಪಘಾತದಲ್ಲಿ ಗಾಯಗೊಂಡು ರಕ್ತದ ಮಡುವಿನಲ್ಲಿ ನರಳುತ್ತಿದ್ದವರನ್ನು ರಕ್ಷಿಸಬೇಕಿದ್ದ ಸ್ಥಳೀಯರು, ಪ್ರಾಣಾಪಾಯದಿಂದ ನರಳುತ್ತಿದ್ದವರನ್ನು ಕ್ಯಾರೆ ಎನ್ನದೆ ಲಾರಿಯಲ್ಲಿದ್ದ ಈರುಳ್ಳಿ ಚೀಲಗಳನ್ನು ಕೊಳ್ಳೆಹೊಡೆದಿರುವ ಘಟನೆ ನಡೆದಿದೆ.

ರಾಯಚೂರು ಜಿಲ್ಲೆಯ ಮಾನ್ವಿ ತಾಲೂಕಿಗೆ ಒಳಪಡುವ ಕಪಗಲ್ ಗ್ರಾಮದ ಬಳಿಯ ರಸ್ತೆ ತಿರುವಿನಲ್ಲಿ ಈ ಭೀಕರ ಅವಘಡ ಸಂಭವಿಸಿದೆ. ಟನ್ ಗಟ್ಟಲೆ ಈರುಳ್ಳಿಯನ್ನು ತುಂಬಿಕೊಂಡು ತೆರಳುತ್ತಿದ್ದ ಲಾರಿಯೊಂದು ಚಾಲಕನ ನಿಯಂತ್ರಣ ತಪ್ಪಿ ರಸ್ತೆ ಬದಿಯ ಆಳವಾದ ಗುಂಡಿಗೆ ಉರುಳಿಬಿದ್ದಿದೆ. ಈ ಅಪಘಾತದ ತೀವ್ರತೆಗೆ ಲಾರಿಯಲ್ಲಿದ್ದ ಚಾಲಕ ಹಾಗೂ ಕ್ಲೀನರ್ ಇಬ್ಬರೂ ತೀವ್ರವಾಗಿ ಗಾಯಗೊಂಡು ಅಸಹಾಯಕರಾಗಿ ನರಳಾಡುತ್ತಿದ್ದರು. ಲಾರಿ ಪಲ್ಟಿಯಾದ ದೊಡ್ಡ ಶಬ್ದ ಕೇಳುತ್ತಿದ್ದಂತೆ ಸುತ್ತಮುತ್ತಲಿನ ಗ್ರಾಮಸ್ಥರು ಹಾಗೂ ದಾರಿಹೋಕರು ಓಡೋಡಿ ಬಂದು ಸ್ಥಳದಲ್ಲಿ ಜಮಾಯಿಸಿದ್ದಾರೆ. ಸ್ಥಳಕ್ಕೆ ಬಂದ ಜನರಿಗೆ ರಕ್ತಸಿಕ್ತರಾಗಿ ಬಿದ್ದಿದ್ದ ಗಾಯಾಳುಗಳ ಯೋಗಕ್ಷೇಮ ವಿಚಾರಿಸುವುದಾಗಲಿ ಅಥವಾ ಆಸ್ಪತ್ರೆಗೆ ಸೇರಿಸಲು ಸಹಾಯ ಮಾಡುವುದಾಗಲಿ ಅವರ ಬಗ್ಗೆ ಒಂದಿನಿತೂ ಕನಿಕರ ತೋರದೇ, ಲಾರಿ ಬಿದ್ದ ರಭಸಕ್ಕೆ ಚೆಲ್ಲಾಪಿಲ್ಲಿಯಾಗಿದ್ದ ಹಾಗೂ ಲಾರಿಯಲ್ಲಿದ್ದ ಈರುಳ್ಳಿಯನ್ನು ಕಂಡು ಅವರ ಮನಸ್ಥಿತಿ ಬದಲಾಯಿತು. ಮಾನವೀಯ ಮೌಲ್ಯಗಳನ್ನು ಗಾಳಿಗೆ ತೂರಿದ ಜನತೆ, ಪ್ರಾಣ ಉಳಿಸಿಕೊಳ್ಳಲು ಒದ್ದಾಡುತ್ತಿದ್ದವರ ನರಳಾಟವನ್ನು ಕಡೆಗಣಿಸಿ, ಮುಕ್ತವಾಗಿ ದೊರೆತ ಈರುಳ್ಳಿ ಚೀಲಗಳನ್ನು ಕೊಳ್ಳೆಹೊಡೆಯಲು ಮುಗಿಬಿದ್ದರು.

ಜನರ ಈ ದುರಾಶೆ ಎಷ್ಟರ ಮಟ್ಟಿಗೆ ಇತ್ತೆಂದರೆ, ಲಾರಿ ಅಪಘಾತಕ್ಕೀಡಾಗಿ ಕೆಲವೇ ನಿಮಿಷಗಳು ಕಳೆದಿದ್ದರೂ ಸ್ಥಳದಲ್ಲಿದ್ದ ಜನರೆಲ್ಲರೂ ಸೇರಿ ಲಾರಿಯಲ್ಲಿದ್ದ ಸಂಪೂರ್ಣ ಸರಕನ್ನು ಖಾಲಿ ಮಾಡಿದರು. ಬೈಕ್‌ಗಳು, ಸೈಕಲ್‌ಗಳು ಹಾಗೂ ಸಿಕ್ಕ ಸಿಕ್ಕ ವಾಹನಗಳಲ್ಲಿ ಹಾಗೂ ಕೈಗೆ ಸಿಕ್ಕಷ್ಟು ಚೀಲಗಳಲ್ಲಿ ಈರುಳ್ಳಿಯನ್ನು ತುಂಬಿಕೊಂಡು ಪರಾರಿಯಾದರು. ಕೇವಲ 15 ರಿಂದ 20 ನಿಮಿಷಗಳ ಅಂತರದಲ್ಲಿ ಬೃಹತ್ ಲಾರಿಯಲ್ಲಿದ್ದ ನೂರಾರು ಕೆಜಿ ಈರುಳ್ಳಿಯೂ ಮಾಯವಾಯಿತು. ಗಾಯಾಳುಗಳು ನೋವಿನಿಂದ ನರಳುತ್ತಿದ್ದರೂ ಕನಿಷ್ಠ ಮಾನವೀಯತೆ ತೋರದೆ ಈ ರೀತಿ ವರ್ತಿಸಿರುವುದು ಸಾರ್ವಜನಿಕ ವಲಯದಲ್ಲಿ ತೀವ್ರ ಆಕ್ರೋಶಕ್ಕೆ ಕಾರಣ ವಾಗಿದೆ.

## ಹೋರಾಟ ಅಂಕುಶಕ್ಕೆ ರೈತರ ಆಕ್ರೋಶ: ಸಡ್ಡು ಹೊಡೆದು ಪ್ರತಿಭಟನೆ

# ಟನ್ ಕಬ್ಬಿಗೆ 5,500 ನೀಡಲು ಆಗ್ರಹ: ರೈತರಿಂದ ಕಲಬುರ್ಗಿಯ ರಾಮಮಂದಿರ ಸರ್ಕಲ್ ಬಂದ್



**ಕಲಬುರಗಿ, ಅ. 18:** ಪ್ರತಿ ಟನ್ ಕಬ್ಬಿಗೆ 5,500 ಬೆಂಬಲ ಬೆಲೆ ನಿಗದಿಪಡಿಸುವುದು ಸೇರಿದಂತೆ ವಿವಿಧ ಬೇಡಿಕೆಗಳಿಗೆ ಆಗ್ರಹಿಸಿ, ನಗರದ ರಾಮ ಮಂದಿರ ವೃತ್ತದಲ್ಲಿ ಕಳೆದ 5 ದಿನಗಳಿಂದ ವೃತ್ತ ಸಂಪೂರ್ಣ ಬಂದ್ ಮಾಡಿ ಪ್ರತಿಭಟನೆ ನಡೆಸುತ್ತಿದ್ದ ರೈತರ ಹೋರಾಟ ಸ್ಥಳ ಸ್ವಲ್ಪ ಬದಲಿಸುವ ನಿಟ್ಟಿನಲ್ಲಿ ಪೊಲೀಸರ ಅಂಕುಶಕ್ಕೆ ರೈತರು ತಿರುಗೇಟು ನೀಡುವ ನಿಟ್ಟಿನಲ್ಲಿ ಮತ್ತೊಂದು ಟೆಂಟ್ ಹೊಡೆದು ಹೋರಾಟ ತೀವ್ರಗೊಳಿಸಿದ್ದಾರೆ.

ಶುಕ್ರವಾರ ಸಂಜೆ ಪ್ರತಿಭಟನಾ ನಿರತ ರೈತ ಮುಖಂಡರನ್ನು ಬಂಧಿಸಿ ವೃತ್ತದ ಒಂದೇಡೆ ಮಾತ್ರ ಪ್ರತಿಭಟನೆ ನಡೆಸಿ ವೃತ್ತ ಮುಕ್ತ ಸಂಚಾರಕ್ಕೆ ಅವಕಾಶ ಮಾಡಿಕೊಡುವಂತೆ ಪೊಲೀಸರು ರೈತರ ಮನವೊಲಿಸದೇ ದಬ್ಬಾಳಿಕೆಯಿಂದ ರೈತರನ್ನು ಬಂಧಿಸಿದ್ದರಿಂದ ಪೊಲೀಸರ ಈ ಕ್ರಮಕ್ಕೆ ತೀವ್ರ ಆಕ್ರೋಶ ವ್ಯಕ್ತಪಡಿಸಿದ ರೈತರು, ಹೋರಾಟವನ್ನು ಹತ್ತಿಕ್ಕುವ ಪ್ರಯತ್ನಕ್ಕೆ ಮಣಿಯುವುದಿಲ್ಲ ಎಂದು ಎಂದು ಪಟ್ಟು ಹಿಡಿದು ಮತ್ತೆ ರಾಮಮಂದಿರ ವೃತ್ತ ಬಂದ್ ಮಾಡುವ ಮೂಲಕ ಹೋರಾಟ ತೀವ್ರಗೊಳಿಸಿದ್ದಾರೆ.

ಪೊಲೀಸರು ಟೆಂಟ್ ತೆರವುಗೊಳಿಸಿ ರೈತರನ್ನು ವಶಕ್ಕೆ ಪಡೆದ ಬಳಿಕವೂ ಕೆಲ ರೈತರು ರಸ್ತೆಯ ಪಕ್ಕದಲ್ಲಿ ಮತ್ತೆ ಟೆಂಟ್ ಹಾಕಿ ರಾತ್ರಿಯಿಡೀ ಧರಣಿ ಮುಂದುವರಿಸಿದರು. ಇಂದು ಬೆಳಗ್ಗೆಯೂ ಜೇವರ್ಗಿ ರಸ್ತೆಯಲ್ಲಿ 15ಕ್ಕೂ ಹೆಚ್ಚು ಟ್ರಾಕ್ಟರ್‌ಗಳನ್ನು ತಂದು ಜಮಾಯಿಸಿದ ರೈತರು, ತಮ್ಮ ಹೋರಾಟವನ್ನು ಮುಂದುವರಿಸಿದರು.

ಮಧ್ಯಾಹ್ನದ ವೇಳೆಗೆ ನೂರಾರು ರೈತರು ಸ್ಥಳದಲ್ಲಿ ಜಮಾಯಿಸಿ ಮತ್ತೆ ಹೆದ್ದಾರಿ ತಡೆದು ಪ್ರತಿಭಟನೆ ನಡೆಸಿದರು. ರಸ್ತೆಯ ಪಕ್ಕಕ್ಕೆ ಸ್ಥಳಾಂತರಿಸಿದ್ದ ಟೆಂಟ್ ಮತ್ತೆ ರಸ್ತೆಯ ಮಧ್ಯಭಾಗದಲ್ಲಿ ಸ್ಥಾಪಿಸಿ ಧರಣಿ ಆರಂಭಿಸಿದರು. ಈ ಮೂಲಕ ಪೊಲೀಸರ ಕ್ರಮಕ್ಕೆ ಜಗ್ಗದೆ ಬೇಡಿಕೆ ಈಡೇರುವವರೆಗೂ ಹೋರಾಟದಿಂದ ಹಿಂದೆ ಸರಿಯುವುದಿಲ್ಲ ಎಂದು ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರಲ್ಲದೇ ಪೊಲೀಸರ ಕ್ರಮಕ್ಕೆ ಜಗ್ಗುವುದಿಲ್ಲ ಎಂಬ ಸಂದೇಶವನ್ನು ರೈತರು ರವಾನಿಸಿದರು. ಪ್ರಮುಖವಾಗಿ ರಸ್ತೆಯ ಪಕ್ಕದಲ್ಲೇ ಅಡುಗೆ ಮಾಡಿ ಪ್ರತಿಭಟನೆ ಮುಂದುವರೆಸಿದ್ದಾರೆ.

ಕರ್ನಾಟಕ ರಾಜ್ಯ ರೈತಸಂಘ ಹಾಗೂ ಹಸಿರು ಸೇನೆಯ ಜಿಲ್ಲಾ ಕಾರ್ಯಾಧ್ಯಕ್ಷ ಸಿದ್ದರಾಮ ದನ್ನೂರ್ ನೇತೃತ್ವದಲ್ಲಿ ನಡೆದ ಪ್ರತಿಭಟನೆಯಲ್ಲಿ ಅಶೋಕ್ ಹೂಗಾರ್, ಮಹೇಶ್ ಸುಬೇದಾರ, ಮಹಾಂತೇಶ ಜಮಾದಾರ್, ಎ.ಎಸ್. ಗುಣಾರಿ, ಸಂತೋಷ್ ಮನಗೊಂಡ, ಪಿಡ್ಡಪ್ಪ ಜಾಲಗಾರ, ಕರೆಪ್ಪ ಕರಗೊಂಡ, ಸಿದ್ದು ಎಸ್.ಎಲ್., ಕನಸು ಸೇವಾ ಸಂಸ್ಥೆಯ ಸಂತೋಷ್ ಎಸ್.ಕೆ., ಶರಣಗೌಡ ಪಾಟೀಲ್, ಉಮಾಪತಿ ಪಾಟೀಲ್ ಸೇರಿದಂತೆ ಹಲವು ರೈತ ಮುಖಂಡರು ಭಾಗವಹಿಸಿದ್ದರು.

ರೈತರ ನ್ಯಾಯಯುತ ಬೇಡಿಕೆಗಳಿಗೆ ಬೆಂಬಲ ಸೂಚಿಸಿ ಮಂಗಳಮುಖಿಯರೂ ಪ್ರತಿಭಟನೆಯಲ್ಲಿ ಪಾಲ್ಗೊಂಡು ಹೋರಾಟಕ್ಕೆ ಸಾಥ್ ನೀಡಿದರು. ಸ್ವಾಮಿನಾಥನ್ ವರದಿ ಜಾರಿ ಹಾಗೂ ಕಬ್ಬಿಗೆ ಸೂಕ್ತ ಬೆಂಬಲ ಬೆಲೆ ನಿಗದಿ ಸೇರಿದಂತೆ ರೈತರ ಪ್ರಮುಖ ಬೇಡಿಕೆ ಈಡೇರುವ ವರೆಗೂ ಹೋರಾಟ ಮುಂದುವರಿಯಲಿದೆ. ಬಿಸಿಲಿನ ಕಾವಿನಂತೆ ಹೋರಾಟದ ಕಾವು ತೀವ್ರವಾಗ ತೊಡಗಿದೆ. ಕಲಬುರಗಿ ನಗರದ ಹೃದಯ ಭಾಗ ರಾಮಮಂದಿರ ವೃತ್ತದ ಮುಖಾಂತರವೇ ರಾಜ್ಯದ ಬೆಂಗಳೂರು ಸೇರಿ ಇತರ ಬಹುತೇಕ ಜಿಲ್ಲೆ ಹಾಗೂ ನಗರಗಳಿಗೆ ಸಂಪರ್ಕವಿದೆ. ಈ ವೃತ್ತದ ಮೂಲಕವೇ ಬಸ್ ಗಳು ಸಂಚರಿಸುತ್ತಿವೆ. ಅದಲ್ಲದೇ ವಿವಿಧ ಶಾಲಾ ಕಾಲೇಜುಗಳ ವಾಹನಗಳು ವೃತ್ತದಿಂದಲೇ ಸಂಚರಿಸುತ್ತವೆ. ಆದರೆ ಕಳೆದ ನಾಲ್ಕು ದಿನಗಳಿಂದ ಸಂಪೂರ್ಣ ಬಂದಾಗಿರುವುದರಿಂದ ಸಾರ್ವಜನಿಕರು ತೀವ್ರ ಬಡಿದಾಡುವಂತಾಗಿದೆ.

ಇದೇ ಕಾರಣಕ್ಕೆ ಪೊಲೀಸರು ಟೆಂಟ್ ಸ್ಥಳ ಒತ್ತಾಯಪೂರ್ವವಾಗಿ ಬಲ ಪ್ರಯೋಗಿಸಿ, 9ಕ್ಕೂ ಹೆಚ್ಚು ರೈತರನ್ನು ಬಂಧಿಸಿ ಹೋರಾಟ ಹತ್ತಿಕ್ಕಲು ಮುಂದಾಗಿದ್ದರು. ಆದರೆ ಇದಕ್ಕೆ ರೈತರು ತೀವ್ರ ವಿರೋಧ ವ್ಯಕ್ತಪಡಿಸಿ ಈಗ ಹೋರಾಟ ತೀವ್ರಗೊಳಿಸಿದ್ದು, ಜಿಲ್ಲಾಡಳಿತಕ್ಕೆ ದೊಡ್ಡ ಸವಾಲಾಗಿ ಪರಿಣಮಿಸಿದೆ.

# ರಷ್ಯಾ ತೈಲ ಖರೀದಿ: ಭಾರತ, ಚೀನಾ ಸೇರಿ ಐದು ದೇಶಗಳ ಮೇಲಿನ ಶೇ.100 ಸುಂಕ ರದ್ದು: ಟ್ರಂಪ್

**ವಾಷಿಂಗ್ಟನ್, ಅ.18:** ರಷ್ಯಾದಿಂದ ತೈಲ ಮತ್ತು ಅನಿಲವನ್ನು ಹೆಚ್ಚಿನ ಪ್ರಮಾಣದಲ್ಲಿ ಖರೀದಿಸುವ ಭಾರತ ಮತ್ತು ಚೀನಾ ಸೇರಿದಂತೆ ಐದು ದೇಶಗಳಿಂದ ತಾನು ಆಮದು ಮಾಡಿಕೊಳ್ಳುವ ಸರಕುಗಳ ಮೇಲಿನ ಶೇ 100ರಷ್ಟು ಸುಂಕವನ್ನು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ರದ್ದುಪಡಿಸಿದ್ದಾರೆ.



ಅಮೆರಿಕ ಮತ್ತು ಜಾಗತಿಕ ಮಾರುಕಟ್ಟೆಗಳಿಗೆ ಡೀಸೆಲ್ ಪೂರೈಕೆಗಾಗಿ ರಷ್ಯಾದೊಂದಿಗೆ ಒಪ್ಪಂದ ಮಾಡಿಕೊಂಡ ಕೆಲವೇ ದಿನಗಳ ನಂತರ, ಟ್ರಂಪ್ ಅವರು ಕಾರ್ಯಕಾರಿ ಆದೇಶಕ್ಕೆ ಸಹಿ ಮಾಡಿದ್ದಾರೆ.

'ಲಿಂಡ್ರೆ ಓ ಗ್ರಹಾಂ– ರಷ್ಯಾ ಮತ್ತು ಇರಾನ್ ಮೇಲಿನ ನಿರ್ಬಂಧಗಳ ಕಾಯ್ದೆ'ಯಡಿ ನಿರ್ದಿಷ್ಟ ನಿರ್ಬಂಧಗಳು, ನಿಷೇಧಗಳು ಮತ್ತು ಸುಂಕಗಳ ಅನ್ವಯ ವನ್ನು ರದ್ದುಗೊಳಿಸುತ್ತಿದ್ದೇನೆ. ಅಮೆರಿಕದ ರಾಷ್ಟ್ರೀಯಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು ಈ ಕ್ರಮ ಕೈಗೊಳ್ಳಲಾಗಿದೆ' ಎಂದು ಟ್ರಂಪ್ ತಿಳಿಸಿದ್ದಾರೆ.

'ಲಿಂಡ್'ನ ಓ ಗ್ರಹಾಂ' ಕಾಯ್ದೆಯು ಸೆಪ್ಟೆಂಬರ್ 18ರಂದು ಜಾರಿಗೊಂಡಿತ್ತು. ರಷ್ಯಾದಿಂದ ಪ್ರಮುಖವಾಗಿ ಇಂಧನ ಖರೀದಿಸುವ ಐದು ದೇಶಗಳ ಸರಕುಗಳ ಮೇಲೆ ಭಾರಿ ಸುಂಕ ಹೇರಲು ಈ ಕಾಯ್ದೆ ಟ್ರಂಪ್ ಅವರಿಗೆ ಅಧಿಕಾರ ನೀಡುತ್ತದೆ. ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರುಬಿಯೊ ಅವರು ಭಾರತಕ್ಕೆ ಭೇಟಿ ನೀಡುತ್ತಿರುವ ಬೆನ್ನಲ್ಲೇ ಈ ಆದೇಶ ಹೊರಬಿದ್ದಿದೆ.

**ಕಳವಳ ವ್ಯಕ್ತಪಡಿಸಿದ್ದ ಭಾರತ:**

ಕಳೆದ ತಿಂಗಳು ನ್ಯೂಯಾರ್ಕ್‌ನಲ್ಲಿ ನಡೆದ ವಿಶ್ವಸಂಸ್ಥೆಯ ಸಾಮಾನ್ಯ ಸಭೆಯ ಸಂದರ್ಭದಲ್ಲಿ ರುಬಿಯೊ ಅವರೊಂದಿಗೆ ನಡೆಸಿದ ಸಭೆಯಲ್ಲಿ, ಭಾರತದ ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ ಅವರು ಗ್ರಹಾಂ ಕಾಯ್ದೆ ಬಗ್ಗೆ ಕಳವಳ ವ್ಯಕ್ತಪಡಿಸಿದ್ದರು. ಪಶ್ಚಿಮ ಏಷ್ಯಾದ ದೇಶಗಳು ಮತ್ತು ರಷ್ಯಾ ಪೂರೈಸುವ ಕಚ್ಚಾ ತೈಲವನ್ನು ಸಂಸ್ಕರಿಸಲು ಭಾರತೀಯ ತೈಲ ಸಂಸ್ಕರಣಾ ಘಟಕಗಳನ್ನು ಹೆಚ್ಚಾಗಿ ವಿನ್ಯಾಸಗೊಳಿಸಲಾಗಿದೆ ಎಂಬುದನ್ನು ಜೈಶಂಕರ್ ಅವರು ರುಬಿಯೊಗೆ ಮನವರಿಕೆ ಮಾಡಿಕೊಟ್ಟಿದ್ದರು ಎಂದು ಮೂಲಗಳು ಹೇಳಿವೆ.

# ಫ್ರಾನ್ಸ್‌ನಲ್ಲಿ ಹಣದುಬ್ಬರ: ಬೀದಿಗಿಳಿದ ಜನಸಾಮಾನ್ಯರು ವಿಶ್ವಯುದ್ಧದಲ್ಲೂ ಪಾರಾಗಿದ್ದ ಅಮೋಗ್ಸ್ ಟೌನ್‌ಹಾಲ್ ಧ್ವಂಸ

**ಪ್ಯಾರಿಸ್, ಅ.18:** ಫ್ರಾನ್ಸ್‌ನಲ್ಲಿ ಪೊಲೀಸರು ಮತ್ತು ಪ್ರತಿಭಟನಾಕಾರರ ನಡುವಿನ ಘರ್ಷಣೆಗಳು, ಬೃಹತ್ ಲೂಟಿ ಮತ್ತು ಹಲವಾರು ಬೆಂಕಿ ಹಚ್ಚುವ ಘಟನೆಗಳು ನಡೆದಿವೆ. ಏರುತ್ತಿರುವ ಹಣದುಬ್ಬರವನ್ನು ವಿರೋಧಿಸಿ ದೇಶಾದ್ಯಂತ ನಡೆದ ಪ್ರತಿಭಟನಾ ಮೆರವಣಿಗೆಗಳು ತೀವ್ರಗೊಂಡಿದ್ದು ಹಿಂಸಾಚಾರಕ್ಕೆ ತಿರುಗಿದೆ.



ವಾರಗಳ ಕಾಲ ನಡೆದ ವಿದ್ಯಾರ್ಥಿಗಳ ಪ್ರತಿಭಟನೆಗಳ ನಂತರ ವ್ಯಾಪಕವಾದ ಅಶಾಂತಿ ಮತ್ತು 6 ತಿಂಗಳ ಅವಧಿಯಲ್ಲಿ ಅಧ್ಯಕ್ಷ ಎಮ್ಯಾನುಯೆಲ್ ಮ್ಯಾಕ್ರನ್ ಅವರನ್ನು ಬದಲಿಸಲು ಚುನಾವಣೆಗೆ ದೇಶ ಸಿದ್ಧವಾಗುತ್ತಿದ್ದಂತೆ ರಾಜಕೀಯ ಅನಿಶ್ಚಿತತೆಯನ್ನು ಇನ್ನಷ್ಟು ಹೆಚ್ಚಿಸುತ್ತಿದೆ. ಪ್ಯಾರಿಸ್‌ನ ಇಡೀ ಬೀದಿಗಳು "ಧ್ವಂಸಗೊಂಡಿವೆ" ಎಂದು ನಗರದ ಮೇಯರ್ ಎಮ್ಯಾನುಯೆಲ್ ಗ್ರೆಗೊಯಿರ್ ಹೇಳಿದ್ದಾರೆ. ಮುಖವಾಡ ಧರಿಸಿದ ಯುವಕರ ಗುಂಪುಗಳು ನಿಲ್ಲಿಸಿದ್ದ ಕಾರುಗಳಿಗೆ ಬೆಂಕಿ ಹಚ್ಚಿ ಅನೇಕ ಅಂಗಡಿಗಳನ್ನು ಧ್ವಂಸಗೊಳಿಸಿದವು.

ತೀವ್ರ ಹಿಂಸಾಚಾರ"ವನ್ನು ಈ ಹಿಂದೆ ಖಂಡಿಸಿದ ಫ್ರೆಂಚ್ ಪ್ರಧಾನಿ ಸೆಬಾಸ್ಟಿಯನ್ ಲೆಕೋರ್ನು ಶನಿವಾರ ತಡರಾತ್ರಿ 1,200 ಜನರನ್ನು ಬಂಧಿಸಲಾಗಿದೆ ಮತ್ತು 150 ಪೊಲೀಸ್ ಅಧಿಕಾರಿಗಳು ಗಾಯಗೊಂಡಿದ್ದಾರೆ. ಪ್ರತಿಭಟನೆಯಲ್ಲಿ 550,000 ಜನರು ಭಾಗವಹಿಸಿದ್ದರು. ಜೀವನ ವೆಚ್ಚದ ಕುರಿತು ರಾಜಧಾನಿ ಮತ್ತು ಇತರ ನಗರಗಳಲ್ಲಿ ನಡೆದ ಪ್ರತಿಭಟನಾ ಮೆರವಣಿಗೆಗಳಲ್ಲಿ ಹಿಂಸಾಚಾರ ಪ್ರಾರಂಭವಾಯಿತು. ಭಾಗವಹಿಸಿದ ಸಿಜಿಟಿ ಒಕ್ಕೂಟ 800,000 ಜನರು ಜೊತೆಯಲ್ಲಿದ್ದರು ಎಂದು ಫ್ರಾನ್ಸ್‌ನ ಆಂತರಿಕ ಸಚಿವಾಲಯ ಹೇಳಿದೆ.

ಪ್ರತಿಭಟನಾಕಾರರು ಗುಂಡು ಹಾರಿಸಿದಾಗ ಪೊಲೀಸರು ಅಶ್ರುವಾಯು ಮತ್ತು ಜಲ ಫಿರಂಗಿಗಳನ್ನು ಬಳಸಿದರು. ಈ ಪ್ರತಿಭಟನಾ ಮೆರವಣಿಗೆಯಲ್ಲಿ ದಕ್ಷಿಣದ ಸೇಂಟ್–ಎಟಿಯೆನ್ ನಗರದಲ್ಲಿ ಜನಸಂದಣಿ ನಿಯಂತ್ರಣ ಗ್ರೆನೇಡ್‌ನಿಂದ 17 ವರ್ಷದ ಬಾಲಕನ ಬಲಗೈ ಛಿದ್ರಗೊಂಡಿತು.

**ಹಲವು ನಗರಗಳಲ್ಲಿ ಲೂಟಿ**

ಪ್ರತಿಭಟನೆಗಳ ಸಮಯದಲ್ಲಿ, ಯುವಕರ ಗುಂಪುಗಳು ನಗರದ ಬೀದಿಗಳಲ್ಲಿ ಬೆಂಕಿ ಹಚ್ಚುತ್ತಾ ಮತ್ತು ಮುಚ್ಚಿದ ಅಂಗಡಿಗಳ ಮೇಲೆ ದಾಳಿ ಮಾಡಿ ಒಳಗೆ ನುಗ್ಗಿ ದರೋಡೆ ಮಾಡಿವೆ. ಪ್ಯಾರಿಸ್, ಮಾರ್ಸಿಲ್ಲೆ, ನೈಸ್, ನಾಂಟೆಸ್, ಬೋರ್ಡೆಕ್ಸ್, ಲಿಮೋಜಸ್, ಲಿಲ್ಲೆ, ಟೌಲೌಸ್ ಮತ್ತು ಸ್ಟ್ರಾಸ್‌ಬರ್ಗ್‌ನಲ್ಲಿ ಹಲವಾರು ಅಂಗಡಿಗಳು – ಸೂಪರ್‌ಮಾರ್ಕೆಟ್‌ಗಳು, ಔಷಧಾಲಯಗಳು, ಐಷಾರಾಮಿ ಅಂಗಡಿಗಳು, ಬಟ್ಟೆ ಚಿಲ್ಲರೆ ವ್ಯಾಪಾರಿ ಮಳಿಗೆಗಳು, ಸೌಂದರ್ಯವರ್ಧಕ ಮಾರಾಟಗಾರರ ಮಳಿಗೆಗಳು ಮತ್ತು ಗ್ರಾಹಕ ಎಲೆಕ್ಟ್ರಾನಿಕ್ಸ್ ಅಂಗಡಿಗಳಲ್ಲಿ ಲೂಟಿ ನಡೆದಿದೆ.

# ಪಾಕ್‌ನಲ್ಲಿ 200 ವರ್ಷ ಹಳೆಯ ಹಿಂದೂ ದೇವಾಲಯ ಧ್ವಂಸಕ್ಕೆ ಯತ್ನ ವಾಣಿಜ್ಯ ಸಂಕೀರ್ಣ ನಿರ್ಮಾಣ ವಿರೋಧಿಸಿ ಸ್ಥಳೀಯರ ಪ್ರತಿಭಟನೆ

**ಪೇಶಾವರ, ಅ.18:** ಪಾಕಿಸ್ತಾನದ ವಾಯುವ್ಯ ಖೈಬರ್ ಪಖ್ತುಂಖ್ವಾ ಪ್ರಾಂತ್ಯದ ಡೇರಾ ಇಸ್ಮೆಲ್ ಖಾನ್ ಜಿಲ್ಲೆಯಲ್ಲಿರುವ ಸುಮಾರು 200 ವರ್ಷಗಳಷ್ಟು ಹಳೆಯದಾದ 'ರಾಮ ಲೀಲಾ ದೇವಾಲಯ'ವನ್ನು ಕೆಡವಿ, ವಾಣಿಜ್ಯ ಸಂಕೀರ್ಣ (ಪ್ಲಾಜಾ) ನಿರ್ಮಿಸಲು ಯತ್ನಿಸಿದ ಘಟನೆ ನಡೆದಿದೆ. ಈ ಯತ್ನದ ವಿರುದ್ಧ ಹಿಂದೂ ಸಮುದಾಯದ ಮುಖಂಡರು ಹಾಗೂ ನಾಗರಿಕ ಸಮಾಜದ ಕಾರ್ಯಕರ್ತರು ತೀವ್ರ ಪ್ರತಿಭಟನೆ ನಡೆಸಿದ ಹಿನ್ನೆಲೆಯಲ್ಲಿ, ಸ್ಥಳೀಯ ಆಡಳಿತವು ದೇವಾಲಯವನ್ನು ತನ್ನ ವಶಕ್ಕೆ ಪಡೆದುಕೊಂಡು ಅಧಿಕೃತವಾಗಿ ಬೀಗಮುದ್ರೆ ಹಾಕಿದೆ.



ಡೇರಾ ಇಸ್ಮೆಲ್ ಖಾನ್ ನಗರದ ರಹೀಮ್ ಬಜಾರ್‌ನಲ್ಲಿರುವ ಈ ಐತಿಹಾಸಿಕ ಕಟ್ಟಡವನ್ನು ಕೆಡವಲು ಕಾರ್ಮಿಕರು ಯತ್ನಿಸುತ್ತಿರುವುದನ್ನು ಕಂಡು ಸ್ಥಳೀಯ ನಿವಾಸಿಗಳು ತಕ್ಷಣ ಮಧ್ಯಪ್ರವೇಶಿಸಿ ನಿರ್ಮಾಣ ಕಾಮಗಾರಿಯನ್ನು ತಡೆದರು. ಸ್ಥಳದಲ್ಲಿದ್ದ ವ್ಯಕ್ತಿಯೊಬ್ಬ ತನಗೆ ಈ ಕಟ್ಟಡವನ್ನು ಕೆಡವಲು ಗುತ್ತಿಗೆ ನೀಡಲಾಗಿದೆ ಎಂದು ಹೇಳಿಕೊಂಡಿದ್ದನು. ಇದರ ಬೆನ್ನಲ್ಲೇ ಹಿಂದೂ ಸಮುದಾಯದ ನಾಯಕರು ಮತ್ತು ಸಾಮಾಜಿಕ ಕಾರ್ಯಕರ್ತರು ಸಭೆ ನಡೆಸಿ, ಈ ಆಸ್ತಿಯ ಮಾಲೀಕತ್ವ ಹಾಗೂ ವಾಣಿಜ್ಯ ನಿರ್ಮಾಣದ ಕಾನೂನುಬದ್ಧತೆಯ ಕುರಿತು ಸಮಗ್ರ ತನಿಖೆ ನಡೆಸಬೇಕೆಂದು ಒತ್ತಾಯಿಸಿದರು. ಅಲ್ಲದೆ, ಈ ವಿಚಾರವನ್ನು ಪಾಕಿಸ್ತಾನದ ರಾಷ್ಟ್ರೀಯ ಅಸೆಂಬ್ಲಿಯಲ್ಲಿ ಪ್ರಸ್ತಾಪಿಸುವಂತೆ ಜನಪ್ರತಿನಿಧಿಗಳನ್ನು ಆಗ್ರಹಿಸಿದರು.

ಈ ರಾಮಲೀಲಾ ದೇವಾಲಯವು ಪಾಕಿಸ್ತಾನದ 'ಇವಾಕ್ಯೂ ಟ್ರಸ್ಟ್ ಪ್ರಾಪರ್ಟಿ ಬೋರ್ಡ್' ಗುರುತಿಸಿರುವ 400 ಸಾಂಸ್ಕೃತಿಕ ಪರಂಪರೆಯ ಕಟ್ಟಡಗಳ ಪಟ್ಟಿಯಲ್ಲಿದೆ. 1947 ರ ವಿಭಜನೆಯ ನಂತರ ಭಾರತಕ್ಕೆ ತೆರಳಿದವರು ಬಿಟ್ಟುಹೋದ ಮತ್ತು ಅಲ್ಪಸಂಖ್ಯಾತ ಧಾರ್ಮಿಕ ಸಮುದಾಯಗಳ ಆಸ್ತಿಗಳನ್ನು ನಿರ್ವಹಿಸುವ ಜವಾಬ್ದಾರಿಯನ್ನು ಈ ಇಟಿಪಿಬಿ ಹೊಂದಿದ್ದು, ಹಿಂದೂ ಮತ್ತು ಸಿಖ್ ಧಾರ್ಮಿಕ ಸ್ಥಳಗಳನ್ನು ಇದು ಮೇಲ್ವಿಚಾರಣೆ ಮಾಡುತ್ತದೆ.

ಆಲ್ ಪಾಕಿಸ್ತಾನ್ ಹಿಂದೂ ರೈಟ್ಸ್ ಮೂವ್ಮೆಂಟ್ ಅಧ್ಯಕ್ಷ ಹಾರೂನ್ ಸರಾಬ್ ಡಯಾಲ್ ಅವರು ಮಾತನಾಡಿ, ಪ್ರಾಂತ್ಯದಲ್ಲಿ ಜಾರಿಯಲ್ಲಿರುವ ರಾಜ್ಯಪಾಲರ ಆಡಳಿತದ ಅವಧಿಯಲ್ಲಿ ಹಿಂದೂ ಧಾರ್ಮಿಕ ಸ್ಥಳಗಳಿಗೆ ಸೂಕ್ತ ರಕ್ಷಣೆ ಸಿಗುವ ಭರವಸೆ ವ್ಯಕ್ತಪಡಿಸಿದ್ದಾರೆ. ಕಾನೂನು ಮತ್ತು ಸುವ್ಯವಸ್ಥೆಯ ಕುಸಿತದ ಕಾರಣ ನೀಡಿ ಪಾಕಿಸ್ತಾನ ಸರ್ಕಾರವು ಅ.11 ರಂದು ಖೈಬರ್ ಪಖ್ತುಂಖ್ವಾದಲ್ಲಿ ರಾಜ್ಯಪಾಲರ ಆಡಳಿತ ಹೇರಿದೆ. ಇದರೊಂದಿಗೆ, 2013 ರಿಂದ 2026 ರ ನಡುವೆ ಅಕ್ರಮವಾಗಿ ವಶಪಡಿಸಿಕೊಂಡ ಅಥವಾ ಮಾರಾಟ ಮಾಡಲಾದ ಧಾರ್ಮಿಕ ಆಸ್ತಿಗಳ ಕುರಿತು ಕೂಲಂಕಷ ತನಿಖೆ ನಡೆಸಬೇಕೆಂದು ಡಯಾಲ್ ಆಗ್ರಹಿಸಿದ್ದಾರೆ.

ಪಾಕಿಸ್ತಾನದ ಮಾನವ ಹಕ್ಕುಗಳ ಆಯೋಗವು ಇತ್ತೀಚೆಗೆ 'ಸ್ಯಾಂಕ್ಚುರಿ ಡಿನೈಡ್: ಫ್ರೀಡಮ್ ಆಫ್ ರಿಲಿಜನ್ ಆರ್ ಬಿಲೀಫ್ ಇನ್ 2025/26' ಎಂಬ ವರದಿ ಬಿಡುಗಡೆ ಮಾಡಿದ್ದು, ದೇಶದಲ್ಲಿ ಧಾರ್ಮಿಕ ಅಲ್ಪಸಂಖ್ಯಾತರು ನಿರಂತರವಾಗಿ ಹಕ್ಕುಗಳ ಉಲ್ಲಂಘನೆ, ಅಪಹರಣ ಮತ್ತು ಮತಾಂತರಗಳಂತಹ ಸವಾಲುಗಳನ್ನು ಎದುರಿಸುತ್ತಿದ್ದಾರೆ ಎಂದು ಕಳವಳ ವ್ಯಕ್ತಪಡಿಸಿದೆ.

# ಯೆಮೆನ್‌ನ ಧಮರ್ ಪ್ರಾಂತ್ಯದಲ್ಲಿ ವೈಮಾನಿಕ ದಾಳಿ: ಮೂವರು ಮಕ್ಕಳ ಸಾವು

**ದುಬೈ, ಅ.18:** ಯೆಮೆನ್‌ನ ನೈರುತ್ಯ ಭಾಗದ ಧರ್ಮಾ ಪ್ರಾಂತ್ಯದಲ್ಲಿ ನಡೆದ ವೈಮಾನಿಕ ದಾಳಿಯಲ್ಲಿ ಮೂವರು ಮಕ್ಕಳು ಮೃತಪಟ್ಟಿದ್ದು, ಅನೇಕರು ಗಾಯಗೊಂಡಿದ್ದಾರೆ. ದಾನ್ ಅನೆಸ್ ಜಿಲ್ಲೆಯ ಅಲ್–ಅರ್ ಗ್ರಾಮದ ಮೇಲೆ ಇತ್ತೀಚೆಗೆ ಈ ದಾಳಿ ನಡೆದಿದೆ. ಈ ದಾಳಿಯನ್ನು ಸೌದಿ ಅರೇಬಿಯಾ ನಡೆಸಿದೆ' ಎಂದು ಇರಾನ್ ಬೆಂಬಲಿತ ಹೌತಿಗಳು ಆರೋಪಿಸಿದ್ದಾರೆ.

ಹೌತಿಗಳು ಮತ್ತು ಯೆಮೆನ್ ಮಿತ್ರರಾಷ್ಟ್ರಗಳ ನಡುವಿನ ಘರ್ಷಣೆ ತೀವ್ರಗೊಂಡಿದೆ. ಸೆಪ್ಟೆಂಬರ್‌ನಲ್ಲಿ ಸಂಘರ್ಷವು ಮತ್ತೆ ಆರಂಭವಾದಾಗಿನಿಂದ ಈವರೆಗೆ ತಮ್ಮ ಪ್ರದೇಶಗಳಲ್ಲಿ 124 ಮಂದಿ ಮೃತಪಟ್ಟಿರುವುದಾಗಿ ಹೂಥಿ ಬಂಡುಕೋರ ಸಂಘಟನೆ ನಿಯಂತ್ರಣದ ಆರೋಗ್ಯ ಸಚಿವಾಲಯ ತಿಳಿಸಿದೆ.

**ಛಾಯಾಗ್ರಾಹಕಿಗೆ ಶಸ್ತ್ರಚಿಕಿತ್ಸೆ:**

ವೆಸ್ಟ್ ಬ್ಯಾಂಕ್‌ನಲ್ಲಿ ಇಸ್ರೇಲಿಗರಿಂದ ಹಲ್ಲೆಗೊಳಗಾದ, 'ವಾಷಿಂಗ್ಟನ್ ಪೋಸ್ಟ್' ಪತ್ರಿಕೆಯ ಛಾಯಾಗ್ರಾಹಕಿ ಹೈಡಿ ಲೆವಿನ್ ಅವರ ಎಡಗೈ ಬೆರಳಿಗೆ ಗಾಯವಾಗಿದ್ದು, ಶನಿವಾರ ಶಸ್ತ್ರಚಿಕಿತ್ಸೆ ನಡೆಸಲಾಗಿದೆ.

ರೆ ಇಸ್ರೇಲಿಗರ ವೆಸ್ಟ್ ಬ್ಯಾಂಕ್ನಾದ್ಯಂತ ಪ್ಯಾಲೇಸ್ಟಿನಿಯನ್ ಹಳ್ಳಿಗಳ ಮೇಲೆ ಇಸ್ರೇಲಿಗರು ಶುಕ್ರವಾರ ದಾಳಿ ಮಾಡಿದ್ದರು. ಕಾರುಗಳು ಮತ್ತು ಅಲೀವ್ ಮರಗಳಿಗೆ ಬೆಂಕಿ ಹಚ್ಚಿದ್ದರು.




# 2010ರ ಆತ್ಮಹತ್ಯೆ ಪ್ರಕರಣ: ನಟಿ ರಾಖಿ ಸಾವಂತ್ ವಿರುದ್ಧ ಜಾಮೀನುರಹಿತ ವಾರಂಟ್

**ಝಾನ್ಸಿ, ಅ.18:** 2010ರಲ್ಲಿ ನಡೆದ ಆತ್ಮಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಬಾಲಿವುಡ್ ನಟಿ ರಾಖಿ ಸಾವಂತ್ ವಿರುದ್ಧ ಉತ್ತರ ಪ್ರದೇಶದ ಝಾನ್ಸಿ ನ್ಯಾಯಾಲಯ ಜಾಮೀನುರಹಿತ ವಾರಂಟ್ ಹೊರಡಿಸಿದೆ. ಪದೇಪದೆ ವಿಚಾರಣೆಗೆ ಹಾಜರಾಗಲು ವಿಫಲವಾದ ಹಿನ್ನೆಲೆಯಲ್ಲಿ ನ್ಯಾಯಾಲಯ ಈ ಕ್ರಮ ಕೈಗೊಂಡಿದೆ.

ಜಿಲ್ಲಾ ಸರ್ಕಾರಿ ವಕೀಲರು ಮೃದುಲ್ ಕಾಂತ್ ಶ್ರೀವಾಸ್ತವ ನೀಡಿದ ಮಾಹಿತಿಯ ಪ್ರಕಾರ, ಶುಕ್ರವಾರ ಫಾಸ್ಟ್ ಟ್ರ್ಯಾಕ್ ನ್ಯಾಯಾಲಯದ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು ವಾರಂಟ್ ಹೊರಡಿಸಿದ್ದಾರೆ. ಪ್ರಕರಣದ ಮುಂದಿನ ವಿಚಾರಣೆಯನ್ನು ಡಿ.1ಕ್ಕೆ ನಿಗದಿಪಡಿಸಲಾಗಿದೆ.



ರಾಖಿ ಸಾವಂತ್ ನಿರೂಪಿಸುತ್ತಿದ್ದ ರಾಖಿ ಕಾ ಇನ್ಸಾಫ್ ಎಂಬ ದೂರದರ್ಶನ ಕಾರ್ಯಕ್ರಮಕ್ಕೆ ಸಂಬಂಧಿಸಿದ ಪ್ರಕರಣ ಇದಾಗಿದೆ. ಝಾನ್ಸಿಯ ಹನ್ಸಾರಿ ಪ್ರೇಮ್‌ನಗರ ಪ್ರದೇಶದ ನಿವಾಸಿ ಲಕ್ಷ್ಮಣ್ ಅಹಿರ್ವಾರ್ 2010ರ ನವೆಂಬರ್ 10ರಂದು ಆತ್ಮಹತ್ಯೆ ಮಾಡಿಕೊಂಡಿದ್ದರು ಎನ್ನಲಾಗಿದೆ.

ಲಕ್ಷ್ಮಣ್ ಮತ್ತು ಅವರ ಪತ್ನಿ ಅನಿತಾ ನಡುವಿನ ವೈವಾಹಿಕ ಕಲಹದ ಹಿನ್ನೆಲೆಯಲ್ಲಿ ಇಬ್ಬರನ್ನೂ ಕಾರ್ಯಕ್ರಮಕ್ಕೆ ಆಹ್ವಾನಿಸಲಾಗಿತ್ತು. ಕಾರ್ಯಕ್ರಮದ ಸಂದರ್ಭದಲ್ಲಿ ರಾಖಿ ಸಾವಂತ್ ತಮ್ಮ ಮಗನ ವಿರುದ್ಧ ಅವಮಾನಕಾರಿ ಹಾಗೂ ಆಕ್ಷೇಪಾರ್ಹ ಭಾಷೆ ಬಳಸಿದ್ದರು ಎಂದು ಲಕ್ಷ್ಮಣ್ ಅವರ ತಾಯಿ ಸಾವಿತ್ರಿ ಆರೋಪಿಸಿದ್ದಾರೆ.

ತಮ್ಮ ಮಗನಿಗೆ ಕಾರ್ಯಕ್ರಮದಲ್ಲಿ ಅವಮಾನ ಮಾಡಲಾಗಿದೆ ಎಂದು ಆರೋಪಿಸಿ ಸಾವಿತ್ರಿ ಅವರು ಝಾನ್ಸಿಯ ಪ್ರೇಮ್ ನಗರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದರು. ಈ ದೂರಿನ ಆಧಾರದಲ್ಲಿ ಪ್ರಕರಣದ ವಿಚಾರಣೆ ಮುಂದುವರಿದಿದೆ. ಪ್ರಕರಣಕ್ಕೆ ಸಂಬಂಧಿಸಿದಂತೆ ರಾಖಿ ಸಾವಂತ್ ಪದೇ ಪದೇ ನ್ಯಾಯಾಲಯಕ್ಕೆ ಹಾಜರಾಗದ ಹಿನ್ನೆಲೆಯಲ್ಲಿ ಇದೀಗ ಜಾಮೀನು ರಹಿತ ವಾರಂಟ್ ಹೊರಡಿಸಲಾಗಿದೆ.

# ಡಿ.16ರಂದು ಗೋವಾದಲ್ಲಿ ಇಂಡಿಯನ್ ಪ್ರೀಮಿಯರ್ ಲೀಗ್ ಮಿನಿ ಹರಾಜು

**ಮುಂಬಯಿ, ಅ.18:** ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) 2027ರ ಮಿನಿ ಹರಾಜು ಡಿಸೆಂಬರ್ 16ರಂದು ಗೋವಾದಲ್ಲಿ ನಡೆಯಲಿದೆ ಎಂದು ಬಿಸಿಸಿಐ ಕಾರ್ಯದರ್ಶಿ ದೇವಜಿತ್ ಸೈಕಿಯಾ ತಿಳಿಸಿದ್ದಾರೆ.




ಶನಿವಾರ ಮಾಧ್ಯಮಗಳ ಜತೆ ಮಾತನಾಡಿದ ಅವರು, ಕಳೆದ ನಾಲ್ಕು ವರ್ಷಗಳಲ್ಲಿ ಇದೇ ಮೊದಲ ಬಾರಿಗೆ ಹರಾಜು ಪ್ರಕ್ರಿಯೆಯು ಭಾರತದಲ್ಲಿ ನಡೆಯುತ್ತಿದೆ. ಕಳೆದ ಮೂರು ವರ್ಷಗಳಲ್ಲಿ ಈ ಹರಾಜು ದುಬೈ (2023), ಜೆಡ್ಡಾ (2024) ಮತ್ತು ಅಬುಧಾಬಿಯಲ್ಲಿ (2025) ನಡೆದಿತ್ತು; ಇದೀಗ ಮತ್ತೆ ಭಾರತಕ್ಕೆ ಮರಳಿದೆ.

ಈ ಬೆಳವಣಿಗೆಯೊಂದಿಗೆ, ಬೆಂಗಳೂರಿನಲ್ಲಿ ಭಾರತ ಮತ್ತು ಶ್ರೀಲಂಕಾ ನಡುವೆ ನಡೆಯಲಿರುವ ಎರಡನೇ ಏಕದಿನ ಪಂದ್ಯದ ದಿನದಂದೇ ಈ ಹರಾಜು ಪ್ರಕ್ರಿಯೆಯೂ ನಡೆಯಲಿದೆ. ಏಕದಿನ ಸರಣಿಯು ದೆಹಲಿಯಲ್ಲಿ ಪ್ರಾರಂಭವಾಗಲಿದ್ದು, ಅಂತಿಮ ಪಂದ್ಯವು ಅಹಮದಾಬಾದ್‌ನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ನಡೆಯಲಿದೆ.

ಐಪಿಎಲ್‌ನ ಎಲ್ಲ ಹತ್ತು ಫ್ರಾಂಚೈಸಿಗಳು, ತಾವು ಉಳಿಸಿಕೊಂಡ ಮತ್ತು ಕೈಬಿಟ್ಟ ಆಟಗಾರರ ಅಂತಿಮ ಪಟ್ಟಿಯನ್ನು ನವೆಂಬರ್ 15ರೊಳಗೆ ಸಲ್ಲಿಸುವಂತೆ ಸೂಚಿಸಲಾಗಿದೆ. ಇಂಪ್ಯಾಕ್ಟ್ ಪ್ಲೇಯರ್' ನಿಯಮದ ಬಗ್ಗೆಯೂ ಬಿಸಿಸಿಐ ಪರಿಶೀಲನೆ ನಡೆಸುತ್ತಿದ್ದು, ಇತ್ತೀಚೆಗೆ ನಡೆದ ಆಡಳಿತ ಮಂಡಳಿ ಸಭೆಯಲ್ಲಿಯೂ ಈ ವಿಷಯ ಚರ್ಚೆಗೆ ಬಂದಿತ್ತು.

ಐಪಿಎಲ್ 2027ರ ಆವೃತ್ತಿಯಲ್ಲಿ ಆಸ್ಟ್ರೇಲಿಯಾದ ಆಟಗಾರರು ಭಾಗವಹಿಸುತ್ತಾರೆಯೇ ಎಂಬ ಬಗ್ಗೆ ಇನ್ನೂ ಸ್ಪಷ್ಟತೆ ಸಿಗಬೇಕಿದೆ. ಏಕೆಂದರೆ ಅವರ ಅಂತರರಾಷ್ಟ್ರೀಯ ವೇಳಾಪಟ್ಟಿ ಬಹಳ ಬಿಡುವಿಲ್ಲದಂತಿದೆ. ಮುಂದಿನ ವರ್ಷ, ಆಸ್ಟ್ರೇಲಿಯಾ ತಂಡವು ಐದು ಟೆಸ್ಟ್ ಪಂದ್ಯಗಳನ್ನು ಆಡಲು ಭಾರತಕ್ಕೆ ಪ್ರವಾಸ ಕೈಗೊಳ್ಳಲಿದ್ದು, ನಂತರ 'ಆಶಸ್' ಸರಣಿಗಾಗಿ ಯುಕೆಗೆ ಪ್ರಯಾಣಿಸಲಿದೆ.

ಐಪಿಎಲ್ ಆರಂಭವಾಗುವ ಮೊದಲು, ಪ್ಯಾಟ್ ಕಮಿನ್ಸ್, ಮಿಚೆಲ್ ಸ್ಟಾರ್ಕ್ ಮತ್ತು ಜೋಶ್ ಹೇಜಲ್‌ವುಡ್ ಅವರಂತಹ ಆಟಗಾರರು, ಮಾರ್ಚ್ 11 ರಿಂದ 15ರವರೆಗೆ ಮೆಲ್ಬೋರ್ನ್ ಕ್ರಿಕೆಟ್ ಗ್ರೌಂಡ್‌ನಲ್ಲಿ ನಡೆಯಲಿರುವ ಆಸ್ಟ್ರೇಲಿಯಾ ಮತ್ತು ಇಂಗ್ಲೆಂಡ್ ನಡುವಿನ 150ನೇ ವಾರ್ಷಿಕೋತ್ಸವದ ಟೆಸ್ಟ್ ಪಂದ್ಯದಲ್ಲಿ ಭಾಗವಹಿಸುವ ನಿರೀಕ್ಷೆಯಿದೆ.

# ಕರ್ನಾಟಕ ರಣಜಿ ತಂಡಕ್ಕೆ ಮಂಡ್ಯ ಲೋಕಪುರದ ಎಲ್.ಆರ್.ಕುಮಾರ್ ಆಯ್ಕೆ

ಬೆಂಗಳೂರು,ಅ.18: ಮಂಡ್ಯ ಜಿಲ್ಲಾ ಕೇಂದ್ರದಿಂದ ಹತ್ತು ಕಿ.ಮೀ. ದೂರದಲ್ಲಿರುವ ಲೋಕಪುರ ಎಂಬ ಪುಟ್ಟ ಗ್ರಾಮದ ಪ್ರತಿಭೆ ಎಲ್.ಆರ್. ಕುಮಾರ್ ತನ್ನ ನಿರಂತರ ಶ್ರಮದಿಂದ ಈ ಋತುವಿನ ರಣಜಿ ಕ್ರಿಕೆಟ್ ತಂಡಕ್ಕೆ ಆಯ್ಕೆಯಾಗಿದ್ದಾರೆ.



ಇದಕ್ಕೂ ಮುನ್ನ ಹಲವು ದೇಸಿ ಕ್ರಿಕೆಟ್ ಟ್ರೋಫಿಯಲ್ಲಿ ಭಾಗವಹಿಸಿ ಉತ್ತಮ ಪ್ರದರ್ಶನ ನೀಡಿದ್ದ ಕುಮಾರ್ ಸದ್ಯ ರಣಜಿ ಟ್ರೋಫಿಯಲ್ಲಿ ತಮ್ಮ ಪ್ರತಿಭೆ ಪ್ರದರ್ಶಿಸಲು ಸಜ್ಜಾಗಿದ್ದಾರೆ.

ಕ್ರಿಕೆಟಿಗ ಕುಮಾರ್ ಸಹೋದರಿ ಅಕ್ಷತಾ ಮಾತನಾಡಿ, ತಮ್ಮ ಸಹೋದರ ಕ್ರಿಕೆಟ್‌ನಲ್ಲಿ ಅಗಾಧ ಪ್ರತಿಭೆ ಹೊಂದಿದ್ದು, ಈ ಮೊದಲು ಗ್ರಾಮದಿಂದ ಮಂಡ್ಯ ನಗರ ಅಥವಾ ದೂರದೂರಿಗೆ ಕ್ರಿಕೆಟ್ ಅಭ್ಯಾಸಕ್ಕಾಗಿ ಶ್ರಮ ಪಟ್ಟು ಹೋಗುತ್ತಿದ್ದ, ಆತನ ಶ್ರಮಕ್ಕೆ ಪ್ರಸ್ತುತ ಫಲ ದೊರೆತಿದೆ ಎಂದು ಹೇಳಿದರು.

ಕುಮಾರ್ ಬಾಲ್ಯದ ಕ್ರಿಕೆಟ್ ತರಬೇತುದಾರ ನಂದಕಿಶೋರ್ ಮಾತನಾಡಿ, ಅಪಾರ ಪ್ರತಿಭೆ ಹೊಂದಿರುವ ಕುಮಾರ್ ಅವರಿಗೆ ರಣಜಿ ಕ್ರಿಕೆಟ್ ತಂಡದಲ್ಲಿ ಸ್ಥಾನ ದೊರೆತಿರುವುದು ಸಂತಸದ ಸಂಗತಿ. ಅವರ ಪರಿಶ್ರಮ ಹಾಗೂ ಸಾಮರ್ಥ್ಯಕ್ಕೆ ಇನ್ನೂ ಹೆಚ್ಚಿನ ಅವಕಾಶಗಳು ಲಭಿಸುವಂತಾಗಲಿ ಎಂದು ಹಾರೈಸಿದರು.




# ಹಾರ್ದಿಕ್ ಪಾಂಡ್ಯಗೆ ಬದಲಿ ಆಟಗಾರನ ಹುಡುಕಾಟ ಬೇಡ: ಗವಾಸ್ಕರ್ ಸಲಹೆ

**ಬೆಂಗಳೂರು, ಅ.18:** ಭಾರತ ಹಾಗೂ ವೆಸ್ಟ್ ಇಂಡೀಸ್ ನಡುವಿನ ಟಿ20 ಸರಣಿ ಅಂತ್ಯವಾಗಿದೆ. ಈ ಸರಣಿಯಲ್ಲಿ ಟೀಂ ಇಂಡಿಯಾದ ಬೌಲಿಂಗ್ ವಿಭಾಗ ಅಷ್ಟೊಂದು ಪರಿಣಾಮಕಾರಿಯಾಗಿರಲಿಲ್ಲ. ಅಲ್ಲದೆ ಪದೇಪದೆ ಗಾಯಕ್ಕೆ ತುತ್ತಾಗುತ್ತಿರುವ ಆಲ್‌ರೌಂಡರ್ ಹಾರ್ದಿಕ್ ಪಾಂಡ್ಯ ಬದಲಿಗೆ ಹೊಸ ಆಲ್‌ರೌಂಡರ್ ಹುಡುಕಾಟಕ್ಕಾಗಿ ಆಯ್ಕೆ ಮಂಡಳಿ ನಾನಾ ಕಸರತ್ತುಗಳನ್ನು ಮಾಡಿತು. ಆದರೆ ಯಶಸ್ವಿಯಾಗಲಿಲ್ಲ. ಇದನ್ನು ಗಮನಿಸಿರುವ ಭಾರತ ತಂಡದ ಮಾಜಿ ನಾಯಕ ಸುನಿಲ್ ಗವಾಸ್ಕರ್ ಸಲಹೆ ನೀಡಿದ್ದು, ಹಾರ್ದಿಕ್ ಪಾಂಡ್ಯರಂತಹ ಆಟಗಾರನಿಗೆ ಪರ್ಯಾಯ ಆಟಗಾರನನ್ನು ಹುಡುಕುವ ಬದಲು, ವಿಭಿನ್ನ ಜವಾಬ್ದಾರಿಗಳನ್ನು ನಿಭಾಯಿಸಬಲ್ಲ ಆಟಗಾರರಿಗೆ ಅವಕಾಶ ನೀಡಬೇಕು ಎಂದಿದ್ದಾರೆ. ಬೆಂಗಳೂರಿನಲ್ಲಿ ವೆಸ್ಟ್ ಇಂಡೀಸ್ – ಭಾರತ ಪಂದ್ಯದ ಸಂದರ್ಭದಲ್ಲಿ ಮಾತನಾಡಿ, ಬ್ಯಾಟಿಂಗ್ ಬಲ ಹೆಚ್ಚಿಸುವ ಭರದಲ್ಲಿ ಬೌಲಿಂಗ್ ವಿಭಾಗವನ್ನು ದುರ್ಬಲಗೊಳಿಸಬಾರದು. ಟಿ20 ಪಂದ್ಯಗಳಲ್ಲಿ ಭಾರತ ಕನಿಷ್ಠ ನಾಲ್ವರು ಪ್ರಮುಖ ಬೌಲರ್‌ಗಳೊಂದಿಗೆ ಕಣಕ್ಕಿಳಿಯಬೇಕು. ಹಾರ್ದಿಕ್ ಪಾಂಡ್ಯ ಬದಲಿಗೆ ಪರ್ಯಾಯ ಆಟಗಾರನ ಹುಡುಕುವ ಪ್ರಯತ್ನದಲ್ಲಿ ಭಾರತ ತಂಡ ಹೆಚ್ಚು ತಲೆಕೆಡಿಸಿಕೊಳ್ಳುತ್ತಿದೆ. ಹಾರ್ದಿಕ್ ಅವರ ಸಾಮರ್ಥ್ಯಕ್ಕೆ ಸರಿಸಾಟಿಯಾದ ಆಟಗಾರನನ್ನು ಹುಡುಕುವುದು ಸುಲಭವಲ್ಲ. ಹೀಗಾಗಿ ಅವರನ್ನೇ ಹೋಲುವ ಆಟಗಾರನನ್ನು ಹುಡುಕುವ ಬದಲು, ವಿಭಿನ್ನ ಜವಾಬ್ದಾರಿಗಳನ್ನು ನಿಭಾಯಿಸಬಲ್ಲ ಆಟಗಾರರಿಗೆ ಅವಕಾಶ ನೀಡಬೇಕು.



ಇದಕ್ಕೆ ಉದಾಹರಣೆಯಾಗಿ ಯುವ ಆಟಗಾರ ನಮನ್ ಧೀರ್ ಅವರ ಹೆಸರನ್ನು ಉಲ್ಲೇಖಿಸಿರುವ ಗವಾಸ್ಕರ್, ನಮನ್ ಧೀರ್ ಬೌಲಿಂಗ್‌ನಲ್ಲಿ ತಮ್ಮ ಕೆಲಸವನ್ನು ಅಚ್ಚುಕಟ್ಟಾಗಿ ನಿರ್ವಹಿಸುತ್ತಿದ್ದಾರೆ. ಬ್ಯಾಟಿಂಗ್‌ನಲ್ಲೂ ತಮ್ಮ ಸಾಮರ್ಥ್ಯ ತೋರಿಸುತ್ತಿದ್ದಾರೆ. ನಮನ್ ಧೀರ್ ಅವರಂತಹ ಬ್ಯಾಟರ್‌ಗಳು ಎರಡು ಅಥವಾ ಮೂರು ಓವರ್‌ಗಳನ್ನು ಬೌಲಿಂಗ್ ಮಾಡಬಲ್ಲರು. ಅಕ್ಷರ್ ಪಟೇಲ್ ಅವರಂತಹ ಆಟಗಾರರು ತಮ್ಮ ನಾಲ್ಕು ಓವರ್‌ಗಳನ್ನು ಪೂರ್ಣಗೊಳಿಸುವ ಸಾಮರ್ಥ್ಯ ಹೊಂದಿದ್ದಾರೆ ಎಂದು ಗವಾಸ್ಕರ್ ವಿವರಿಸಿದ್ದಾರೆ.ತಂಡದ ಬ್ಯಾಟಿಂಗ್ ಬಲವನ್ನು ಹೆಚ್ಚಿಸುವ ಉದ್ದೇಶದಿಂದ ಬೌಲಿಂಗ್ ಬಲವನ್ನು ಕಡಿಮೆ ಮಾಡಬಾರದು ಎಂದು ಎಚ್ಚರಿಸಿರುವ ಗವಾಸ್ಕರ್, 'ಎಂಟನೇ ಕ್ರಮಾಂಕದ ವರೆಗೂ ಬ್ಯಾಟಿಂಗ್‌ಗೆ ಆದ್ಯತೆ ನೀಡಿದಾಗ, ಬೌಲಿಂಗ್ ವಿಭಾಗ ದುರ್ಬಲವಾಗುತ್ತದೆ. ಇಂತಹ ಸಂದರ್ಭಗಳಲ್ಲೇ ತಂಡ ಸೋಲನ್ನು ಅನುಭವಿಸಬೇಕಾಗುತ್ತದೆ. ಅಲ್ಲದೆ, ತಂಡದ ಪ್ರಮುಖ ಸ್ಪಿನ್ನರ್‌ಗಳನ್ನು ಗುರುತಿಸಿ ಅವರಿಗೆ ನಿರಂತರ ಬೆಂಬಲ ನೀಡಬೇಕು. ಪ್ರತಿಯೊಂದು ಪಂದ್ಯದಲ್ಲೂ ಆಡುವ ಹನ್ನೊಂದರ ಬಳಗದಲ್ಲಿ ಅವಕಾಶ ಸಿಗದಿದ್ದರೂ, ತಂಡದ ದೊಡ್ಡ ಯೋಜನೆಯಲ್ಲಿ ತಮ್ಮ ಸ್ಥಾನ ಭದ್ರವಾಗಿದೆ ಎಂಬ ವಿಶ್ವಾಸವನ್ನು ಸ್ಪಿನ್ನರ್ಗಳಲ್ಲಿ ಮೂಡಿಸಬೇಕು. ಟಿ20 ಮಾದರಿಯಲ್ಲಿ ಸ್ಪಿನ್ನರ್‌ಗ ಳು ಬೇಗನೆ ಆತ್ಮವಿಶ್ವಾಸ ಕಳೆದುಕೊಳ್ಳುವ ಸಾಧ್ಯತೆ ಇರುವುದರಿಂದ ಅವರಿಗೆ ಸೂಕ್ತ ಬೆಂಬಲ ಅಗತ್ಯ ಎಂದು ಗವಾಸ್ಕರ್ ತಿಳಿಸಿದ್ದಾರೆ.